ಮುಂಗಾರು
ಶುಕ್ರವಾರ, ಜನವರಿ 30, 1987

ಕೇಂದ್ರದ ಯೋಜನೆಗಳು

ಕೇಂದ್ರ ಸರಕಾರವು ಘೋಷಿಸಿದ, ಆದರೆ ಕೆಲಸವು ಪ್ರಾರಂಭವಾಗದೆ ಇರುವ ಅಥವಾ ಕುಂಟುತ್ತಲೇ ನಡೆಯುತ್ತಿರುವ ಕೆಲವು ಕೇಂದ್ರ ಸರಕಾರದ ಯೋಜನೆಗಳ ವಿಚಾರವಾಗಿ ಇಬ್ಬರು ರಾಜ್ಯ ರಾಜಕಾರಣಿಗಳು ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದು ಕೊಂಡಿದ್ದಾರೆ.

ಮೊದಲನೆಯದಾಗಿ ಮಾಜಿ ಮುಖ್ಯಮಂತ್ರಿಗಳೂ ಕೇಂದ್ರ ಸರಕಾರದ ಮಾಜಿಸಚಿವರೂ ಆಗಿರುವ ವೀರೇಂದ್ರ ಪಾಟೀಲರು ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಮಂಗಳೂರಿನಲ್ಲಿ ಸ್ಥಾಪಿಸಲು ಪ್ರಸ್ತಾಪಿಸಲಾಗಿರುವ ತೈಲ ಶುದ್ಧೀಕರಣ ಕಾರ್ಖಾನೆಗೆ ಕೇಂದ್ರ ಪೆಟ್ರೋಲಿಯಂ ಖಾತೆಯ ಮಂಜೂರಾತಿಯನ್ನು ಬೇಗನೆ ಪ್ರಕಟಿಸಬೇಕೆಂದು ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಅವರು 1971ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಶಿಲಾನ್ಯಾಸ ಮಾಡಿದ ಬಳಿಕ ನನೆಗುದಿಗೆ ಬಿದ್ದಿರುವ ವಿಜಯನಗರ ಉಕ್ಕಿನ ಕಾರ್ಖಾನೆ ಯೋಜನೆ ಗಾದ ಗತಿಯನ್ನು ನೆನಪಿಸಿ ಕೊಟ್ಟಿದ್ದಾರೆ ಅದೇ ಗತಿ ಮಂಗಳೂರು ತೈಲಾಗಾರಕ್ಕೂ ಆದರೆ ಕರ್ನಾಟಕದ ಜನರಿಗೆ ತುಂಬಾ ನಿರಾಸೆಯಾಗುವುದೆಂದು ವೀರೇಂದ್ರ ಪಾಟೀಲರು ಹೇಳಿದ್ದಾರೆ. ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ ಪಕ್ಷದ ಸದಸ್ಯರೇ ಆಗಿದ್ದು ವೀರೇಂದ್ರ ಪಾಟೀಲರಿಗೆ ಇದಕ್ಕಿಂತ ಕಠಿಣವಾಗಿ ಪತ್ರವೊಂದನ್ನು ಪ್ರಧಾನ ಮಂತ್ರಿಯವರಿಗೆ ಬರೆಯುವುದು ಕಷ್ಟವಾಗಬಹುದು. ಆದರೂ ಈ ಪತ್ರಕ್ಕೆ ಸಾಕಷ್ಟು ಮಹತ್ವ ಇದೆ.

ರಾಜ್ಯದಲ್ಲಿನ ಕೇಂದ್ರ ಯೋಜನೆಗಳು ಕುಂಟುತ್ತಿವೆ ಎಂದು ಆರೋಪಿಸಿರುವ ಇನ್ನೊಬ್ಬ ರಾಜಕಾರಣಿ ಜನತಾ ಪಕ್ಷದ ಸಂಸತ್ ಸದಸ್ಯ ಹಾಗೂ ಮಾಜಿ ಸಚಿವರಾಗಿರುವ ವಿ. ಎಸ್. ಕೃಷ್ಣ ಅಯ್ಯರ್. ಪ್ರತಿಪಕ್ಷದಲ್ಲಿರುವದರಿಂದ ಅವರು ನೇರವಾಗಿ ಕೇಂದ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಪರ್ಯಾನುವ ಕೆನಾಲ್ ಹಾಗೂ ಮಂಗಳೂರಿನ ತೈಲಾಗಾರಗಳ ಪ್ರಸ್ತಾಪ ಒಟ್ಟಿಗೇ ಬಂದಿದ್ದರೂ ಇದೀಗ ಮೊನ್ನೆ ತಾನೇ ರಾಜೀವ ಗಾಂಧಿಯವರು ಹರ್ಯಾನದಲ್ಲಿ ಕೆನಾಲ್ ಸ್ಥಾಪನದ ಮಂಜೂರಾತಿಯನ್ನು ಮಾತ್ರ ಪ್ರಕಟಿಸಿದ್ದು ಮಂಗಳೂರಿನ ಸುದ್ದಿಯನ್ನೇ ಬಿಟ್ಟಿದ್ದಾರೆಂದು ಅಯ್ಯರ್ ಖಂಡಿಸಿದ್ದಾರೆ. ಹರ್ಯಾನದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಈ ಹೇಳಿಕೆ ನೀಡಿರಬೇಕೆಂದೂ ಸಂದೇಹಿಸಿದ್ದಾರೆ. ಬೆಂಗಳೂರು– ಮೈಸೂರು ಬ್ರಾಡ್ ಗೇಜ್ ರೈಲ್ವೇದಾರಿ, ಚಿತ್ರದುರ್ಗ–ರಾಯದುರ್ಗ ಹೊಸ ರೈಲು ಮಾರ್ಗ ರಚನೆ, ಬೆಂಗಳೂರು–ಜೋಲಾರ್ ಪೇಟೆ ವಿದ್ಯುದೀಕರಣ ಮೊದಲಾದವುಗಳಿಗೆ ಕೇಂದ್ರವು ಜುಜುಬಿ ಹಣ ನೀಡಿ ಸತಾಯಿಸುತ್ತಿದೆಯೆಂದು ಟೀಕಿಸಿದ್ದಾರೆ.

ಕರ್ನಾಟಕದ ಜನರಿಗೆ ಹೊಸ ಕೇಂದ್ರ ಯೋಜನೆಗಳಿಗೆ ಸಂಬಂಧ ಪಟ್ಟಂತೆ ಅನ್ಯಾಯವಾಗುತ್ತಿದೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇಲ್ಲಿನ ಯೋಜನೆಗಳ ವಿಚಾರದಲ್ಲಿ ಕೇಂದ್ರವು ಕಾಲೆಳೆಯುತ್ತಲೇ ಬಂದಿದೆ. ವಿಜಯ ನಗರ ಉಕ್ಕಿನ ಕಾರ್ಖಾನೆ, ಮಂಗಳೂರು ತೈಲಾಗಾರ ಹಾಗೂ ಬೆಂಗಳೂರು ಮೈಸೂರು ಲೈನು ಪರಿವರ್ತನೆ ಎಲ್ಲರಿಗೂ ಕಾಣಿಸುವಂತಹ, ರಾಜ್ಯದ ರಾಜಕಾರಣಿಗಳ ಪೈಕಿ ಅನೇಕರು ಚರ್ಚಿಸುವಂತಹ ವಿಚಾರವಾದರೆ ಕರಾವಳಿಯ ಎರಡು ಜಿಲ್ಲೆಗಳ ಜನರಿಗೆ ಅತ್ಯಂತ ಮಹತ್ವವಾದ, ಆದರೆ ಯಾವ ರಾಜಕಾರಣಿಯೂ ತಲೆ ಕೆಡಿಸಿಕೊಳ್ಳದಿರುವ ಒಂದು ಯೋಜನೆಯಿದೆ; ಅದುವೇ ಕೊಂಕಣ ರೈಲು ಎಂದೇ ಖ್ಯಾತವಾಗಿರುವ ಕರಾವಳಿ ರೈಲು ದಾರಿ ಯೋಜನೆ.

ಈ ಯೋಜನೆಯ ಕಲ್ಪನೆ ಕಳೆದ ಶತಮಾನದಲ್ಲೇ ಆಗಿತ್ತಾದರೂ ಟಿ. ಎ. ಪೈ ಅವರು ಸಚಿವರಾಗಿದ್ದಾಗ 1974ರಲ್ಲಿ ಇದಕ್ಕೆ ಚಾಲನೆ ದೊರೆಯಿತು. ಅವರ ಕಾಲದಲ್ಲೇ ಮಂಗಳೂರು ಕಡೆಯಿಂದ ಸರ್ವೇ ಕಾರ್ಯಕೂಡ ನಡೆದಿತ್ತು. ಅವರ ಮುತುವರ್ಜಿಯಿಂದಲೇ ಕೊಂಕಣ ರೈಲು ಯೋಜನೆ ರೈಲ್ವೆ ಬಜೆಟ್‌ನಲ್ಲಿ ಸೇರಿಕೊಂಡು ಮಹಾರಾಷ್ಟ್ರದ ತುದಿಯಿಂದ ಕೆಲಸವೂ ಆರಂಭಗೊಂಡಿತು. ನಂತರ ಬಂದ ಮಹಾರಾಷ್ಟ್ರದವರೇ ಆದ ರೈಲ್ವೆ ಸಚಿವ ಮಧು ದಂಡವತೆಯವರು ಮಹಾರಾಷ್ಟ್ರದ ತುದಿಯ ಕಾರ್ಯವನ್ನು ತ್ವರಿತಗೊಳಿಸಿದರು. ಮಂಗಳೂರನ್ನು ಸುಲಭದಲ್ಲಿ ಮರೆತು ಬಿಟ್ಟರು.

ಇದೊಂದು ಯೋಜನೆ ಕನ್ನಡ ಕರಾವಳಿಯ ಆರ್ಥಿಕ ಹಾಗೂ ಕೈಗಾರಿಕಾಭಿವೃದ್ಧಿಗೆ ಮಹತ್ವದ ಕೊಡುಗೆಯನ್ನು ನೀಡುವಂತಹದು. ಈ ದಾರಿ ನಿರ್ಮಾಣಗೊಂಡರೆ ಕರಾವಳಿಯುದ್ದಕ್ಕೂ ಸಂಚಾರ ಸುಗಮವೂ ಅಗ್ಗವೂ ಆಗುತ್ತದೆ. ಕರಾವಳಿಯುದ್ದಕ್ಕೂ ಕೈಗಾರಿಕೆಗಳ ಸಾಲೇ ಸ್ಥಾಪನೆಗೊಳ್ಳಲು ಸಾಧ್ಯವಾಗುತ್ತದೆ. ಇಂಥ ಒಂದು ಯೋಜನೆಯಿಂದ ಜನರಿಗೆ ಎಷ್ಟು ಪ್ರಯೋಜನವಾದೀತು ಎಂಬ ಕಲ್ಪನೆಯೇ ಸಂಬಂಧಪಟ್ಟ ರಾಜಕಾರಣಿಗಳಿಗೆ ಇದ್ದಂತಿಲ್ಲ. ಇಂದು ಉಡುಪಿ ಹಾಗೂ ಕುಂದಾಪುರಗಳಿಂದ ದಿನಕ್ಕೆ ಸುಮಾರು ಹತ್ತು ಸಾವಿರ ಮಂದಿ ಉದ್ಯೋಗಕ್ಕಾಗಿ ಪ್ರತಿದಿನ ಮಂಗಳೂರಿಗೆ ರಸ್ತೆ ಸಾರಿಗೆ ಮೂಲಕ ಪ್ರಯಾಣಿಸುತ್ತ ತಮ್ಮ ಸಂಪಾದನೆಯ ಸರಾಸರಿ ಮೂರನೇ ಒಂದಂಶವನ್ನು ಅದಕ್ಕಾಗಿಯೇ ವೆಚ್ಚ ಮಾಡುತ್ತಾರೆ. ರೈಲ್ವೆ ಸೌಲಭ್ಯ ಬಂದರೆ ಇವರಿಗೆಲ್ಲ ಬದುಕಿನ ಭಾರ ಕೊಂಚ ಕಡಿಮೆಯಾಗುತ್ತದೆ. ಅದಕ್ಕಾಗಿಯೇ ಕೊಂಕಣ ರೈಲು ಮಂಗಳೂರಿನಿಂದಲೂ ಪ್ರಾರಂಭವಾಗಲಿ ಎಂಬ ಕೂಗು ಬಹುಕಾಲದಿಂದ ಕೇಳಿಸುತ್ತಿದೆ. ಆದರೆ ಅದಕ್ಕೆ ಕಿವಿಗೊಡುವವರು ಯಾರೂ ಇಲ್ಲವಾಗಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಈ ಬಗ್ಗೆ ರಾಜಕಾರಣಿಗಳು ಭರವಸೆಯ ನುಡಿಗಳನ್ನಾಡುತ್ತಲೇ ಬಂದರೂ ಯೋಜನೆಯ ಸ್ಥಿತಿ–ಗತಿ ಯಾವ ಹಂತದಲ್ಲಿದೆ ಎಂದು ಪರಿಶೀಲಿಸುವ ಗೋಜಿಗೇ ಹೋಗಿಲ್ಲ. ಸರ್ವೇ ಕಾರ್ಯ ಮುಗಿದಿದೆ ಎಂದು ಹೇಳಲಾಗುತ್ತಿದ್ದರೂ ರೈಲು ಹಾದಿಗೆ ಬೇಕಾದ ಜಮೀನುಗಳು ಯಾವುವು ಎಂದು ಗುರುತಿಸುವ ಕೆಲಸವೇ ನಡೆದಿಲ್ಲ. ಸರ್ವೇ ನಂಬರುಗಳನ್ನು ಜಿಲ್ಲಾಧಿಕಾರಿಗಳಿಗೆ ಒದಗಿಸಲಾಗಿಲ್ಲ. ಆಮೇಲೆ ತಾನೇ ಅವರು ಭೂಮಿ ವಶಪಡಿಸುವ ಪ್ರಕಟಣೆ ಹೊರಡಿಸಬೇಕು. ಜಿಲ್ಲಾಧಿಕಾರಿ ಈ ವಿವರಗಳಿಗಾಗಿ 1975ರಿಂದೀಚೆಗೆ ಹಲವಾರು ಬಾರಿ ಸೆಂಟ್ರಲ್ ರೈಲ್ವೆ ಕೇಂದ್ರ ಕಚೇರಿಗೆ ಬರೆದುಕೊಂಡರೂ ವಿವರ ದೊರೆತಿಲ್ಲ. ನಮ್ಮ ರಾಜಕಾರಣಿಗಳು ಜನರ ಬದುಕನ್ನು ನೇರವಾಗಿ ತಟ್ಟುವ ಕಾಮಗಾರಿಗಳ ವಿಚಾರದಲ್ಲಿ ಮನಸ್ಸಿಗೆ ತೋಚಿದ್ದನ್ನು ಹೇಳುತ್ತ ಮೋಸ ಮಾಡುವ ಜಾಯಮಾನದವರೇ ಹೊರತು ಜುಟ್ಟುಹಿಡಿದು ಕೆಲಸ ಮಾಡಿಸಿಕೊಳ್ಳುವ ಪ್ರವೃತ್ತಿಯವರಲ್ಲವೆಂಬುದನ್ನು ಇದು ತೋರಿಸುತ್ತದೆ.

ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂಬುದು ನಿಜ. ಇದು ಕ್ಷುಲ್ಲಕ ರಾಜಕಾರಣದಿಂದಾಗಿ ಆಗುತ್ತಿದೆ. ರಾಜ್ಯದಲ್ಲಿ ಬೇರೆ ಪಕ್ಷ ಅಧಿಕಾರದಲ್ಲಿದೆ ಎಂಬ ಕಾರಣಕ್ಕೆ ಕೇಂದ್ರವು ಯೋಜನೆಗಳ ವಿಚಾರದಲ್ಲಿ ಕಣ್ಣು ಮುಚ್ಚಾಲೆ ಆಟವಾಡುತ್ತ, ರಾಜ್ಯದವರು ಕೇಂದ್ರ ಮಾಡಿಕೊಟ್ಟಿಲ್ಲ, ಆದ್ದರಿಂದ ಏನೂ ಮಾಡಲಾಗುವುದಿಲ್ಲ ಎಂದು ದೂರುತ್ತ ತಿರುಗುವುದರಿಂದ ಜನರಿಗೆ ಪರಮ ಅನ್ಯಾಯವಾಗುತ್ತಿದೆ. ಇದೀಗ ವೀರೇಂದ್ರ ಪಾಟೀಲರೂ, ಕೃಷ್ಣ ಅಯ್ಯರರೂ ಮಾಡಿದ್ದು ಇದೇ ರಾಜಕಾರಣದ ಕೆಲಸವನ್ನು ಹೊರತು ಬೇರೆಯಲ್ಲ. ತಾವೇನೋ ತಮ್ಮಿಂದಾದ್ದು ಮಾಡಿದ್ದೇವೆ ಎಂದು ಹೇಳಿಕೊಳ್ಳುವ ಕರಾಮತ್ತು ಇದು.

ರಾಜ್ಯದ ಅಭಿವೃದ್ಧಿಯ ಬಗ್ಗೆ ನಮ್ಮ ರಾಜಕಾರಣಿಗಳಿಗೆ ಕಾಳಜಿ ಇದ್ದರೆ ಜನತಾ ಪಕ್ಷದವರೂ ಕಾಂಗ್ರೆಸ್ (ಐ) ಪಕ್ಷದವರೂ ಒಟ್ಟಿಗೆ ಕೂತು ರಾಜ್ಯಕ್ಕೆ ಏನು ಬೇಕು, ಕೇಂದ್ರದಿಂದ ಸಲ್ಲ ಬೇಕಾದ್ದೇನು ಎಂದು ಚರ್ಚಿಸಿ, ಅಧ್ಯಯನ ಮಾಡಿ ತೀರ್ಮಾನಿಸಬೇಕು ಇಬ್ಬರೂ ಸೇರಿ ಅದನ್ನು ಕೇಂದ್ರಕ್ಕೆ ವಿವರಪಡಿಸಬೇಕು. ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರದ ನೆರವು, ಸಹಕಾರಗಳನ್ನು ದೊರಕಿಸಬೇಕು. ರಾಜ್ಯಕ್ಕಾಗುವ ಅನ್ಯಾಯವೇನು, ಆದರಿಂದ ಜನರಿಗಾಗುವ ಹಾನಿಯೇನು ಎಂದು ಕೇಂದ್ರಕ್ಕೆ ಮನವರಿಕೆ ಮಾಡಬೇಕು. ಮಾಜಿ ಮುಖ್ಯಮಂತ್ರಿಯೂ ರಾಜ್ಯದ ಹಿರಿಯ ರಾಜಕಾರಣಿಯೂ ಆಗಿರುವ ವೀರೇಂದ್ರ ಪಾಟೀಲರೇ ರಾಜ್ಯದ ಹಿತಕ್ಕಾಗಿ ಈ ಪಕ್ಷರಹಿತ ಪ್ರಕ್ರಿಯೆಯನ್ನು ಪ್ರಾರಂಭಿಸಬಹುದಾಗಿದೆ.

ಗಾಂಧಿ ಹೇಳಿದ ಸರಳತೆ ಈಗೆಲ್ಲಿದೆ?

ಸಮೂಹ ಹಿತ ಸಾಧನೆಯ ಸದುದ್ದೇಶಕ್ಕೆ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡು ಆ ಕಾಯಕದಲ್ಲೇ ಸಾವನ್ನಪ್ಪಿದವರು ಹುತಾತ್ಮರೆನ್ನಿಸುತ್ತಾರೆ. ಆಧುನಿಕ ಭಾರತದಲ್ಲಿ ಹೀಗೆ ಹುತಾತ್ಮರಾದವರ ದೊಡ್ಡ ಪಟ್ಟಿಯೇ ಇದೆ.

ಇವರೆಲ್ಲಾ ಇಪ್ಪತ್ತನೆಯ ಶತಮಾನದ ಮೊದಲರ್ಧದಲ್ಲಿ ಮಹಾತ್ಮ ಗಾಂಧಿಯವರ ತತ್ವ ವಿಚಾರಗಳಿಂದ ಪ್ರೇರಿತರಾದವರು. ದೇಶದ ದಾಸ್ಯ ವಿಮೋಚನೆಯ ಹೋರಾಟದಲ್ಲಿ ಮೈಮರೆತು ಮುನ್ನುಗ್ಗಿ ಕೊನೆಯುಸಿರೆಳೆದವರು. ಹುತಾತ್ಮರಾದ ತಮ್ಮ ಅನುಯಾಯಿಗಳ ಪಟ್ಟಿಗೆ 1948 ಜನವರಿ 30 ರಂದು ಮಹಾತ್ಮಾ ಗಾಂಧೀಯವರು ಸೇರಿದರು.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ರೂಪಿತವಾದ ಈ ಹುತಾತ್ಮರ ಪಟ್ಟಿ ಮಹಾತ್ಮಾ ಗಾಂಧಿಯವರ ಸೇರುವಿಕೆಯಿಂದ ಇತಿಹಾಸದ ಒಂದು ಅಧ್ಯಾಯವಾಗಿ ಮುಗುಚಿಕೊಂಡಿತೆನ್ನಬಹುದು.

ಮಹಾತ್ಮಾ ಗಾಂಧಿಯವರ ನಂತರ ಈ ದೇಶದಲ್ಲಿ ಸಮೂಹ ಹಿತದ ಸದುದ್ದೇಶಕ್ಕಾಗಿ ತಮ್ಮ ಪ್ರಾಣವನ್ನು ತೃಣವಾಗಿ

ಪಡ್ಡರ್ಸೆ ರಘುರಾಮ ಶೆಟ್ಟಿ

ಕಂಡು ಸಾವನ್ನಪ್ಪಿದವರು ಬೇರಾರೂ ಇಲ್ಲವೆಂದಲ್ಲ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ನಡೆದ ಅನೇಕ ರಾಜಕೀಯ ಹೋರಾಟಗಳಲ್ಲಿ ಆತ್ಮ ಬಲಿದಾನ ಮಾಡಿದವರಿದ್ದಾರೆ. ಭಾಷಾವಾರು ರಾಜ್ಯಗಳ ರಚನೆಗಾಗಿ ಜೀವ ತೆತ್ತವರಿದ್ದಾರೆ. ಉಳುವವನೇ ಹೊಲದೊಡೆಯನಾಗಿ ಮಾಡಬೇಕೆಂಬ ಹೋರಾಟದಲ್ಲಿ ಸಾವನ್ನಪ್ಪಿದವರಿದ್ದಾರೆ. ಈ ಹುತಾತ್ಮರುಗಳ ಪಟ್ಟಿ ಇನ್ನೊಂದು ಕಾಲ ಘಟ್ಟದಲ್ಲಿ ಸಿದ್ಧವಾಗಬಹುದು. ಅವರು ಬಿಟ್ಟು ಹೋದ ಆದರ್ಶಗಳು ಇನ್ನೊಂದು ತಲೆಮಾರಿನ ಸ್ಮರಣೆಯ ವಿಷಯಗಳಾಗಬಹುದು.

ಸದ್ಯಕ್ಕಂತೂ ಭಾರತವು ಮಹಾತ್ಮಾ ಗಾಂಧಿಯವರು ಮುಂಚೂಣಿಯಲ್ಲಿರುವ



ದಲ್ಲಿ ಮಹಾತ್ಮಾ ಗಾಂಧಿಯವರಷ್ಟು ಪ್ರಸಿದ್ಧಿಗೇರಿದವ್ಯಕ್ತಿ ಇನ್ನೊಬ್ಬರಿಲ್ಲವೆಂಬುದನ್ನು ಜಗತ್ತಿನ ವಿಚಾರವಂತ ಜನರೆಲ್ಲರೂ ಒಪ್ಪಿದ್ದಾರೆ. ಮಾನವ ಕುಲಕ್ಕೆ ಧರ್ಮ ಮಾರ್ಗಗಳನ್ನು ತೋರಿಸಿದ ಗೌತಮ ಬುದ್ಧ, ಅಥವಾ ಯೇಸು ಕ್ರಿಸ್ತ, ಮಹಮ್ಮದ್ ಪೈಗಂಬರ್ ಇವರಾರೂ ತಮ್ಮ ಜೀವಿತ ಕಾಲದಲ್ಲಿ ಮಹಾತ್ಮಾ ಗಾಂಧಿಯವರಷ್ಟು ಸಾಧಕರೆನ್ನಿಸಿದವರೂ ಅಲ್ಲ–ಇಷ್ಟೊಂದು ವ್ಯಾಪಕವಾಗಿ ಜನಮನ್ನಣೆಯನ್ನು ಗಳಿಸಿದವರೂ ಅಲ್ಲ. ಈ ಎಲ್ಲಾ ಮತ ಪ್ರವರ್ತಕರು ಗತಿಸಿ ಹೋದ ಮೇಲೆ ಅವರ ತತ್ವ ವಿಚಾರಗಳು ಪ್ರಚುರಗೊಂಡು ಕಾಲಾನುಕ್ರಮದಲ್ಲಿ ಜನಸಮೂಹ ಆ ತತ್ವ ವಿಚಾರಗಳನ್ನು ತಮ್ಮ ಧರ್ಮವಾಗಿ ಅಂಗೀಕರಿಸಿದ್ದು. ಆದರೆ ಮಹಾತ್ಮಾ ಗಾಂಧಿಯವರು ತಮ್ಮ ಜೀವಿತಕಾಲದಲ್ಲಿಯೇ ಅಂಧಿಕ ಅನುಯಾಯಿಗಳ ದೊಡ್ಡ ಜನ ಸಮೂಹವನ್ನೇ ಗಳಿಸಿಕೊಂಡವರು. ಅವರ ಪ್ರಭಾವ ವಲಯ ವಿಶ್ವವ್ಯಾಪಿಯಾಗಿತ್ತು. ಅವರು ಅರ್ಥವತ್ತಾಗಿ ಒಬ್ಬ ವಿಶ್ವಮಾನ್ಯ ವ್ಯಕ್ತಿಯಾಗಿದ್ದರು.

ಇಪ್ಪತ್ತನೆಯ ಶತಮಾನದಲ್ಲಿ ಮೇಳೈಸಿದ ವಿಜ್ಞಾನಯುಗ ಮನುಷ್ಯನ ಸುಖ ಜೀವನಕ್ಕೆ ಅಪರಿಮಿತವಾದ ಸಾಧನ–ಸಲಕರಣೆಗಳನ್ನೊದಗಿಸಿದೆ. ಈ ಸಂಪತ್ತು ಮಾನವ ಜೀವನದ ವಿಕೃತಿಯ ಗುಣಾಗ

ವನ್ನು ತಮ್ಮ ಆತ್ಮ ಬಲದಿಂದ ಮಾಡಿದ್ದಾರೆ.

ಬಲಿಷ್ಠ ರಾಷ್ಟ್ರಗಳ ತುಳಿತಕ್ಕೊಳಗಾದ ಜನಾಂಗಗಳು ಸ್ವಾಭಿಮಾನದಿಂದ ಸಿಡಿದೆದ್ದು ಶಸ್ತ್ರಧಾರಿಗಳಾಗಿ ಸಮರ ಸಾರುವುದು ಇತಿಹಾಸದುದ್ದಕ್ಕೂ ನಡೆದು ಬಂದ ಒಂದು ಮಾಮೂಲಿ ವಿಧಾನ. ಇಂತಹ ಸಮರಗಳಿಂದ ಹುಟ್ಟುವ ಜನಾಂಗ ದ್ವೇಷ ಹಾಗೂ ಹರಿಯುವ ರಕ್ತ ಯಾರಿಗೂ ಒಳಿತು ಮಾಡಲಾರದ ಮಾರಕ ಶಕ್ತಿಗಳನ್ನು ಬೆಳೆಸುವುದೆಂಬ ಪಾಠವನ್ನು ಹೇಳಿದವರು ಗಾಂಧಿ.

ಹೇಳಿದ ಈ ಪಾಠವನ್ನು ಆಚರಣೆಗೆ ತಂದು ಶಸ್ತ್ರಧಾರಿ ಸರಕಾರವನ್ನು ನಿರಾಯುಧರಾಗಿ ಸತ್ಯಾಗ್ರಹದ ಪ್ರಯೋಗದಿಂದ ಸೋಲಿಸಿದವರು ಮಹಾತ್ಮಾ ಗಾಂಧಿ. ಸತ್ಯಾಗ್ರಹವೆಂಬುದು ಆತ್ಮವಿದ್ಯೆಯ ಪರಾಕಾಷ್ಠೆಯನ್ನು ಮುಟ್ಟಿದ ಪರಿಪೂರ್ಣವೆನ್ನಬಹುದಾದ ಮಾನವೀಯ ಹೃದಯದಲ್ಲಿ ಉದಿಸಿದ ಒಂದು ಸರ್ವೋತ್ಕೃಷ್ಟ ಸಾಧನ. ಈ ಸತ್ಯಾಗ್ರಹ ಸಾಧನದ

ವೈಚಾರಿಕ ಕ್ರಾಂತಿ.

ಆಧುನಿಕ ಯುಗದಲ್ಲಿ ಗಾಂಧಿ ವಿಚಾರಗಳಿಂದ ಪ್ರೇರಿತವಾದ ಇನ್ನೊಂದು ಕ್ರಾಂತಿಯೆಂದರೆ ಶಾಂತಿಯು ಮಾನವ ಕುಲದ ಬಯಕೆಯಾಗಿ ಬೆಳೆಯುತ್ತಿರುವುದು. ಶಾಂತಿ ಸಂದೇಶವನ್ನು ಮಹಾತ್ಮಾ ಗಾಂಧಿಯವರಷ್ಟು ಪ್ರಭಾವಿಯಾಗಿ ಸಾರಿದವರು ಇತಿಹಾಸದಲ್ಲಿ ಇನ್ನೊಬ್ಬರಿಲ್ಲವೆನ್ನಬಹುದು. ಸಂದರ್ಭಕ್ಕೆ ಸಲ್ಲುವ ಮಾತಾಗಿ ಉಳಿದಿದ್ದ ಶಾಂತಿಯನ್ನು ಮಾನವನ ಉತ್ಕರ್ಷದ ಮೂಲ ಮಂತ್ರವಾಗಿ ಮಾಡಿದವರು ಗಾಂಧಿ. ಜನಾಂಗ–ಜನಾಂಗಗಳ ನಡುವೆ ಶಾಂತಿ–ಸಹಬಾಳ್ವೆ ಸಾಧ್ಯವಾಗಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲೂ ಶಾಂತಿ–ಸಹಬಾಳ್ವೆಯ ಒಲವು ಮೂಡಬೇಕೆಂದು ಗಾಂಧಿ ಪ್ರತಿಪಾದಿಸಿದ ಸೂತ್ರ.

ಒಂದರೆ ನಿಮಿಷದಲ್ಲಿ ಸಮಗ್ರ ಜಗತ್ತನ್ನು ನೂರು ಬಾರಿ ನಾಶ ಮಾಡಬಲ್ಲ ಮಾರಕಾಸ್ತ್ರಗಳ ಶೇಖರಣೆಯಾಗಿರುವ ಇಂದಿನ ಯುಗದಲ್ಲಿ ಯುದ್ಧವನ್ನು ತಡೆಗ

> "ತಲೆ ಬಾಗಿ ಹುತಾತ್ಮರನ್ನು ನೆನೆಸಿಕೊಂಡು ಅವರಿಗೆ ನಮ್ಮ ಗೌರವದ ಅಂಜಲಿ ಅರ್ಪಿಸುವ ದಿನವಾದ ಇಂದು ಇಂತಹ ನೆನಕೆ ಅಗತ್ಯವೆನ್ನಿಸಿದೆ. ಮಹಾತ್ಮಾ ಗಾಂಧಿಯವರ ನೆನಕೆ ದಿನ ಕಳೆದಂತೆ ಈ ದೇಶಕ್ಕೆ ಅತೀ ಅಗತ್ಯವಾಗುತ್ತಿದೆ."

> "ಸಮರಗಳಿಂದ ಹುಟ್ಟುವ ಜನಾಂಗ ದ್ವೇಷ ಹಾಗೂ ಹರಿಯುವ ರಕ್ತ ಯಾರಿಗೂ ಒಳಿತು ಮಾಡಲಾರದ ಮಾರಕ ಶಕ್ತಿಗಳನ್ನು ಬೆಳೆಸುವುದೆಂಬ ಪಾಠವನ್ನು ಹೇಳಿದವರು ಗಾಂಧಿ"

ಹುತಾತ್ಮರ ಸ್ಮರಣೆಯನ್ನು ಪ್ರತಿ ವರ್ಷ ಜನವರಿ 30ರಂದು ವಿಧಿವತ್ತಾಗಿ ನಡೆಸಿಕೊಂಡು ಬರುತ್ತಿದೆ. ಈ ಹುತಾತ್ಮರ ಸ್ಮರಣೆ ಅದೆಷ್ಟು ಅರ್ಥವತ್ತಾಗಿದೆ? ಇದರಿಂದ ಹುತಾತ್ಮರ ಸಂದೇಶಗಳು ನಮ್ಮ ಬದುಕಿನ ರೀತಿ–ನೀತಿಗಳಿಗೆ ಅದೆಷ್ಟು ಅನ್ವಯವಾಗಿವೆ?–ಎಂಬುದೆಲ್ಲಾ ಸಮಾಜಕ್ಕೆ ಒಳಪಡಬೇಕಾದ ಪ್ರಶ್ನೆಗಳಾಗಿಯೇ ಇವೆ.

ತಲೆ ಬಾಗಿ ಹುತಾತ್ಮರನ್ನು ನೆನೆಸಿಕೊಂಡು ಅವರಿಗೆ ನಮ್ಮ ಗೌರವದ ಅಂಜಲಿ ಅರ್ಪಿಸುವ ದಿನವಾದ ಇಂದು ಇಂತಹ ನೆನಕೆ ಅಗತ್ಯವೆನ್ನಿಸಿದೆ. ಮಹಾತ್ಮಾ ಗಾಂಧಿಯವರ ನೆನಕೆ ದಿನ ಕಳೆದಂತೆ ಈ ದೇಶಕ್ಕೆ ಅತೀ ಅಗತ್ಯವಾಗುತ್ತಿದೆ.

ಜಗತ್ತಿನ ಮಾನವ ಕುಲದ ಇತಿಹಾಸ ಕಣ್ಣು ಹೊರೆಗೆಡಹಿದೆ. ಕೊನೆಯಿಲ್ಲದ ಏಳುಬೀಳುಗಳ ನಡುವೆ ಮಾನವ ಕುಲದ ಸರ್ವನಾಶ ಮಾಡಬಲ್ಲ ಮಾರಕಾಸ್ತ್ರಗಳ ಉಗಮವೂ ಆಗಿದೆ. ಭೋಗಜೀವನ ಬಯಕೆ ಮಾನವ ಸಮೂಹದಲ್ಲಿ ಪಶು ಪ್ರವೃತ್ತಿಯನ್ನು ಸಚೇತನಗೊಳಿಸಿದೆ.

ಜಗತ್ತಿನ ಇತಿಹಾಸದಲ್ಲಿ ಸಂದಿಗ್ಧವೆನ್ನಬಹುದಾದ ಈ ಕಾಲದಲ್ಲಿ ಮಾನವಕುಲದ ಉಳಿವಿಗೆ ಹಾಗೂ ಅವರ ಉನ್ನತಿಗೆ ಮಾನವೀಯ ಮೌಲ್ಯಗಳ ನೆಲೆಗಟ್ಟು ಒದಗಿಸಿದವರು ಮಹಾತ್ಮಾ ಗಾಂಧಿ.

ಮಹಾತ್ಮರ ಜೀವನದ ಸಾಧನೆಗಳಿಗೆ ಮೂರು ಉಜ್ವಲ ಮುಖಗಳಿವೆ. ನನ್ನ ದೃಷ್ಟಿಯಲ್ಲಿ ಅವರು ಸಾವಿರ ಅಣುಬಾಂಬುಗಳಿಂದಾಗದ ಒಂದು ಮಹತ್ಕಾರ್ಯ

ಮುಂದೆ ಜಗತ್ತಿನ ಅತ್ಯಂತ ಬಲಿಷ್ಠ ರಾಷ್ಟ್ರವೆನ್ನಿಸಿದ್ದ ಬ್ರಿಟನ್ ಮಣಿಯಬೇಕಾಗಿ ಬಂದುದು ಆಧುನಿಕ ಯುಗದ ಒಂದು ಮಹಾ ಅನ್ವೇಷಣೆ ಎನ್ನಬಹುದು.

ಗಾಂಧಿ ನಾಯಕತ್ವದಲ್ಲಿ ನಡೆದ ಸತ್ಯಾಗ್ರಹದಿಂದ ಸೋಲುಂಡ ಶಕ್ತಿ ಬ್ರಿಟನ್ ಮಾತ್ರವಲ್ಲ. ಈ ಸಮರದಲ್ಲಿ ಸಮಗ್ರ ಸಾಮ್ರಾಜ್ಯಶಾಹಿ ಶಕ್ತಿಗೇ ಸೋಲಾಯಿತು. ಯುರೋಪಿನ ಬಲಿಷ್ಠ ರಾಷ್ಟ್ರಗಳು ಜಗತ್ತಿನ ಉದ್ದಗಲಕ್ಕೂ ಕಟ್ಟಿದ ಸಾಮ್ರಾಜ್ಯಗಳ ವಿಸರ್ಜನೆಗೆ ಭಾರತದ ಬಂಧ ವಿಮೋಚನೆಯೇ ನಾಂದಿಯಾಯಿತು. ಈ ದೃಷ್ಟಿಯಿಂದ ಮಹಾತ್ಮಾ ಗಾಂಧಿಯವರು ಸತ್ಯಾಗ್ರಹದಂತಹ ಸರಳ ವಿಧಾನದಿಂದ ಸಾಮ್ರಾಜ್ಯಗಳ ವಿಸರ್ಜನೆ ಮಾಡಿದ ಮಹಾನ್ ಶಕ್ತಿಯಾಗಿ ಎದ್ದು ಕಾಣುತ್ತಾರೆ. ಮಾನವೀಯ ವಿರುದ್ಧ ಸತ್ಯಾಗ್ರಹ ವಿಧಾನವು ಹುಟ್ಟಿಸಿದ ಪ್ರತಿರೋಧದಿಂದಾಗಿ ಇನ್ನು ಮುಂದೆ ಜಗತ್ತಿನಲ್ಲಿ ಯಾರೊಬ್ಬರೂ ಸಾಮ್ರಾಜ್ಯ ಸ್ಥಾಪನೆಯ ಕನಸು ಕಾಣದಂತಾಯಿತು.

ವರ್ಣಭೇದದ ವಿರುದ್ಧ ಜಗತ್ತಿನಾದ್ಯಂತ ಇಂದು ವ್ಯಾಪಕವಾಗಿ ಕಾಳಜಿ ಹುಟ್ಟುವಂತೆ ಮಾಡಿದವರು ಮಹಾತ್ಮ ಗಾಂಧಿ. ಮನುಷ್ಯನ ವ್ಯಕ್ತಿತ್ವದ ಮೇಲೆ ಆತನ ಸ್ಥಾನ–ಮಾನವನ್ನು ನಿರ್ಧರಿಸುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಮಾನವೀಯ ಪ್ರಜ್ಞೆಯನ್ನು ಮೂಡಿಸಿದವರು. ವರ್ಣಭೇದದ ನಿರ್ಮೂಲನಕ್ಕೆ ಇಂದು ನಡೆದಿರುವ ಆಂದೋಳನದ ಪ್ರವರ್ತಕರು ಮಹಾತ್ಮಾ ಗಾಂಧಿ ಎಂಬುದನ್ನು ವಿಶ್ವದ ಬುದ್ಧಿಜೀವಿಗಳೆಲ್ಲಾ ಮನ್ನಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ವರ್ಣಭೇದದ ವಿರುದ್ಧ ಆಂದೋಳನವು ಇಪ್ಪತ್ತನೆಯ ಶತಮಾನದಲ್ಲಿ ಗಾಂಧಿ ವಿಚಾರ ಪ್ರೇರಿತವಾದ ಒಂದು

ಟ್ಟಿದ ಮಹಾಬೋಧನೆಯನ್ನು ಗಾಂಧಿ ಸಂದೇಶದಲ್ಲಿ ಗುರುತಿಸಬಹುದು. ಹೀಗೆ ಮಹಾತ್ಮಾಗಾಂಧಿಯವರು ಆಧುನಿಕ ಯುಗದ ಮಹಾಪ್ರವಾದಿಯಾಗಿಯೂ ಕಾಣುತ್ತಾರೆ.

ಭಾರತೀಯರಾದ ನಾವು ಗಾಂಧಿ ಪ್ರತಿಪಾದಿಸಿದ ಇನ್ನೂ ಅನೇಕ ತತ್ವಗಳನ್ನು ಮನನ ಮಾಡಬೇಕಾದ ಅಗತ್ಯ ಇದೆ. ಅವುಗಳಲ್ಲಿ ಬಹಳ ಮುಖ್ಯವಾದುದು "ಸರಳತೆ". ಸಾಧ್ಯ ಕ ಬದುಕಿಗೆ ಸರಳತೆ ಬೇಕೇ ಬೇಕು ಎಂಬ [illegible] ಗಾಂಧೀಜಿಯವರು ವಿಶ್ಲೇಷಣೆ ಮಾಡಿದಂತೆ "ಸರಳತೆಯಲ್ಲಿ ಸೌಂದರ್ಯವಿದೆ. ಸುಂದರವಾದುದೆಲ್ಲಾ ಸತ್ಯ. ಸತ್ಯದ

> "ಸರಳತೆಯಲ್ಲಿ ಸೌಂದರ್ಯವಿದೆ. ಸುಂದರವಾದುದೆಲ್ಲಾ ಸತ್ಯ. ಸತ್ಯದ ಸಾಕ್ಷಾತ್ಕಾರದಲ್ಲಿ ಅನಿರ್ವಚನೀಯವಾದ ಸುಖಾನುಭವವಿದೆ. ಸುಖವೇ ಬದುಕು ಸಹಜವಾದ ಬಯಕೆ"

ಸಾಕ್ಷಾತ್ಕಾರದಲ್ಲಿ ಅನಿರ್ವಚನೀಯವಾದ ಸುಖಾನುಭವವಿದೆ. ಸುಖವೇ ಮಾನವನ ಸಹಜವಾದ ಬಯಕೆ".

ಸರಳತೆಯಲ್ಲಿ ಸುಖಾನುಭವವನ್ನು ಪಡೆಯುವ ಗಾಂಧಿ ತತ್ವದಲ್ಲಿ ಸಮಾಜಕಲ್ಯಾಣದ ಸಹಬಾಳ್ವೆಯ [illegible]. ಸಂದೇಶಗಳೂ ಇವೆ. ಸರಳತೆಯಿಂದ ಜೀವನ ವಿಧಾನಕ್ಕೆ ಅವರ ಗೃಹವು ಒಂದು ಮಹೋನ್ನತ ಮಾದರಿಯಾಗಬೇಕಾಗುತ್ತದೆ. [illegible] ಆಕಾಂಕ್ಷೆಗಳನ್ನು ಮಿತಿಗೊಳಿಸುವುದೇ ಅಪರಿಗ್ರಹ ಮಹೋನ್ನತ ಭಾವನೆ. ಇದರಲ್ಲಿ ಅತ್ಯಾಸೆಗೆ ಅವಕಾಶವಿಲ್ಲ. ಭೋಗ ಜೀವನದ ಬಯಕೆ ಇಲ್ಲ. ಶೋಷಣೆಗೆ ದಾರಿ ಇಲ್ಲ.

ಸರಳ ಜೀವನದ ಬಗ್ಗೆ ಗಾಂಧಿ ಹೇಳಿದ ಮಾತುಗಳಲ್ಲಿ ಸಮಾಜವಾದಿ ಆರ್ಥಿಕ ಸಿದ್ಧಾಂತಗಳ ಸಾರವಿದೆ. ಸಂಪತ್ತಿನ ಶೇಖರಣೆಯು ಎಲ್ಲ ಬಗೆಯ ಸಾಮಾಜಿಕ ಅನಿಷ್ಟಗಳನ್ನು ಹುಟ್ಟಿಸಿ ಹಾಕುವುದಲ್ಲದೆ ವ್ಯಕ್ತಿಯ ನೈತಿಕ ಅವನತಿಗೆ ಕಾರಣವಾಗುವುದು.

"ಭಾರತವು ತನ್ನ ಗತ ವೈಭವವನ್ನು ಮರಳಿ ಗಳಿಸಬೇಕಾದರೆ ಸರಳತೆಯು ಎಲ್ಲರ ಜೀವನ ವಿಧಾನವಾಗಬೇಕು. ಸಮಭಾವವು ನಮ್ಮ ಧರ್ಮವಾಗಬೇಕು. ಪ್ರತಿಯೊಬ್ಬ ಪ್ರಜೆಯೂ ಸತ್ಯ ಪ್ರೇಮಿಯೂ, ಸ್ವಾಭಿಮಾನಿಯೂ, ಕರ್ತವ್ಯ ನಿಷ್ಠನೂ ಆಗಿರಬೇಕು" ಎಂಬುದನ್ನು ಗಾಂಧೀಜಿ ತಮ್ಮೆಲ್ಲ ಪ್ರಾರ್ಥನಾ ಸಭೆಗಳಲ್ಲೂ ಹೇಳುತ್ತಿದ್ದರು.

ಪಾಶ್ಚಾತ್ಯರ ಭೋಗ ಜೀವನ ವಿಧಾನದ ಅನುಸರಣೆ "ಭಾರತಕ್ಕೆ ಮಹಾ ನಾಶವಾಗಬಲ್ಲುದು" ಎಂದವರು ಎಚ್ಚರಿಕೆ ನೀಡಿದ್ದರು.

"ಮಾನಸಿಕ ನೆಮ್ಮದಿಯನ್ನು ತಂದು ಕೊಡಬಲ್ಲ ಕ್ರಿಯಾತ್ಮಕ ದುಡಿಮೆಯಲ್ಲಿ ಎಲ್ಲರನ್ನೂ ತೊಡಗಿಸಬೇಕು. ದುಡಿಮೆಯ ಮಹತ್ವ ಹೊಲದಲ್ಲಿ ದುಡಿವ ರೈತ, ನಮ್ಮ ಅನ್ನಬೇಯಿಸುವ ಮಡಿಕೆ ಕಟ್ಟುವ ಕುಂಬಾರ, ನಮ್ಮ ನೇಗಿಲು ಮಾಡುವ ಬಡಗಿ, ನಮ್ಮ ಮಾನವ ಮುಚ್ಚುವ ಬಟ್ಟೆ ನೇಯುವ ನೇಕಾರ– ಇವರೆಲ್ಲ ನಮ್ಮ ಸಮಾಜದ ಗೌರವಸ್ಥ ಸದಸ್ಯರಾಗಬೇಕು. ಜೀವನ ಸಾಧನಗಳ ಉತ್ಪಾದನೆಯಲ್ಲಿ ನಿರತರಾಗಿರುವವರನ್ನು ಗೌರವಿಸಲು ಕಲಿಯದ ಒಂದು ಸಮಾಜ ಸ್ವಸ್ಥ ಸಮಾಜ ಎನ್ನಿಸಿ ಕೊಳ್ಳಲಾರದು. ಸಂಪತ್ತಿನ ಶೇಖರಣೆಯು ಕೇಂದ್ರಗಳ ಮೇಲೆ ಕಣ್ಣಿಡಲಾರಂಭಿಸಿದ ದಿನಗಳಿಂದಲೇ ಭಾರತದ ನೈತಿಕ ಅವನತಿ ಆರಂಭವಾಗಿತ್ತು. ದೈಹಿಕ ದುಡಿಮೆಯು ಒಂದು ದುರ್ಗುಣವೆನ್ನುವಷ್ಟರ ಮಟ್ಟಿಗೆ ಭಾರತೀಯರು ಶ್ರೀಮಂತಿಕೆಯ ಆರಾಧಕರಾದುದರಿಂದ ಅವರೆಲ್ಲ ಸೋತಿಗಳಿದ್ದರು. ಜನ ಸಾಮೂಹಿಕವಾಗಿ ಸೋತಿಗಳಿದ್ದುದರಿಂದ ಅವರಿಗೆ ಸ್ವಾಭಿಮಾನ ಪ್ರಜ್ಞೆಯಾಗಿ ಬದುಕಲಾಗಲಿಲ್ಲ. ಹಾಗಾಗಿ ಅವರನ್ನಾಳಲು ಪರಕೀಯರಿಗೆ ಸಾಧ್ಯವಾಯಿತು. ಭಾರತ ಇಂತಹ ಹೀನ ಪರಂಪರೆ ಕೊನೆಗೊಳ್ಳಬೇಕಾದರೆ ಸಂಪತ್ತಿನ ಉತ್ಪಾದಕರಿಗೆ ಮೊದಲ ಗೌರವ ಸಲ್ಲಿಸಲು ಕಲಿಯಬೇಕು. ಸಂಪತ್ತಿನ ಶೇಖರಣೆಯು ಸಮಾಜ ದ್ರೋಹಿ ಕೃತ್ಯವೆಂದು ಪರಿಗಣಿಸುವ ಅಭ್ಯಾಸವನ್ನು ಗಳಿಸಬೇಕು." ಎನ್ನುವ ಮಾತುಗಳನ್ನು ಗಾಂಧೀಜಿ ತಮ್ಮ ಪತ್ರಿಕಾ ಲೇಖನ ಪ್ರಾರ್ಥನಾ ಸಭೆಗಳಲ್ಲಿ ಹೇಳಿದ್ದರು.

ಮಹಾತ್ಮಾಗಾಂಧಿಯವರ ತತ್ವ ವಿಚಾರಗಳನ್ನು ಅಂಗೀಕರಿಸಿದವರು ಮಾತ್ರ ಸ್ವಾತಂತ್ರ್ಯ ನಂತರ ಸ್ವಾರ್ಥಕ್ಕೆ [illegible] ಈಗ ಸರಳತೆ ಎಲ್ಲಿದೆ? ಮಹಾತ್ಮರ ಗೌರವ ಎಲ್ಲಿದೆ? ಸಂಪತ್ತಿನ ಶೇಖರಣೆಯನ್ನು ವಿರೋಧಿಸುವ ಆತ್ಮಬಲ ಎಲ್ಲಿ ಹೋಯಿತು? ಎಂದು ಕೇಳಬೇಕಾದ ಪರಿಸ್ಥಿತಿ ಇದೆ. ಆದರೂ ನಾವು ಪ್ರತಿ ವರ್ಷ ಮಹಾತ್ಮ, ಮಹಾತ್ಮಾ ಗಾಂಧಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಅದ್ದರಿಂದಲೇ ಕೇಳಬೇಕಾಗಿದೆ, "ಇನ್ನೆಷ್ಟು ಕಾಲ ಈ ಕಪಟನಾಟಕ?"

ಮಟ್ಟುವಿಗೆ ಸೇತುವೆ ಬೇಕು

ಪ್ರಿಯರೆ,

ಉಡುಪಿ ತಾಲೂಕಿನ ಮಟ್ಟು ಗ್ರಾಮದಲ್ಲಿ ತೆಂಕು ದಿಕ್ಕಿನ ಮಟ್ಟು ಕೈಪುಂಜಾಲ್‌ನಲ್ಲಿ ಸೇತುವೆಯ ಕೊರತೆ ಇದೆ.

ಈ ನದಿ ಕೇವಲ 30-40 ಮೀಟರ್ ಅಗಲವಾಗಿದೆ. ಇಲ್ಲಿಯ ಜನ ಪೇಟೆಗೆ ಹೋಗ ಬೇಕಾದರೆ ಅಥವಾ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗ ಬೇಕಾದರೆ 2ಕಿ.ಮೀ. ನಡೆದು ಮಟ್ಟು ಬಸ್ಸು ನಿಲ್ದಾಣಕ್ಕೆ ಬಂದು, ಅಲ್ಲಿ ಬಸ್ಸು ಕಾದು ಕಟಪಾಡಿ ಅಥವಾ ಉಡುಪಿಗೆ ಹೋಗಬೇಕಾಗುತ್ತದೆ. ರಾತ್ರಿ ಹೊತ್ತಿನಲ್ಲಿ ತುಂಬಾ ತೊಂದರೆಯಾಗುತ್ತದೆ. ಈ ನದಿಗೆ ಸೇತುವೆಯಾದರೆ ಪಾಂಗಳಕ್ಕೆ ಕೇವಲ ಅರ್ಧ ಕಿ. ಮೀ. ಕಾಲು ಹಾದಿ.

ಸರಕಾರ ಮತ್ತು ರಾಜಕೀಯ ನಾಯಕರುಗಳು ಗ್ರಾಮದ ಏಳಿಗೆಗಾಗಿ ಪಕ್ಷಭೇದವನ್ನು ಮರೆತು ನಮ್ಮ ಈ ಸಮಸ್ಯೆಯತ್ತ ಗಮನ ಹರಿಸುವರೇ.

—ಶಂಕರನಾರಾಯಣ

ಮಟ್ಟು ಕೊಪ್ಲ

ಜೋಕಟ್ಟೆ ರಸ್ತೆ ದುರಸ್ತಿ ಆಗಲಿ

ಪ್ರಿಯರೆ,

ಬೈಕಂಪಾಡಿ ಕೈಗಾರಿಕಾ ಎಸ್ಟೇಟ್‌ನಿಂದ ಜೋಕಟ್ಟೆ ಮಾರ್ಗವಾಗಿ ಬಜ್ಪೆಗೆ ಹೋಗುವ ರಸ್ತೆಯು ಸಂಪೂರ್ಣ ಹಳ್ಳ ದಿಣ್ಣೆಗಳಿಂದ ಕೂಡಿದ್ದು, ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಬಹಳ ತೊಂದರೆ ಉಂಟಾಗಿದೆ.

ಈ ರಸ್ತೆ ಕೂಡಾ ತೀರಾ ಸಣ್ಣದಾಗಿದ್ದು ಎರಡು ಬಸ್ಸುಗಳು ಒಮ್ಮೆಲೆ ಎದುರು ಬದುರಾಗಿ ಬಂದು ದಾಟುವಾಗ ಬಹಳ ಪ್ರಯಾಸ ಪಡಬೇಕಾಗಿದೆ.

ಪ್ರಯಾಣಿಕರಂತೂ ಸದಾ ಅಪಾಯದ ಕೋಣೆಯಲ್ಲೇ ಕುತ್ತಿರುತ್ತಾರೆ. ಬೈಕಂಪಾಡಿ ಕೈಗಾರಿಕಾ ಎಸ್ಟೇಟ್‌ನಿಂದ ಬಜ್ಪೆಯವರೇಗಿನ 7 ಕಿ. ಮೀ ದೂರದ ರಸ್ತೆಯನ್ನು ದುರಸ್ತಿಪಡಿಸುವಲ್ಲಿ ಕಾಮಗಾರಿ ಇಲಾಖೆ ಇನ್ನಾದರೂ ಗಮನವೀಯುವರೇ

—ಚಂದಪ್ಪ

ಜೋಕಟ್ಟೆ

ಆಲಂಕಾರುವಿಗೆ ಸಬ್ ಅಂಚೆ ಕಚೇರಿ ಇರಲಿ

ಪ್ರಿಯರೆ,

ಆಲಂಕಾರು ಕೇಂದ್ರದಲ್ಲಿ ಕಳೆದ ಹಲವು ವರ್ಷಗಳಿಂದ ಒಂದು ಇ. ಡಿ. ಎಸ್. ಒ. ಅಂಚೆ ಕಚೇರಿ ಇದೆ. ಇಲ್ಲಿ ಪ್ರತಿ ತಿಂಗಳು 35ಸಾವಿರ ರೂ. ಗಳಿಗೂ ಹೆಚ್ಚಿನ ವ್ಯವಹಾರ ನಡೆಯುತ್ತಿದೆ.

ಈ ಅಂಚೆ ಕಚೇರಿಯನ್ನು ಡಿಪಾರ್ಟ್ ಮೆಂಟಲ್ ಸಬ್ ಅಂಚೆಕಚೇರಿಯಾಗಿ ಪರಿವರ್ತಿಸಬೇಕೆಂದು 29-10-84 ರಲ್ಲಿ ಸಾರ್ವಜನಿಕರು ಕಳುಹಿಸಿದ್ದ ಅರ್ಜಿಗೆ ಅನುಕೂಲಕರವಾದ ಉತ್ತರ ಬಂದಿತ್ತು ಮತ್ತು ಈ ಬಗ್ಗೆ ಕಟ್ಟಡ ಒಂದನ್ನು ಕೂಡಾ ಬಾಡಿಗೆಯ ನೆಲೆಯಲ್ಲಿ ಅಂಚೆ ಇಲಾಖೆಗೆ ಒದಗಿಸಿಕೊಡಲಾಗಿತ್ತು.

ಆದರೆ ಅಂಚೆ ಇಲಾಖೆಯು ಈ ಕಟ್ಟಡವನ್ನು ವಶಕ್ಕೆ ತೆಗೆದುಕೊಳ್ಳದೆ, ಡಿಪಾರ್ಟ್‌ಮೆಂಟಲ್ ಸಬ್ ಅಂಚೆ ಕಚೇರಿಯಾಗಿಯೂ ಪರಿವರ್ತಿಸದೆ ಅದಕ್ಕಿಂತ ಕೆಳದರ್ಜೆಯ ಶಾಖಾ ಕಚೇರಿಯಾಗಿ ಮುನ್ನಡೆಸುವ ಆಲೋಚನೆಯಲ್ಲಿದೆ ಎನ್ನಲಾಗಿದೆ.

ಆಲಂಕಾರಿನಲ್ಲಿ ಸಿಂಡಿಕೇಟ್ ಬ್ಯಾಂಕ್, ವ್ಯವಸಾಯ ಸಹಕಾರಿ ಸಂಘ, ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಯುವಕ ಮಂಡಲ, ಯುವತಿ ಮಂಡಲ, ಬೀಡಿ ಕಾರ್ಮಿಕರ ಸಹಕಾರೀ ಸಂಘ ಮುಂತಾದ ಹಲವಾರು ಸಂಸ್ಥೆಗಳೂ ಇದ್ದು ಇತ್ತೀಚೆಗೆ ಇದು ಜಿಲ್ಲಾ ಪರಿಷತ್ತಿನ ಒಂದು ಕೇಂದ್ರವಾಗಿಯೂ ಆಯ್ಕೆಯಾಗಿದ್ದು, ಆಲಂಕಾರು ಗ್ರಾಮ

ಓದುಗರ ಓಲೆ

ದಲ್ಲಿಯೇ ಸುಮಾರು 4000 ಜನಸಂಖ್ಯೆ ಇರುತ್ತದೆ. ಅಲ್ಲದೆ ಆಲಂಕಾರು ಮಂಡಲದ ಇತರ ಗ್ರಾಮಗಳಾದ ಪೆರಾಬೆ, ಕುಂತೂರು ಹಳೆನೇರೆಂಕಿ, ರಾಮಕುಂಜ, ಕೊೖಲ, ಮುಂತಾದ ಗ್ರಾಮಗಳ ಶಾಖಾಅಂಚೆಕಚೇರಿಗಳಿಗೂ ಇದು ಕೇಂದ್ರ ಸ್ಥಳವಾಗಿದ್ದು ಡಿಪಾರ್ಟ್‌ಮೆಂಟಲ್ ಸಬ್ ಅಂಚೆ ಕಚೇರಿ ತೆರೆಯಲು ಎಲ್ಲಾ ಅರ್ಹತೆ ಹೊಂದಿರುತ್ತದೆ.

ಅದ್ದರಿಂದ ಮೇಲಿನ ಎಲ್ಲಾ ವಿಚಾರಗಳನ್ನು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಆಲಂಕಾರು ಅಂಚೆ ಕಚೇರಿಯನ್ನು ಕೂಡಲೇ ಡಿಪಾರ್ಟ್‌ಮೆಂಟಲ್ ಸಬ್ ಪೋಸ್ಟ್ ಆಫೀಸು ಆಗಿ ಭಡ್ತಿ ಕೊಟ್ಟು ಮೇಲ್ದರ್ಜೆಗೇರಿಸಿ ಊರಿನವರಿಗೆ ಮತ್ತು ಇಲ್ಲಿರುವ ಹಲವಾರು ಸಂಘಸಂಸ್ಥೆಗಳವರಿಗೂ ಅನುಕೂಲತೆ ಮಾಡಿಕೊಡಬೇಕೆಂದು ಆಶಿಸಲಾಗಿದೆ.

—ಕೆ. ಗುರುನಾಥಾಚಾರ್ಯ

ಆಲಂಕಾರು

ಏಳು ವರ್ಷದ ಬಾಲಕನಿಗೂ ಪೂರ್ತಿ ಚಾರ್ಜ್

ಪ್ರಿಯರೆ,

ಪುತ್ತೂರು–ಬೆಂಗಳೂರು ಬಸ್ಸಿನಲ್ಲಿ (ರಾಜ್ಯ ಸಾರಿಗೆ ಸಂಸ್ಥೆ) ಪ್ರಯಾಣಿಸಲು ಮುಂಗಡವಾಗಿ ಟಿಕೇಟು ಖರೀದಿಸಲು ಪುತ್ತೂರಿಗೆ ಬಂದಿದ್ದೆ. [ನನಗೆ ತಿಳಿದಂತೆ ಸರಕಾರೀ ಆಜ್ಞೆಯಂತೆ 12 ವರ್ಷ ಕೆಳಗಿನ ಮಕ್ಕಳಿಗೆ ಅರ್ಧ ಚಾರ್ಜು. ಆದರೆ ಪುತ್ತೂರು ಬಸ್ಸು ನಿಲ್ದಾಣದ ಅಧಿಕಾರಿಗಳು ಕೇವಲ 7 ವರ್ಷದ ನನ್ನ ಮಗನಿಗೆ, ಅವನನ್ನು ತೋರಿಸಿದಾಗ್ಯೂ ಅರ್ಧ ಟಿಕೇಟು ಕೊಡುವುದಕ್ಕೆ ನಿರಾಕರಿಸಿದರು. ಎಷ್ಟೇ ವಿನಂತಿಸಿದರೂ, ಚರ್ಚಿಸಿದರೂ ಅವರು ಒಪ್ಪಲಿಲ್ಲ. ಅನಿವಾರ್ಯವಾಗಿ ಪ್ರಯಾಣಿಸಲೇ ಬೇಕಾದುದರಿಂದ 2ಪೂರ್ತಿ ಟಿಕೇಟು ಖರೀದಿಸಿದೆ.

ಹೀಗಾದರೆ ಸರಕಾರಿ ಆಜ್ಞೆಗೆ ಬೆಲೆಯೇನು. ಅಥವಾ ಇತ್ತೀಚೆಗೆ ಆ ಹಿಂದಿನ ಆಜ್ಞೆಗೆ ತಿದ್ದುಪಡಿಯೇನಾದರೂ ಆಗಿದೆಯೇ? ಇತರರಿಗೆ ಹೋಲಿಸಿದರೆ ತುಂಬಾ ದುಬಾರಿ ಎನ್ನಬಹುದಾದ ಶುಲ್ಕ ವಿಧಿಸುವ ಕ. ರಾ. ರ. ಸಾ. ಸಂಸ್ಥೆಯವರು ಮಕ್ಕಳಿಗೂ ಈ ರೀತಿ ಶುಲ್ಕ ವಿಧಿಸುವುದಾದಲ್ಲಿ ಇದು ಸುಲಿಗೆಯಲ್ಲದೆ ಮತ್ತೇನು? ಸಂಬಂಧ ಪಟ್ಟ ಅಧಿಕಾರಿಗಳು ಸರಕಾರೀ ಆಜ್ಞೆಗೆ ವಿರೋಧವಾಗಿ ಸಾರ್ವಜನಿಕ ವಿರೋಧಿ ನೀತಿ ತಾಳಿದ್ದಾರೆಯೇ.

—ಶ್ರೀಮತಿ ನಳಿನ ಜಗತ್ಪಾಲ

ಬೆಂಗಳೂರು

ವಿದ್ಯುತ್ ಕಡಿತಕ್ಕೆ ಪರಿಹಾರೋಪಾಯ

ಪ್ರಿಯರೆ,

ಬೇಸಿಗೆ ಬಂದ ಕೂಡಲೇ ಬೇಸರ ತರಿಸುವ ಹಲವು ಮಾನಸಿಕ ಕಷ್ಟಗಳಲ್ಲಿ ವಿದ್ಯುತ್ ಕಡಿತವೂ ಒಂದು. ಪಟ್ಟಣಗಳಲ್ಲಿ ವಾಸಿಸುವ ಹೆಚ್ಚಿನ ಜನರು ವಿದ್ಯುತ್ತಿನ ಉಪಯೋಗವನ್ನು ತಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದಾರೆ. ಕೇವಲ ಕೆಲವು ತಾಸು ವಿದ್ಯುತ್ ನಿಲುಗಡೆಯಾದರೂ ಸಾಕು, ಜನರ ಜೀವನ ಅಸ್ತವ್ಯಸ್ತವಾಗಿ ಹಲವು ದುರಂತಗಳಾಗುತ್ತದೆ. ವಿದ್ಯುತ್ ತೊಟ್ಟಿಲುಗಳು ಕೆಲಸ ಮಾಡದೆ ಬಹು ಅಂತಸ್ತಿನ ಕಟ್ಟಡದ ತುದಿಯಲ್ಲಿ ವಾಸಿಸುವವರು ಕೆಳಗಿಳಿದು ಬರಲಾಗದೆ ಆಫೀಸಿಗೆ ರಜೆ ಹಾಕಿ ಕೂತವರಿದ್ದಾರೆ. ವೃದ್ಧರು ಕಟ್ಟಡದ ತುದಿ ತಲುಪಲಾಗದೆ ರೋಗಿಗಳನ್ನು ಹೊತ್ತುಕೊಂಡು ಇಳಿಯ ಬೇಕಾಗುತ್ತದೆ. ರಾತ್ರಿಯ ಹೊತ್ತು ವಿದ್ಯುತ್ ನಿಲುಗಡೆಯಾದಾಗ ಉರಿಯೀ ಕತ್ತಲು ಕವಿದು ಫ್ಯಾನು, ಏರ್ ಕಂಡಿಷನ್‌ಗಳು, ಸೊಳ್ಳೆ ಓಡಿಸುವ ಯಂತ್ರಗಳು ಕೆಲಸ ಮಾಡವೆ, ರಾತ್ರಿಯಿಡೀ ಜನರು ನಿದ್ದೆ ಮಾಡಲಾರದೆ ಜಾಗರಣೆ ಮಾಡುವಂತಹ ಸಂದರ್ಭ ಬರುತ್ತದೆ. ಬೆಳಗ್ಗೆ ಎದ್ದು ಹಲ್ಲು ಉಜ್ಜುತ್ತಾ ಶೌಚ ಗೃಹವನ್ನು ಪ್ರವೇಶಿಸಿದ ಮೇಲೆ ನೀರು ಸರಬರಾಜು ಕೂಡಾ ಆತಂಕಗೊಂಡದ್ದು ತಿಳಿದು ಶಪಿಸುವವರಿದ್ದಾರೆ. ಒಟ್ಟಿನಲ್ಲಿ ವಿದ್ಯುತ್ ಸರಬರಾಜು ನಿಂತಾಗ ಉಂಟಾಗುವ ಸಂಕಷ್ಟಗಳನ್ನು ನಮ್ಮ ಹಿರಿಯರಾರೂ ಅನುಭವಿಸಿರಲಿಕ್ಕಿಲ್ಲ. ಹಳ್ಳಿಗಳಲ್ಲಿ ವಾಸಿಸುವವರು ಇವನ್ನೆಲ್ಲಾ ಕೇಳಿ ಲೇವಡಿ ಮಾಡಿ ನಗಾಡುತ್ತಾರೆ.

ಜನದನಿ

ಇತ್ತೀಚಿನ ದಿನಗಳಲ್ಲಿ ಮಳೆ ಸರಿಯಾಗಿ ಬರದಿರುವುದರಿಂದಲೂ, ಡೀಸಿಲಿನಂತಹ ಇಂಧನಗಳ ಬೆಲೆ ಬಹಳಷ್ಟು ಏರಿರುವುದರಿಂದಲೂ ವಿದ್ಯುತ್ತಿನ ಉತ್ಪಾದನೆ ಕಡಿಮೆಯಾಗಿದೆ. ಬೇಸಿಗೆ ಬರುತ್ತಿದ್ದಂತೆಯೇ ಸರಕಾರದವರು 30-40% ವಿದ್ಯುತ್ ಕಡಿತವನ್ನು ಘೋಷಿಸುತ್ತಾರೆ. ನಿಗದಿ ಮಾಡಿದ್ದಕ್ಕಿಂತ ಹೆಚ್ಚು ವಿದ್ಯುತ್ ಬಳಸುವವರಿಗೆ ದಂಡ ವಿಧಿಸುತ್ತಾರೆ. ಆದರೆ ಆರಾಮದ ಸೌಕರ್ಯಗಳಿಗೆ ಒಗ್ಗಿಹೋದ ನಮ್ಮ ಜನರಿಗೆ ಅದನ್ನು ಬಿಟ್ಟು ಇರಲು ಬಹಳ ಕಷ್ಟವಾಗುತ್ತದೆ. ಹೀಗಾಗಿ ವಿದ್ಯುತ್ ಬಳಕೆಯಲ್ಲಿ ಕಳ್ಳತನ ಆರಂಭವಾಗುತ್ತದೆ. ಇವಕ್ಕೆಲ್ಲಾ ಮೂಲ ಕಾರಣ ನಮ್ಮ ವಿದ್ಯುತ್ ಯೋಜನೆಗಳನ್ನು ಸರಿಯಾಗಿ ದೂರಾಲೋಚನೆ ಇಲ್ಲದೆ ಕಾರ್ಯಗತ ಮಾಡಿರುವುದಲ್ಲದೆ ತಕ್ಕ ಮುಂಜಾಗರೂಕತೆಯನ್ನು ಕ್ಲಿಪ್ತ ಸಮಯದಲ್ಲಿ ತೆಗೆದುಕೊಳ್ಳದಿರುವುದು.

ನಮ್ಮ ರಾಜಕಾರಣಿಗಳಾಗಲೀ ಅಥವಾ ವಿಜ್ಞಾನಿಗಳಾಗಲೀ ಇದರ ಬಗ್ಗೆ ಮೊದಲೇ ಸರಿಯಾಗಿ ಯೋಚಿಸಲಿಲ್ಲ. ಅಥವಾ ಇದಕ್ಕೆ ತಕ್ಕ ಪರ್ಯಾಯ ವ್ಯವಸ್ಥೆಯನ್ನೂ ತಯಾರಿಸಲಿಲ್ಲ. ಜನರನ್ನು ಸಮಾಧಾನ ಪಡಿಸಲು ಆಗಾಗ ಹೊಸ ವಿದ್ಯುತ್ ಜನಕಗಳನ್ನು ಕಟ್ಟುತ್ತಿದ್ದಾರೆ. ಆದರೆ ಇದಕ್ಕೆ ಬೇಕಾದ ಪರಮಾಣು ಇಂಧನಕ್ಕೆ ನಾವು ಪರದೇಶದವರನ್ನು ಅವಲಂಬಿಸಬೇಕಾಗಿದೆ. ಆದರೆ ಈ ಇಂಧನ ಪೂರೈಕೆ ಸ್ಥಗಿತಗೊಂಡರೆ ನಮ್ಮ ಗತಿ ಅಧೋಗತಿ. ಇಂತಹ ಪರಮಾಣು ವಿದ್ಯುತ್ ಜನಕಗಳಿಂದ ಉಂಟಾಗುವ ಅಪಘಾತ ಮತ್ತು ಅನಿಷ್ಟಗಳಿಗೆ ಎಂತಹ ಮುಂಜಾಗರೂಕತಾ ಕ್ರಮವನ್ನು ಕೈಕೊಂಡಿದ್ದಾರೆ ಎಂಬುದನ್ನು ನಾವಿನ್ನು ಕಾದು ನೋಡಬೇಕಷ್ಟೆ. ಇತ್ತೀಚೆಗೆ ಭೋಪಾಲದಲ್ಲಿ ನಡೆದಂಥಾ ದುರಂತ ಇನ್ನೊಮ್ಮೆ ನಡೆಯಲಿಕ್ಕಿಲ್ಲ ಎಂಬ ಧೈರ್ಯ ಯಾರಿಗೂ ಇರಲಿಕ್ಕಿಲ್ಲ. ಅಂದರೆ ಇವರ ಎಲ್ಲಾ ದುಷ್ಪರಿಣಾಮಗಳನ್ನು ಅನುಭವಿಸುವವರೂ ನಮ್ಮ ಜನ ಸಾಮಾನ್ಯರೇ.

ಊರಿನ ಹೊರಗೆ ಹಾಕಿದ ಕಸದ ರಾಶಿ ಬ್ಯಾಕ್ಟೀರಿಯಾಗಳ ಒಂದು ಕ್ರಿಯೆಯಿಂದ ಅನಿಲವನ್ನು ಉತ್ಪಾದಿಸುತ್ತದೆ. ಈ ಅನಿಲವು ಈಗ ವಾತಾವರಣವನ್ನು ಸೇರಿ ಗಾಳಿಯನ್ನೂ ಸೇರಿ ಕಲುಷಿತಗೊಳಿಸುತ್ತಿದೆ. ಇಂತಹ ಸ್ಥಳಗಳಲ್ಲಿ ಕೊಳವೆ ಬಾವಿಯನ್ನು ಕೊರೆದು ಜಾಲರಿಯಂತೆ ತೂತಿರುವ ಕೊಳವೆಯನ್ನು ಇದರಲ್ಲಿ ಇಳಿಸಿ ಇದರ ತಳಭಾಗದಲ್ಲಿ ನಿರ್ವಾತ ಪ್ರದೇಶವನ್ನು ಸೃಷ್ಟಿಸಿದಾಗ ಆ ಜನ್ಯ ಪ್ರದೇಶದ ನೆಲದಲ್ಲಿ ಉಂಟಾದ ಅನಿಲವನ್ನು ಹೀರುತ್ತದೆ. ಈ ಅನಿಲವನ್ನು ಕೊಳವೆಗಳ ಮೂಲಕ ವಿದ್ಯುತ್ ಜನಕಕ್ಕೆ ಕೊಂಡು ಹೋಗಿ ವಿದ್ಯುತ್ತನ್ನು ಉತ್ಪಾದಿಸಬಹುದು.

ವಿಸ್ತಾರವಾದ ಪ್ರದೇಶದಲ್ಲಿ ಪ್ರತೀ ಒಂದು ಎಕ್ರೆಗೆ ಒಂದು ಕೊಳವೆ ಭಾವಿಯನ್ನು ಕೊರೆಯಬಹುದು, ಇದರಿಂದ ಪ್ರತೀ ಕೊಳವೆಗೆ 100 ಕಿಲೋ ವಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ. ಇದಕ್ಕೆ ತಗಲುವ ವೆಚ್ಚ ಸರಿಸುಮಾರು 10 ಲಕ್ಷ ರೂಪಾಯಿಗಳು. ಕೊಳವೆ ಭಾವಿಗಳ ಸಂಖ್ಯೆ ಹೆಚ್ಚಾದಂತೆ ಖರ್ಚು ಕಡಿಮೆಯಾಗಿ ವಿದ್ಯುತ್ತಿನ ಉತ್ಪಾದನೆ ಹೆಚ್ಚಾಗುತ್ತದೆ. ಹೀಗೆ ಉತ್ಪಾದಿಸಿದ ವಿದ್ಯುತ್ತಿನ ಬೆಲೆ ಪ್ರತೀ ಯುನಿಟ್ಟಿಗೆ 10ಪೈಸೆ ಮಾತ್ರ (ಈಗ ಯುನಿಟ್ಟಿಗೆ 60 ಪೈಸೆ ಇದೆ). ಇದರಿಂದ ಸುಮಾರು ಹತ್ತು ವರ್ಷಗಳ ವರೆಗೆ ವಿದ್ಯುತ್ತನ್ನು ಉತ್ಪಾದಿಸಬಹುದು. ಒಂದು ನಗರದಿಂದ ಒಂದು ವರುಷಕ್ಕೆ ಮೂರರಿಂದ ನಾಲ್ಕು ಎಕ್ರೆ ಸ್ಥಳ ತುಂಬುವಷ್ಟು ಕಸ ದೊರೆಯುತ್ತದೆ. ಅಂದರೆ ಪ್ರತಿ ವರುಷಕ್ಕೆ ಈ ಸ್ಥಳದಿಂದ 4 ಮೆಗಾವಾಟ್ ವಿದ್ಯುತ್ತನ್ನು ಉತ್ಪಾದಿಸಬಹುದು. ಇದು ಆ ಕಾಲನಿ ಮನೆಗಳ ದಿನ ಬಳಕೆಯ ಉಪಯೋಗಕ್ಕೆ ಧಾರಾಳ ಸಾಕಾಗುತ್ತದೆ.

ನಮ್ಮ ಸರಕಾರವು ಇಂತಹ ಯೋಜನೆಗಳನ್ನು ಸಾಧ್ಯವಾದಷ್ಟು ಬೇಗನೆ ಕಾರ್ಯಗತಗೊಳಿಸುವುದು ಮಾತ್ರವಲ್ಲದೆ ದಿನ ಬಳಕೆಯ ಸೌಕರ್ಯಗಳನ್ನೂ ಅಡಚಣೆ ಇಲ್ಲದೆ ಒದಗಿಸುವ ರೀತಿಯನ್ನು ಆಲೋಚಿಸಬೇಕು. ಬರೇ ಕಾನೂನನ್ನು ಮಾಡುವುದರಿಂದ ಜನರ ಜೀವನ ಸುಖಮಯವಾಗಲಿಕ್ಕಿಲ್ಲ. ಆ ಕಾನೂನನ್ನು ಸರಿಯಾದ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ಆಚರಣೆಗೆ ತರುವುದರಿಂದ ಮಾತ್ರ ನಮ್ಮ ದೇಶ ಪ್ರಗತಿಯನ್ನು ಸಾಧಿಸೀತು. ಆದರೆ ಈಗ ಆಗಿರುವುದು ವಿದ್ಯುತ್ ಕಡಿತದ ಕಾನೂನು ಮಾತ್ರ. ಈ ಕಡಿತ ಇನ್ನೂ ಕೆಲವು ವರುಷ ಕಡಿಯುತ್ತಿದ್ದರೆ ನಮ್ಮ ಮುಂದಿನ ಪೀಳಿಗೆ ನಮ್ಮ ಕಾರ್ಯ ವೈಖರಿಯನ್ನು ಲೇವಡಿ ಮಾಡುವುದು ಖಂಡಿತ.

—ಯಂ. ಮಾಧವ ಆಚಾರ್
ಉಪನ್ಯಾಸ

ಮಂಗಳೂರು

ಚಿಂತನೆ

ಧರ್ಮವು ನಮ್ಮ ಆನಾಗರಿಕ ಮತ್ತು ಪೈಶಾಚಿಕ ಗುಣಗಳನ್ನು ಪಳಗಿಸಲು ಇರುವ ಸಾಧನ.

—ಗಾಂಧಿ

ಸುರತ್ಕಲ್ ವಿ.ಹ.ವಿ. ಸಂಘದ ಸ್ವರ್ಣ ಮಹೋತ್ಸವ

ಸುರತ್ಕಲ್ಲು ಪರಿಸರದ ಗ್ರಾಮೀಣ ಪ್ರದೇಶಗಳ ಶೈಕ್ಷಣಿಕ ಇತಿಹಾಸದಲ್ಲಿ 1916-ಮಹತ್ವದ ವರ್ಷ. ಅಂದು ಸ್ಥಾಪನೆಗೊಂಡ ವಿದ್ಯಾದಾಯಿನಿ ಶಿಕ್ಷಣ ಸಂಸ್ಥೆ-ಹಳ್ಳಿಗಳ ಬದುಕಿನಲ್ಲಿ ಹೊಸ ಅಧ್ಯಾಯವನ್ನೇ ಮೊದಲು ಮಾಡಿತು. ಮಂಗಳೂರುಗಳಂತಹ ನಗರಗಳಿಗೆ ಹೋಗಿ ಶಿಕ್ಷಣ ಪಡೆಯುವುದು ಕನಸಿನ ಮಾತಾಗಿದ್ದ ಇಲ್ಲಿನ ಎಳೆಯರಿಗೆ ಇಲ್ಲೇ ವಿದ್ಯಾದಾನ ಒದಗಿಸುವ ಕಾರ್ಯ ಅಂದು ಪ್ರಾರಂಭಗೊಂಡಿತು.

ಮುಂದೆ 7ದಶಕಗಳಲ್ಲಿ ವಿದ್ಯಾದಾಯಿನಿ ಸಾಧಿಸಿದ ಮುನ್ನಡೆ ಅನುಪಮವಾದದ್ದು. ಮೂಲ ಪಾಠ ಶಾಲೆ, ಹಿರಿಯ ಪ್ರಾಥಮಿಕ ಶಾಲೆಯಾಗಿ ಉದಯಿಸಿ-ಆರಂಭದ 30 ವರ್ಷಗಳಲ್ಲಿ ತನ್ನ ಸಾರ್ಥಕ ಶಿಕ್ಷಣ ಪ್ರಸಾರದಿಂದಾಗಿ ಜಿಲ್ಲೆಯಲ್ಲೇ ಪ್ರಸಿದ್ಧಿ ಪಡೆದ ಸಂಸ್ಥೆಯಾಯಿತು.

ನವೋದಯದ ಜಾಗೃತಿ

1944ರಲ್ಲಿ ವಿದ್ಯಾದಾಯಿನಿ ಪ್ರೌಢ ಶಾಲೆ ಪ್ರಾರಂಭಗೊಂಡು ಇಲ್ಲಿ ಜನಜೀವನಕ್ಕೆ 'ನವೋದಯ'ದ ಜಾಗೃತಿಯನ್ನುಂಟು ಮಾಡಿತು. ಅಂದಿನವರೆಗೂ ಗಗನ ಕುಸುಮವಾಗಿದ್ದ ಎಸ್ಸೆಸ್ಸೆಲ್ಸಿ ಮಟ್ಟದ ಶಿಕ್ಷಣಾವಕಾಶ ಹಳ್ಳಿಯಲ್ಲೇ ಲಭ್ಯವಾಯಿತು. 1965ರಲ್ಲಿ ಗೋವಿಂದದಾಸ ಕಾಲೇಜು ಸ್ಥಾಪನೆಗೊಂಡು ಪರಿಸರದ ವಿದ್ಯಾರ್ಥಿಗಳ ಜ್ಞಾನದಿಗಂತ ಇನ್ನಷ್ಟು ವಿಸ್ತರಿಸುವುದು ಸಾಧ್ಯವಾಯಿತು. ಇಂದು ವಿದ್ಯಾದಾಯಿನಿಯ ಆಡಳಿತಕ್ಕೊಳಪಟ್ಟ ನಾಲ್ಕು ಶಿಕ್ಷಣ ಸಂಸ್ಥೆಗಳಲ್ಲಿ ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯದ ಪದವಿಯ ಮಟ್ಟದವರೆಗೆ ಒಟ್ಟು 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾರ್ಜನೆ ನಡೆಸುತ್ತಿದ್ದಾರೆ. ಇತ್ತೀಚೆಗೆ-ಪೂರ್ವ ಪ್ರಾಥಮಿಕ-ಬಾಲ ವಿಕಾಸ ಕೇಂದ್ರವೂ ಇಲ್ಲಿ ಆರಂಭಗೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕೃತಜ್ಞತೆಯ ಕಾಣಿಕೆ

ತನಗೆ ವಿದ್ಯಾದಾನ ಮಾಡಿದ ವಿದ್ಯಾದಾಯಿನಿಯನ್ನು ಮರೆಯಬಾರದೆನ್ನುವ ಕೃತಜ್ಞತೆಯ, ಸಂಸ್ಮರಣೆಯ ಸದ್ಭಾವದಿಂದ 22-3-1936ರಂದು ವಿದ್ಯಾದಾಯಿನಿ ಹಳೆ ವಿದ್ಯಾರ್ಥಿ ಸಂಘ ಜನ್ಮ ತಾಳಿತು.

ವಿದ್ಯಾದಾಯಿನಿಗೆ ವಿದ್ಯುದ್ದೀಪಗಳ ಕೊಡುಗೆ, ತನ್ನ ಬೆಳ್ಳಿಹಬ್ಬದ ಸ್ಮರಣಾರ್ಥ ವಿದ್ಯಾದಾಯಿನಿ ಕಲಾ ಮಂದಿರದ ಕಾಣಿಕೆ. ಕಾಲೇಜು ಸ್ಥಾಪನಾ ನಿಧಿ ಸಂಗ್ರಹ, ಬಡ ವಿದ್ಯಾರ್ಥಿಗಳಿಗಾಗಿ ವಿವಿಧ ವೇತನ, ಸಹಾಯ ಸಮವಸ್ತ್ರ, ಬಹುಮಾನ ನಿಧಿಗಳ ಸ್ಥಾಪನೆ-ನಿರ್ವಹಣೆ,- ಗುರು ವಂದನ, ಮೊದಲಾದ ಹತ್ತು-ಹಲವು ಕಾರ್ಯಕ್ರಮಗಳನ್ನು ಇದು ನಡೆಸುತ್ತ ಬಂದಿದೆ. ಆಗಾಗ ವಿವಿಧ ಸ್ಪರ್ಧೆಗಳನ್ನು-ಮುಕ್ತಗಾನ, ನಾಟಕ ಆಟೋಟ ಸ್ಪರ್ಧೆಗಳನ್ನು – ಏರ್ಪಡಿಸಿ ಹಳೆ ವಿದ್ಯಾರ್ಥಿಗಳನ್ನು ಒಂದು ಗೂಡಿಸುವ, ಪ್ರೋತ್ಸಾಹಿಸುವ ಪ್ರಯತ್ನ ನಡೆಸುತ್ತಲೇ ಇದೆ. ಶೈಕ್ಷಣಿಕ ವಸ್ತುಪ್ರದರ್ಶನ, ಕಲಾಕೃತಿಗಳ ಪ್ರದರ್ಶನಗಳಂತಹ ವಿಧಾಯಕ ಕಾರ್ಯಕ್ರಮಗಳನ್ನು ಇದು ವ್ಯವಸ್ಥೆಗೊಳಿಸುತ್ತ ಬಂದಿದೆ.



'ವಿದ್ಯಾದಾಯಿನಿ ಕಲಾ ಮಂದಿರ' ವಿ. ಹ. ವಿ. ಸಂಘದ ಬೆಳ್ಳಿಹಬ್ಬದ ಕೊಡುಗೆ (1962)

ಇದೀಗ ಮುಂಬಯಿ ಹೈಕೋರ್ಟಿನಲ್ಲಿ ನ್ಯಾಯಾಧೀಶರಾಗಿರುವ ನ್ಯಾಯಮೂರ್ತಿ ಹೊಸಬೆಟ್ಟು ಸುರೇಶ್ 'ವಿದ್ಯಾದಾಯಿನಿಯ ಕೊಡುಗೆ ಎನ್ನುವುದು ಅಭಿಮಾನದ ಸಂಗತಿ. ವಿ. ಪ್ರೌಢ ಶಾಲೆಯ ಪ್ರಥಮ ಮುಖ್ಯೋಪಾಧ್ಯಾಯ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಎಂ. ವಾಸುದೇವರಾಯರೂ ವಿದ್ಯಾದಾಯಿನಿಯ ಹಳೇ ವಿದ್ಯಾರ್ಥಿಗಳೇ ಆಗಿದ್ದಾರೆ. ಆ ಮೇಲಿನ ಮುಖ್ಯೋಪಾಧ್ಯಾಯ ಪಿ. ನಾರಾಯಣಾಚಾರ್ಯರು ರಾಜ್ಯ ಪ್ರಶಸ್ತಿಯ ಮನ್ನಣೆ ಗಳಿಸಿರುವುದು ಹೆಮ್ಮೆಯ ವಿಷಯ. ಅಲ್ಲದೆ ಔದ್ಯೋಗಿಕ-ಶೈಕ್ಷಣಿಕ, ವೈದ್ಯಕೀಯ, ಇಂಜಿನಿಯರಿಂಗ್ ಕಲಾ-ಪತ್ರಿಕೋದ್ಯಮ ಮುಂತಾದ ವಿವಿಧ ಕ್ಷೇತ್ರಗಳಲ್ಲೂ ವಿ. ಹ. ವಿ. ಸಂಘದ ಸದಸ್ಯರು ಕೀರ್ತಿ ಪಥದಲ್ಲಿ ಮುನ್ನಡೆದಿದ್ದಾರೆನ್ನುವುದು ಅಭಿನಂದನಾರ್ಹ.

ಇಂದು 80 ವರ್ಷದ ವಯಸ್ಸಿನ ಹಿರಿಯರಿಂದ ತೊಡಗಿ 20 ವರ್ಷಗಳ ತರುಣರ ವರೆಗೂ ಒಟ್ಟು 5000ಕ್ಕೂ ಮಿಕ್ಕಿ ಸದಸ್ಯಸಂಪತ್ತುಳ್ಳ ವಿ. ಹ. ವಿ. ಸಂಘವು "ಹಳೆಬೇರು – ಹೊಸಚಿಗುರು" ಗಳಿಂದ ಕೂಡಿಕೊಂಡು - ಸದಾ ಎಲ್ಲರಿಗೂ ತಂಪೆರೆಯುವ ಹಸಿರು – ಹೆಮ್ಮರವಾಗಿ ಹಿಗ್ಗುತ್ತಿದೆ. ಐವತ್ತು ವರ್ಷಗಳ ಸಾರ್ಥಕ ಅಸ್ತಿತ್ವದಿಂದ ಇದು ಎಲ್ಲರ ಗಮನವನ್ನು ತನ್ನ ಕಡೆ ಸೆಳೆಯುತ್ತಿದೆ.

ಅರಳಿದ ಸುವರ್ಣ ಸುಮ

ಐವತ್ತು ದಾಟಿದ ವಿ.ಹ.ವಿ. ಸಂಘವು ಇದೀಗ ತನ್ನ 'ಬಂಗಾರದ ಹಬ್ಬ'ವನ್ನು ವಿಶಿಷ್ಟವಾಗಿ, ರಚನಾತ್ಮಕ ರೀತಿಯಲ್ಲಿ ನಡೆಸುವ ಯೋಜನೆಗಳನ್ನು ಹಮ್ಮಿಕೊಂಡಿದೆ. "ನಾಲ್ಕು ಸಂಸ್ಥೆಗಳಿಗೂ ನಾಲ್ಕು ಕೊಡುಗೆಗಳೂ"- ಎಂಬ 8 ಲಕ್ಷ ರೂಪಾಯಿಗಳ ಕಾರ್ಯವಿನ್ಯಾಸ ಕಣ್ಣಮುಂದಿಟ್ಟು ಕುಳಿಕ್ಕು ಎಸ್. ವಿ. ಹಿ. ಪ್ರಾಥಮಿಕ ಶಾಲೆಗೆ ರೂ. 40,000 ವೆಚ್ಚದಲ್ಲಿ ಸಿದ್ಧಗೊಂಡ ನೂತನ ತರಗತಿ ಕೋಣೆಯನ್ನು 'ಸುವರ್ಣ ಸುಮ'ವಾಗಿ ಈಗಾಗಲೇ ಅರ್ಪಿಸಿದೆ. ವಿ. ಹಿ. ಪ್ರಾಥಮಿಕ ಶಾಲೆ, ವಿ.ಹೈಸ್ಕೂಲ್ ಮತ್ತು ಗೋವಿಂದ ದಾಸ ಕಾಲೇಜುಗಳಿಗಾಗಿ ಅನುಕ್ರಮವಾಗಿ, ಹೊಸ ಶಾಲಾ ಕಟ್ಟಡ, ಗ್ರಂಥ ಭಂಡಾರ, ಕ್ರೀಡಾ ಮಂದಿರಗಳನ್ನು ರಚಿಸಿ ಕಾಣಿಕೆಯಾಗಿ ನೀಡುವ ಸಲುವಾಗಿ ಧನ ಸಂಗ್ರಹ ಕಾರ್ಯ ಭರದಿಂದಸಾಗಿದೆ. ಈಗಾಗಲೇ ವಾಗ್ದಾನ, ನಗದು ರೂಪಗಳಲ್ಲಿ ಆರು ಲಕ್ಷ ರೂ. ಸಂಗ್ರಹವಾಗಿದೆ. ದೇಶ-ವಿದೇಶಗಳಿಂದ ಕೃತಜ್ಞತೆಯಿಂದ ಸ್ಮರಿಸುತ್ತ ಹಳೆವಿದ್ಯಾರ್ಥಿಗಳು, ಶಿಕ್ಷಣಾಭಿಮಾನಿಗಳು ಉದಾರವಾಗಿ ಸಹಾಯದ ಮಹಾಪೂರವನ್ನೇ ವಿದ್ಯಾದಾಯಿನಿಗೆ ಹರಿಸುತ್ತಿದ್ದಾರೆ. ಇದರಿಂದ ಒಳ್ಳೆಯ ಕಾರ್ಯಗಳಿಗೆ ಹಣದ ಅಭಾವ ಎಂದೂ ಉಂಟಾಗದು ಎಂಬ ವಿಶ್ವಾಸ ಎಲ್ಲರಲ್ಲಿಯೂ ಮೂಡತೊಡಗಿದೆ. 'ವಿದ್ಯೆಗಾಗಿ ನೀಡುವ ಸಹಾಯಕ್ಕಿಂತ ಮಿಗಿಲಾದ ಸಹಾಯವಿಲ್ಲ' ಎಂಬ ವಿವೇಕಾನಂದರ ನುಡಿಗಳನ್ನು– ಅಕ್ಷರಶಃ –ಶಿಕ್ಷಣಾಭಿಮಾನಿಗಳು ಕಾರ್ಯರೂಪಕ್ಕೆ ತರುತ್ತಿದ್ದಾರೆ–ಎನ್ನುವುದು ಸಂತೋಷದ ವಿಚಾರವಾಗಿದೆ.

3 ದಿನಗಳ ಉತ್ಸವ

ಇದೇ ಜನವರಿ 30, 31ಮತ್ತು ಫೆಬ್ರವರಿ 1ರಂದು ಮೂರು ದಿನಗಳಲ್ಲಿ- ವಿ.ಹ.ವಿ. ಸಂಘವು ತನ್ನ ಹೊಸ ಹಬ್ಬವನ್ನು ಸಂಭ್ರಮದಿಂದ ಸಡಗರಗಳಿಂದ ನಡೆಸಲು ಸಿದ್ಧತೆ ನಡೆಸಿದೆ. ಸುವರ್ಣ ಮಹೋತ್ಸವದ ಸ್ಮರಣಾರ್ಥವಾಗಿ ಅಂದು 'ಸುಮನಸ' ಎಂಬ ಸಂಸ್ಮರಣಿಕೆ ಬಿಡುಗಡೆಗೊಳ್ಳಲಿದೆ. ವಿವಿಧ ವಸ್ತು- ಕಲಾಕೃತಿಗಳ ಪ್ರದರ್ಶನ, ಆಟೋಟ ಸ್ಪರ್ಧೆ, ಮನರಂಜನೆ, ಗುರುವಂದನೆ, ದಾನಿಗಳ ಚಿತ್ರಗಳ ಅನಾವರಣ ಮೊದಲಾದ ಕಾರ್ಯಕ್ರಮಗಳ ವ್ಯವಸ್ಥೆಯಾಗಿದೆ.

ದ. ಕ. ಜಿಲ್ಲಾ ನ್ಯಾಯಾಧೀಶ ಆರ್. ಜಿ. ವೈದ್ಯನಾಥ, ಡಾ. ಬಿ. ಎಂ. ಹೆಗ್ಡೆ, ಅಂಬಲಪಾಡಿ ಕೃಷ್ಣರಾವ್, ನ್ಯಾಯಮೂರ್ತಿ ಎಚ್. ಸುರೇಶ್, ಪಿ. ಜನಾರ್ದನ ರಾವ್, ಎಂ. ವಾಸುದೇವರಾವ್, ಪ್ರೊ| ಕೆ. ಸುನೀತ ಎಂ. ಶೆಟ್ಟಿ- ಮೊದಲಾದ ಮಹನೀಯರು ಈ ಉತ್ಸವದಲ್ಲಿ ಅಧಿಕೃತವಾಗಿ ಸಹಭಾಗಿಗಳಾಗಲಿದ್ದಾರೆ. ಪೇಜಾವರ ಮಠಾಧೀಶರಾದ ವಿಶ್ವೇಶ ತೀರ್ಥರು ಆಗಮಿಸಿ- ಆಶೀರ್ವಚನ ನೀಡಲಿರುವರು. ಇವೆಲ್ಲೊಂದು ವಿಶೇಷ ಮಹತ್ವದ ಘಟನೆ- ಇವೆಲ್ಲವೂ 'ವಿದ್ಯಾದಾಯಿನಿ ಕಲಾ ಮಂದಿರ'ದಲ್ಲಿ ನೆರವೇರಲಿದೆ.

ವಿ. ಹ. ವಿ. ಸಂಘದ ಅಧ್ಯಕ್ಷ ಆರ್. ಬಿ. ಸನಿಲ್ ಮತ್ತು ಸುವರ್ಣ ಮಹೋತ್ಸವ ಸಮಿತಿಯ ಅಧ್ಯಕ್ಷ ಪ್ರೊ. ಎಚ್. ಜಿ. ಕೆ. ರಾವ್ ಸರ್ವರ ಸಹಕಾರದಿಂದ ವ್ಯವಸ್ಥೆಗೊಳಿಸಿರುವ ಈ "ಉತ್ಸವ" ಮತ್ತು ಯೋಜನೆಗಳು ಈ ಗ್ರಾಮೀಣ ಪ್ರದೇಶದ ಶೈಕ್ಷಣಿಕ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆಯುವುದರಲ್ಲಿ ಸಂದೇಹವಿಲ್ಲ.

ಡಾ|| ಸೀ. ಹೊಸಬೆಟ್ಟು

ಮಾಜಿ ಮೇಯರರ ಅಭಿನಂದನೆ

ಮಂಗಳೂರು, ಜ. 29–"ನಗರದ ಅಭಿವೃದ್ಧಿಯ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಹಲವು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಅವುಗಳನ್ನು ಪೂರ್ಣಗೊಳಿಸುವುದರೊಂದಿಗೆ ಇನ್ನಷ್ಟು ಜನೋಪಯೋಗಿ ಕಾರ್ಯಗಳನ್ನು ಮಾಡಿ" ಎಂದು ಇಂದು ಅಧಿಕಾರ ಬಿಟ್ಟುಕೊಟ್ಟ ಮಂಗಳೂರು ಮಹಾನಗರಪಾಲಿಕೆಯ ಮೇಯರ್ ಡಾ| ಸಿ. ಕೆ. ಬಂಟ್ವಾಳ್ ಅವರು ಹೊಸ ಮೇಯರ್ ಅಜಿತ್ ಕುಮಾರ್ ಅವರನ್ನು ಅಭಿನಂದಿಸಿ ಹೇಳಿದರು.

ಕಾರ್ಪೊರೇಟರ್‌ಗಳು ಕೆಲವೊಮ್ಮೆ ಸ್ವತಹ ಸಮೂಹ ಮಾಧ್ಯಮಗಳಿಗೆ ಹೇಳಿಕೆ ಕೊಡುವುದು ಸರಿಯಲ್ಲ. ಮೇಯರ್ ಮತ್ತು ಕಮಿಷನರ್ ಅವರು ಮಾತ್ರ ಆಡಳಿತ ವ್ಯವಸ್ಥೆಯ ಬಗ್ಗೆ ಸಮಜಾಯಿಷಿ ಕೊಡುವುದು... ಸಮೂಹ ಮಾಧ್ಯಮಗಳಿಗೆ ಹೇಳಿಕೆ ಕೊಡಬಹುದು. ಈ ಪರಂಪರೆಯನ್ನು ಇತರರು ಅನುಸರಿಸುವಂತಾಗಲಿ ಎಂದರು.

ತಮ್ಮ ಅಧಿಕಾರದ ಅವಧಿಯಲ್ಲಿ ಸರ್ವರೀತಿಯ ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆಯನ್ನು ಡಾ| ಸಿ. ಕೆ. ಬಂಟ್ವಾಳ್ ಅವರು ಸೂಚಿಸಿದರು.

ಕಮಿಷನರ್ ಬಸವಣ್ಣಪ್ಪ ಅವರು ಮೇಯರ್ ಡಾ| ಸಿ. ಕೆ. ಬಂಟ್ವಾಳ್ ತಮಗೆ ಒಳ್ಳೆಯ ಸಹಕಾರ ನೀಡಿ ಆಡಳಿತ ನಿರ್ವಹಿಸಲು ನೆರವಾಗಿದ್ದಾರೆ ಎಂದು ಶ್ಲಾಘಿಸಿದರು. ಬಿಜೆಪಿ ಪಕ್ಷದ ನಾಯಕ ಕೆ. ನಾರಾಯಣ ಶೆಟ್ಟಿ ಅವರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಹುತಾತ್ಮರಿಗಾಗಿ ಮೌನ ಪ್ರಾರ್ಥನೆ

ಮಂಗಳೂರು, ಜ. 29- ಭಾರತ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣ ತೆತ್ತವರ ಸ್ಮರಣಾರ್ಥವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಜನವರಿ 30 ರಂದು ಬೆಳಗ್ಗೆ 11 ಗಂಟೆಯಿಂದ ಎರಡು ನಿಮಿಷಗಳ ಕಾಲ ಮೌನ ಆಚರಿಸುವಂತೆ ದ. ಕ. ಜಿಲ್ಲಾಧಿಕಾರಿಗಳು ವಿನಂತಿಸಿಕೊಂಡಿದ್ದಾರೆ.

●ಹಳೆಯಂಗಡಿ, ಜ.29- ಇಲ್ಲಿನ ಕೆನರಾ ಬ್ಯಾಂಕಿನಲ್ಲಿ 6–7ವರ್ಷಗಳಿಂದ ಸೇವೆಸಲ್ಲಿಸಿ ಇದೀಗ ಮಂಗಳೂರಿನ ಕೆನರಾ ಬ್ಯಾಂಕ್ ವಲಯ ಕಚೇರಿಗೆ ವರ್ಗವಾಗಿ ಹೋಗುತ್ತಿರುವ ಸರೋಜಾ ಪದ್ಮನಾಭ್ ಅವರಿಗೆ ಹಾರ್ದಿಕವಾಗಿ ಇತ್ತೀಚೆಗೆ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಬ್ಯಾಂಕಿನ ಹಿರಿಯ ಶಾಖಾಧಿಕಾರಿ ಎಂ. ಪಿ. ಭಟ್ ವಹಿಸಿದ್ದರು. ಬ್ಯಾಂಕಿನ ಮ್ಯಾನೇಜರ್ ಮತ್ತು ಉದ್ಯೋಗಿಗಳ ಪರವಾಗಿ ಅವರಿಗೆ ನೆನಪಿನ ಕಾಣಿಕೆಯನ್ನು ನೀಡಲಾಯಿತು. ವೈ. ಸೇಸು ವಂದಿಸಿದರು.

ತಣ್ಣೀರುಬಾವಿ ತೀರದಲ್ಲಿ ಪ್ರವಾಸೋದ್ಯಮ ಕುಟೀರ

ಮಂಗಳೂರು, ಜ. 29– ಮಂಗಳೂರು ತಾಲೂಕಿನ ತಣ್ಣೀರು ಬಾವಿ ಗ್ರಾಮದ ಬಳಿ ಸಮುದ್ರ ತೀರದಲ್ಲಿ ರಾಜ್ಯ ಸರಕಾರದ ಪ್ರವಾಸೋದ್ಯಮ ಇಲಾಖೆಯು ಉಪಹಾರ ಗೃಹ, ಶೌಚಗೃಹ ಹಾಗೂ ಕ್ರೀಡಾಂಗಣದ ಸೌಲಭ್ಯವನ್ನು ಒಳಗೊಂಡ ಒಂದು ಪ್ರವಾಸೋದ್ಯಮ ಕುಟೀರವನ್ನು ಸ್ಥಾಪಿಸಲು ಉದ್ದೇಶಿಸಿದೆ ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಕೆ. ಶ್ರೀನಿವಾಸನ್ ತಿಳಿಸಿದರು.

ನವ ಮಂಗಳೂರು ಬಂದರಿನ ವಸತಿ ಗೃಹದಲ್ಲಿ ಇತ್ತೀಚೆಗೆ ದ. ಕ. ಜಿಲ್ಲಾಧಿಕಾರಿ ಸುಧೀರ್ ಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುವ ದೃಷ್ಟಿಯಿಂದ ಪ್ರವಾಸೋದ್ಯಮ ನಿಗಮವು ಈಗಾಗಲೇ ಪುತ್ತೂರು ತಾಲೂಕಿನ ಬೆಂದ್‌ತೀರ್ಥದಲ್ಲಿ ಬಿಸಿ ನೀರಿನ ಬುಗ್ಗೆಯನ್ನು ಅಭಿವೃದ್ಧಿ ಪಡಿಸಿದ್ದು, ಅಲ್ಲಿ ಸ್ನಾನಗೃಹ, ಶೌಚಗೃಹಗಳನ್ನು ನಿರ್ಮಿಸಲಾಗಿದೆ ಎಂದು ತಿಳಿಸಿದರು.

ಬಂಟ್ವಾಳ ತಾಲೂಕಿನ ಕಾರಿಂಜೇಶ್ವರ ದೇವಾಲಯಕ್ಕೆ ಹೋಗುವ ರಸ್ತೆಯನ್ನು ಅಭಿವೃದ್ಧಿ ಪಡಿಸಲು ನಿಗಮವು ಈಗಾಗಲೇ 50 ಸಾವಿರ ರೂ.ಗಳನ್ನು ಬಿಡುಗಡೆ ಮಾಡಿದೆ ಎಂದು ತಿಳಿಸಿದ ಅವರು, ಮಂಗಳೂರು ತಾಲೂಕಿನ ಪೊಳಲಿ ತೀರ್ಥ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ, ಅಲ್ಲಿ ವಿದ್ಯುತ್ ಸೌಕರ್ಯ ಕಲ್ಪಿಸಲು ನಿಗಮವು ಹಣಕಾಸಿನ ನೆರವನ್ನು ನೀಡಲಿದೆ ಎಂದರು.

7ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಕೃತಿ ಸೌಂದರ್ಯ ವೀಕ್ಷಿಸಲು ಹಾಗೂ ಕರ್ನಾಟಕದಲ್ಲಿ ಹೆಚ್ಚಿನ ಪ್ರವಾಸಿಗರನ್ನು ಆಕರ್ಷಣೆ ಮಾಡಲು 27 ವೀಕ್ಷಣಾ ಕೇಂದ್ರ (ವೇ ಸೈಡ್ ಫೆಸಿಲಿಟೀಜ್)ಗಳನ್ನು ನಿರ್ಮಾಣ ಮಾಡಲು ಕೇಂದ್ರ ಸರಕಾರವು ಮಂಜೂರಾತಿ ನೀಡಿದ್ದು, ಈ ಯೋಜನೆಯಡಿಯಲ್ಲಿ ಮುಂದಿನ 1987-88ನೇ ಸಾಲಿನಲ್ಲಿ ದ. ಕ. ಜಿಲ್ಲೆಯ ಶಿರೂರು, ಮರವಂತೆ, ಹಾಗೂ ಶಿರಾಡಿ ಘಟ್ಟದ ಪ್ರದೇಶದಲ್ಲಿ ಒಂದೊಂದು ವೀಕ್ಷಣಾ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಶ್ರೀನಿವಾಸನ್ ತಿಳಿಸಿದರು.

●ಸಿಸ್ಟರ್, ಜ. 29–ಇಲ್ಲಿನ ಹೆಸರಾಂತ ಅಡಿಕೆ ವ್ಯಾಪಾರಿ ಹಾಗೂ ಆಯುರ್ವೇದ ವೈದ್ಯ ವೃತ್ತಿ ನಡೆಸುತ್ತಿದ್ದ ಗಣಪತಿ ರಾಮಕೃಷ್ಣ ಹೆಗಡೆ ಅವರು ಇತ್ತೀಚೆಗೆ ನಿಧನರಾದರು. ದಿವಂಗತರ ಗೌರವಾರ್ಥ ಇಲ್ಲಿನ ಪೇಟೆಯಲ್ಲಿ ವ್ಯವಹಾರ ಮುಚ್ಚಿತ್ತು.

ಸಾಯಮಾತಿ ಒತ್ತಾಯಿಸಿ ಗುತ್ತಿಗೆ ಉಪನ್ಯಾಸಕರ ಮುಷ್ಕರ

ಮಂಗಳೂರು, ಜ. 29– ಗುತ್ತಿಗೆ ಆಧಾರಿತ ಉಪನ್ಯಾಸಕರು ಮತ್ತು ಉಪಾಧ್ಯಾಯರನ್ನು ಖಾಯಂಗೊಳಿಸುವಲ್ಲಿ ಸರಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ದ.ಕ. ಜಿಲ್ಲಾ ಕರ್ನಾಟಕ ಸರಕಾರಿ ಗುತ್ತಿಗೆ ಆಧಾರಿತ ಉಪನ್ಯಾಸಕರು ಮತ್ತು ಉಪಾಧ್ಯಾಯರು ಬುಧವಾರ ಒಂದು ದಿನದ ಸಾಂಕೇತಿಕ ಕೆಲಸ ಸ್ಥಗಿತ ಮುಷ್ಕರ ನಡೆಸಿದರು.

ಕರ್ನಾಟಕ ಸರಕಾರಿ ಗುತ್ತಿಗೆ ಆಧಾರಿತ ಉಪನ್ಯಾಸಕರ ಮತ್ತು ಉಪಾಧ್ಯಾಯರ ಸಂಘದ ಆದೇಶದ ಮೇರೆಗೆ ನಡೆದ ಈ ಮುಷ್ಕರದಲ್ಲಿ ಜಿಲ್ಲೆಯ 100ಕ್ಕಿಂತಲೂ ಹೆಚ್ಚು ಅಧ್ಯಾಪಕರು ಭಾಗವಹಿಸಿದ್ದರು.

ಮೊದಲು ನಗರದ ಸರಕಾರಿ ಕಾಲೇಜಿನಲ್ಲಿ ಸಭೆ ನಡೆಸಿದ ಅಧ್ಯಾಪಕರು ನಂತರ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳಿಗೆ ತಮ್ಮ ಮನವಿ ಅರ್ಪಿಸಿದರು.

ರಾಜ್ಯದಲ್ಲಿ ಪ್ರಸ್ತುತ ಸುಮಾರು 12,000 ಗುತ್ತಿಗೆ ಆಧಾರಿತ ಉಪನ್ಯಾಸಕರು ಮತ್ತು ಉಪಾಧ್ಯಾಯರು ಕಳೆದ ಮೂರು ವರುಷಗಳಿಂದ ಸೇವೆಯಲ್ಲಿದ್ದು ಅವರನ್ನು ಖಾಯಂಗೊಳಿಸಬೇಕೆಂದು ಸಂಘ ಒತ್ತಾಯಿಸಿದೆ.

ರಸ್ತೆ ಸಮಸ್ಯೆ: ದಸಂಸ ಮುಷ್ಕರ

ಮಂಗಳೂರು, ಜ.29– ಮಂಗಳೂರು ತಾಲೂಕಿನ ಕೆಂಜಾರಿನಿಂದ ಮಳವೂರು ಕಾಲನಿಯ ಮಧ್ಯೆ ಹಾದು ಬಜಪೆ ವಿಮಾನ ನಿಲ್ದಾಣ ಸೇರುವ ರಸ್ತೆಯ ಬಗ್ಗೆ ಮಳವೂರು ಕಾಲನಿಯಲ್ಲಿ ಕೆಲವು ವ್ಯಕ್ತಿಗಳಿಂದ ಆತಂಕ ಉಂಟಾಗುತ್ತಿದ್ದು, ಈ ಸಮಸ್ಯೆಯನ್ನು ಶೀಘ್ರದಲ್ಲೇ ಬಗೆಹರಿಸುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿಯ ಮಳವೂರು ಗ್ರಾಮ ಶಾಖೆಯ ಕಾರ್ಯಕರ್ತರು ಮಂಗಳವಾರ ನಗರದ ರೋಶನಿ ನಿಲಯಗಿ ಇರುವ ಕಾರ್ಯನಿರ್ವಾಹಕ ಇಂಜಿನಿಯರರ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು.

ಕಾರ್ಯಕರ್ತರು ಅನಿರ್ದಿಷ್ಟಾವಧಿಯ ಮುಷ್ಕರವನ್ನು ಪ್ರಾರಂಭಿಸಿದ್ದರೂ, ರಸ್ತೆ ಸಮಸ್ಯೆಯನ್ನು ಒಂದು ವಾರದೊಳಗೆ ಬಗೆಹರಿಸುವುದಾಗಿ ಮಂಗಳೂರು ವಿಭಾಗದ ಸುಪರಿಂಟೆಂಡಿಂಗ್ ಇಂಜಿನಿಯರ್ ಎಂ. ರಾಜು ಅವರು ಭರವಸೆ ನೀಡಿದ್ದರಿಂದ ಸತ್ಯಾಗ್ರಹ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು ಎಂದು ದಸಂಸದ ಮಳವೂರು ಶಾಖೆಯ ಸಂಚಾಲಕ ಎಂ. ಭಾಸ್ಕರ ಕಾಂಚನ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತಮ್ಮ ದೇಶಿ ಹೋರಾಟವನ್ನು ಹೋರಾಟವನ್ನು ಮುಂದುವರಿಸುವುದಾಗಿ ಅವರು ತಿಳಿಸಿದ್ದಾರೆ.

ಗಳಿಸಿದ್ದನ್ನು ಉಳಿಸಲು
ಉಳಿಸಿದ್ದನ್ನು ಬೆಳೆಸಲು
ವಿಶ್ವಾಸಾರ್ಹ ಸಂಸ್ಥೆ

ಗ್ರೇಟ್ ಇಂಡಿಯಾ ಇನ್‌ವೆಸ್ಟ್‌ಮೆಂಟ್ ಕಾರ್ಪೋರೇಶನ್ (ರಿ)

ಮಂಗಳೂರು-575 001

ಹೆಚ್ಚು ಅವಧಿಗೆ ಗರಿಷ್ಠ ಬಡ್ಡಿ ಪಡೆದು ವೃದ್ಧಿಸಿ!

ಟಿ. ಎಲ್. ಫೈನಾನ್ಸ್ ಎಂಡ್ ಇನ್‌ವೆಸ್ಟ್‌ಮೆಂಟ್ ಲಿ. ಮದ್ರಾಸು.

ಪ್ರಜಾ ಪ್ರತಿನಿಧಿಗಳಿಗೆ ಸಾರಿಗೆ ಸಂಸ್ಥೆಯ ಸ್ವಾಗತ

ಪ್ರಜಾಪ್ರಭುತ್ವವು ಅರ್ಥಪೂರ್ಣವಾಗಬೇಕಾದರೆ ಆಡಳಿತವು ಪ್ರಜೆಗಳಿಂದ, ಪ್ರಜೆಗಳಿಗಾಗಿ ಇರಬೇಕೆಂದು ಮನಗಂಡ ಕರ್ನಾಟಕ ಸರ್ಕಾರವು ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣೆಗಳನ್ನು ನಡೆಸಿ ಅಧಿಕಾರವನ್ನು ವಿಕೇಂದ್ರೀಕರಿಸಿದೆ. ಪಂಚಾಯತ್ ರಾಜ್ಯಕ್ಕೆ ಅಡಿಗಲ್ಲು ಹಾಕಿದೆ. ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ಕಾರ್ಯಗಳಲ್ಲಿ ಜನತೆ ನೇರವಾಗಿ ಪಾಲುಗೊಳ್ಳುವ ಒಂದು ಬೃಹತ್ ಅವಕಾಶವನ್ನೊದಗಿಸಿದೆ. ಪಂಚಾಯತ್ ರಾಜ್ಯ ವ್ಯವಸ್ಥೆಯ ಪ್ರಾರಂಭದಲ್ಲಿ ಕರ್ನಾಟಕದಲ್ಲಿ 2469 ಮಂಡಲ ಪಂಚಾಯಿತಿ ಮತ್ತು 19 ಜಿಲ್ಲಾ ಪರಿಷತ್ತುಗಳು ಅಸ್ತಿತ್ವಕ್ಕೆ ಬಂದಿವೆ. ಪ್ರಥಮ ಬಾರಿಗೆ ಸಮಾಜದ ಪ್ರಾಥಮಿಕ ಹಂತದಿಂದ ಸುಮಾರು 56,000 ಪ್ರಜಾಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ.

ಎಲ್ಲಾ ಅಭಿವೃದ್ಧಿ ಕಾರ್ಯಗಳಲ್ಲಿಯೂ ಜನಸಾಮಾನ್ಯರು ನೇರವಾಗಿ ಭಾಗವಹಿಸಬೇಕು. ಇದು ಸರಕಾರದ ವಿಕೇಂದ್ರೀಕರಣದ ನೀತಿ. ರಾಜ್ಯ ಸಾರಿಗೆ ಸಂಸ್ಥೆಯೂ ಸಹ ಇದೇ ತತ್ವವನ್ನು ಪಾಲಿಸುತ್ತಿದೆ. ಗ್ರಾಮೀಣ ಪ್ರದೇಶದ ದೂರಸ್ಥಳಗಳಿಗೆ ಹೆಚ್ಚು ಹೆಚ್ಚು ಬಸ್ಸುಗಳನ್ನು ಓಡಿಸುತ್ತಿದೆ. ಇದರಿಂದ ಗ್ರಾಮೀಣ ಪ್ರದೇಶಗಳ ಜನತೆ ರಾಜ್ಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ಓಡುವ ಬಸ್ಸುಗಳ ದುರಸ್ತಿಗಾಗಿ ಆಯಾಪ್ರದೇಶಗಳಲ್ಲಿ ಕಾರ್ಯಾಗಾರಗಳನ್ನು ಸ್ಥಾಪಿಸುತ್ತಿದೆ. ಜನಸಾಮಾನ್ಯರಿಗೆ ಸಮೃದ್ಧಿ ಮತ್ತು ಸಂತಸವನ್ನೊದಗಿಸುವ ಸರ್ಕಾರದ ಧ್ಯೇಯವನ್ನು ಈಡೇರಿಸುವಲ್ಲಿ ಸಹಾಯ ಮಾಡುತ್ತಿದೆ.

ಈ ಚಾರಿತ್ರಾರ್ಹ ಚುನಾವಣೆಗಳು ಯಶಸ್ವಿಯಾಗಿ ನಡೆಯುವಲ್ಲಿ ಸಾರಿಗೆ ಸಂಸ್ಥೆಯ ನಿಷ್ಠಾವಂತ ಸೇವೆಯು ಮುಖ್ಯ ಪಾತ್ರವಹಿಸಿತ್ತು. ಹೆಚ್ಚು ಕಾಲಾವಕಾಶವನ್ನು ನೀಡದೆ ಚುನಾವಣೆಗೆ ಅಗತ್ಯವಾದ ಸಿಬ್ಬಂದಿ ಮತ್ತು ಸಾಮಾನುಗಳ ಸಾಗಣೆಯ ಜವಾಬ್ದಾರಿಯನ್ನು ಸಾರಿಗೆ ಸಂಸ್ಥೆಗೆ ವಹಿಸಲಾಯಿತು. ಸಂದರ್ಭಕ್ಕೆ ತಕ್ಕಂತೆ ಸಂಸ್ಥೆಯು ಈ ಜವಾಬ್ದಾರಿಯನ್ನು ಸಮರ್ಪಕವಾಗಿ ನೆರವೇರಿಸಿಕೊಟ್ಟಿದೆ.

ಈ ಚುನಾವಣೆಯಲ್ಲಿ ಜಯಿಸಿ ಬಂದಿರುವ ಪ್ರಜಾ ಪ್ರತಿನಿಧಿಗಳ ಒಂದು ಬೃಹತ್ ಸಭೆಯು ಶೀಘ್ರದಲ್ಲಿಯೇ ಬೆಂಗಳೂರು ಅರಮನೆಯಲ್ಲಿ ನಡೆಲಿದೆ. ರಾಜ್ಯದ ಮೂಲೆ ಮೂಲೆಗಳಿಂದ 56,000 ಪ್ರಜಾಪ್ರತಿನಿಧಿಗಳನ್ನು ಸಾಗಿಸುವ ಹೆಮ್ಮೆ ಸಾರಿಗೆ ಸಂಸ್ಥೆಯವರದಾಗಿರುತ್ತದೆ. ಈ ಸೇವೆಗಾಗಿ ಸಾರಿಗೆ ಸಂಸ್ಥೆ ಸಜ್ಜುಗೊಳ್ಳುತ್ತಿದೆ.

ಸಾರಿಗೆ ಸಂಸ್ಥೆಯ 45,000 ಉದ್ಯೋಗಿಗಳು ರಾಜ್ಯದ ಜನತೆಯ ಸಾರಿಗೆ ಅವಶ್ಯಕತೆಗಳನ್ನು ಪೂರೈಸಲು ಹಗಲಿರುಳು ದುಡಿಯುತ್ತಿದ್ದಾರೆ.
ಸಂಸ್ಥೆಯ 7,500 ಬಸ್ಸುಗಳು ಪ್ರತಿದಿನ 45 ಲಕ್ಷ ಜನರನ್ನು ರಾಜ್ಯದ ಒಳಗೂ ಹೊರಗೂ ಸಾಗಿಸುತ್ತವೆ. ಜೊತೆಗೆ ಸರಕು ಸಾಗಣೆಯನ್ನೂ ಮಾಡುತ್ತವೆ.
ಜಾತ್ರೆ, ಹಬ್ಬ, ಚುನಾವಣೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಾರಂಭಗಳಿಗೆ ಸಂಸ್ಥೆಯು ವಿಶೇಷ ಬಸ್ಸುಗಳನ್ನು ಓಡಿಸುತ್ತದೆ.
ಪ್ರಯಾಣ ಸೌಕರ್ಯಗಳನ್ನು ಸದಾ ಉತ್ತಮಗೊಳಿಸುತ್ತಾ ಹೆಚ್ಚು ಹಳ್ಳಿಗಳಲ್ಲಿ, ಹೆಚ್ಚು ಬಸ್ಸುಗಳನ್ನು, ಹೆಚ್ಚು ದಾರಿಗಳಲ್ಲಿ, ನ್ಯಾಯವಾದ ದರಗಳಲ್ಲಿ ಓಡಿಸುತ್ತಾ ಪ್ರಜೆಗಳ ಸಾರಿಗೆ ಎಂಬುದನ್ನು ಸಮರ್ಥಿಸಿಕೊಳ್ಳುತ್ತಿದೆ.

ಪ್ರಜೆಗಳ ಸಾರಿಗೆ ಸಂಸ್ಥೆಯಿಂದ ಪ್ರಜಾಪ್ರತಿನಿಧಿಗಳಿಗೆ ಬೆಂಗಳೂರು ಅರಮನೆಯಲ್ಲಿ ನಡೆಯುವ ಮಹಾಸಭೆಗೆ ಸುಸ್ವಾಗತ.

ಸುರಕ್ಷ, ನಿಶ್ಚಿತ, ಶೀಘ್ರ ಪ್ರಯಾಣ ಸೌಲಭ್ಯಗಳನ್ನು ಒದಗಿಸುವತ್ತ ಪಯಣ.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಸಾರಿಗೆ ಭವನ
ಕೆಂಗಲ್ ಹನುಮಂತಯ್ಯ ರಸ್ತೆ
ಬೆಂಗಳೂರು-560 027



MCA-KSRTC-100-KAN

ಕೊನೆಗೊಳ್ಳದ ಕೇಂದ್ರೀಕರಣ

ಮಾನವ ಕುಲಕ್ಕೆ ಆತ್ಮೋನ್ನತಿಯ ಸಂದೇಶ ಸಾರಿದ ದೇಶ ಭಾರತವೆಂಬುದು ಒಂದು ಐತಿಹಾಸಿಕ ಸತ್ಯ. ಜಗತ್ತಿನ ಇತರೆಲ್ಲ ಭೂ-ಭಾಗಗಳಲ್ಲಿ ಜನ ಸಮುದಾಯ 'ನರ ಪ್ರಾಣಿ'ಗಳಾಗಿ ಬದುಕು ಸವೆಸುತ್ತಿದ್ದ ಕಾಲದಲ್ಲಿ ನಾಗರಿಕ ಬದುಕಿನ ಸೂತ್ರಗಳನ್ನು ರೂಪಿಸಿಕೊಂಡು 'ನರ ಪ್ರಾಣಿ'ಗಳನ್ನು ವೈಚಾರಿಕವಾಗಿ ಮಾನವೀಯ ಉತ್ಕರ್ಷಕ್ಕೆ ಏರಿಸಿದ ನಾಡು ಭಾರತ.

ಮಾನವರ ಆಚಾರಗಳಿಗೆ- ನಿತ್ಯ ನಡವಳಿಕೆಗಳಿಗೆ- ಮಾನವೀಯ ಮೌಲ್ಯಗಳ ತಿರುಳು ತುಂಬಿ ಸಮೂಹ ಹಿತದ ಚೌಕಟ್ಟಿನೊಳಗೆ ಅವರು ಆದರ್ಶವೆಂಬ ಆಗಸಕ್ಕೆ ಜಿಗಿಯಲು ಆಧ್ಯಾತ್ಮದ ಬಲವನ್ನೊದಗಿಸಿದ ಜ್ಞಾನ ಭೂಮಿ ಭಾರತ. ಮಾನವ ಕುಲದ ಮುನ್ನಡೆಯ ಇತಿಹಾಸದ ಆಳ ಅಧ್ಯಯನ ಮಾಡಿದ ಇತಿಹಾಸಜ್ಞರೆಲ್ಲ ಭಾರತೀಯರ ಈ ಮೇಲ್ಮೆಯನ್ನು ಮನ್ನಿಸಿದ್ದಾರೆ.

ಮಾನವರ ಜೀವನ ಯಾತ್ರೆಗೆ ಆತ್ಮೋನ್ನತಿಯ ವಿಚಾರವಾಹಕವನ್ನೊದಗಿಸುವುದರೊಂದಿಗೆ ಸಮೃದ್ಧ ಹಾಗೂ ಸಾರ್ಥಕ ಬದುಕಿಗೆ ಬೇಕಾದ ಭೌತಿಕ ಸಾಧನಗಳನ್ನು ರೂಪಿಸಿಕೊಳ್ಳುವ ಕೌಶಲ್ಯವನ್ನು ಜಗತ್ತಿಗೆ ತೋರಿಸಿಕೊಟ್ಟವರೂ ಭಾರತೀಯರು.

ಹೀಗೆ ಎಲ್ಲ ಬಗೆಯ ಮೇಲ್ಮೆಯುಳ್ಳ ಭಾರತೀಯ ಜನಾಂಗ ಕಾಲ ಚಕ್ರದ ಉರುಳುವಿಕೆಯಲ್ಲಿ ಅವನತಿಯ ಹಾದಿ ಹಿಡಿದು ಜಗತ್ತಿನ ಕತ್ತಲ ಕೂಪಗಳಲ್ಲಿ ಒಂದಾಯಿತು. ದಟ್ಟ ದರಿದ್ರ ದೇಶಗಳಲ್ಲಿ ಇದೂ ಒಂದೆನಿಸಿತು. ಈ ನಾಡು ದೀನ ಜನರ ಬೀಡಾಯಿತು. ದೈಹಿಕವಾಗಿಯೂ- ನೈತಿಕವಾಗಿಯೂ ದುರ್ಬಲರಾದ ಜನರಿಂದ ಈ ದೇಶ ತುಂಬಿದೆ. ಜಗತ್ತಿನ ಇನ್ಯಾವ ಸಮಾಜದಲ್ಲೂ ಕಾಣಸಿಗದ ಸಾಮಾಜಿಕ ಅಸಮತೆ ಈ ದೇಶದ ಧರ್ಮವಾಗಿ ಬೆಳೆದಿದೆ. ಒಂದು ಕಾಲದಲ್ಲಿ ಆತ್ಮ ಜ್ಞಾನದ ರೂವಾರಿಗಳಾಗಿದ್ದ ಭಾರತೀಯರು ಈಗ ಮೂಢ ನಂಬಿಕೆಗಳನ್ನು ಮೆರೆದಾಡಿಸುತ್ತಿದ್ದಾರೆ.

ಆಧುನಿಕ ವಿಜ್ಞಾನವು ಮಾನವ ಕುಲದ ಮುನ್ನಡೆಗೆ ಒದಗಿಸಿದ ಸಾಧನಗಳನ್ನು ಬುದ್ಧಿ ಪೂರ್ವಕವಾಗಿ ಬಳಸಿಕೊಳ್ಳಲಾಗದೆ ತಡವರಿಸುತ್ತಿದೆ.

ಮಾನಗೇಡಿ ಪರಂಪರೆ

ಐದು ಸಹಸ್ರ ವರ್ಷಗಳ ನಾಗರಿಕ ಜೀವನದ ಇತಿಹಾಸವುಳ್ಳ ಭಾರತೀಯ ಜನಾಂಗ ಕಳೆದ ಒಂದೂವರೆ ಸಹಸ್ರ ವರ್ಷಗಳ ಅವಧಿಯಲ್ಲಿ ಹಿಡಿದ ಈ ಅವನತಿಯ ಹಾದಿ ಬಹಳ ಕಡಿದಾದುದು. ಜಗತ್ತಿನ ಇತರೆಲ್ಲ ಜನಾಂಗಗಳೂ ಉತ್ಕರ್ಷದ ಹಾದಿ ಹಿಡಿದ ಈ ಅವಧಿಯಲ್ಲೇ ಭಾರತವು ಅವನತಿಯ ಹಾದಿ ಹಿಡಿದುದು ಎದ್ದು ಕಾಣುವ ಸತ್ಯ. ಭಾರತವು ಕಾಲ ಕಾಲಕ್ಕೆ ಅನ್ಯ ಜನಾಂಗಗಳ ಆಕ್ರಮಣಕ್ಕೆ ಈಡಾಗಿ ಅವರ ಅಡಿಯಾಳುವಾಗಿ ಬದುಕಿದ ಮಾನಗೇಡಿ ಪರಂಪರೆ ಬೆಳೆದುದೂ ಇದೇ ಅವಧಿಯಲ್ಲಿ. ವಿದೇಶೀ ಆಕ್ರಮಣಕಾರರ ಹಾದಿಗೆ ಬಹಳ ಸೊಂಪಾದ ಸಾಮಾಜಿಕ ಪರಿಸರ ಈ ದೇಶದಲ್ಲಿದ್ದುದೇ ಇವಕ್ಕೆಲ್ಲ ಕಾರಣವಾಯಿತು. ಆಕ್ರಮಣಕಾರಿಗಳನ್ನೆದುರಿಸಲು ಧೀರ ಭಾರತೀಯರು ನಡೆಸಿದ ಹೋರಾಟಗಳ ಕಥೆಗಳನ್ನು ನಾವೆಷ್ಟೇ ಹೇಳಿದರೂ ಆಕ್ರಮಣವನ್ನು ತಡೆಗಟ್ಟುವ ಅಂತಃ ಶಕ್ತಿ ಈ ದೇಶಕ್ಕಿರಲಿಲ್ಲವೆಂಬುವನ್ನು ಇತಿಹಾಸದ ಪುಟಗಳಿಂದ ಮರೆಮಾಚಲು ಸಾಧ್ಯವಿಲ್ಲ.

> ## ಜಗತ್ತಿನ ಇತರೆಲ್ಲ ಜನಾಂಗಗಳೂ ಉತ್ಕರ್ಷದ ಹಾದಿ ಹಿಡಿದ ಅವಧಿಯಲ್ಲೇ ಭಾರತವು ಅವನತಿಯ ಹಾದಿ ಹಿಡಿದುದು ಎದ್ದು ಕಾಣುವ ಅಂಶ.

ಇಂತಹ ಒಂದು ದುರ್ಬಲ ದೇಶದನ್ನು ಅದರ ಗತ ಇತಿಹಾಸದ ಉತ್ತುಂಗಕ್ಕೇರಿಸುವ ಆಸೆ ವಿಚಾರವಂತ ಭಾರತೀಯರ ಒಡಲಲ್ಲಿ ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಪ್ರಕಟವಾಯಿತೆನ್ನಬಹುದು. ಈ ಆಸೆಗೆ ಹತ್ತೊಂಭತ್ತನೆಯ ಶತಮಾನದಲ್ಲಿ ರಾಮಕೃಷ್ಣ ಪರಮಹಂಸರು ಆರಂಭಿಸಿದ ಸಾಂಸ್ಕೃತಿಕ ಪುನರುತ್ಥಾನದ ಆಧ್ಯಾತ್ಮಿಕ ಆಂದೋಳನ ಚೇತನಕಾರಿಯಾಗಿ ಪರಿಣಮಿಸಿತೆಂಬುದನ್ನು ನಾವು ಗುರುತಿಸಬಹುದು.

ನೂರಾರು ದೇವತೆಗಳನ್ನು ಸೃಷ್ಟಿಮಾಡಿ ಆ ದೇವತೆಗಳ ಸುತ್ತ ದಂತಕಥೆಗಳನ್ನು ಹೆಣೆದು ಭಕ್ತ ಜನರ ಮೇಲೆ ಮೂಢನಂಬಿಕೆಗಳ ಮುಸುಕೆಳೆದ ಭಾರತೀಯ ಧಾರ್ಮಿಕ ಪರಂಪರೆಯ ಅವಗುಣಗಳ ಮೇಲೆ ಬೆಳಕು ಬೀರಿದ ದಾರ್ಶನಿಕರು ಪರಮಹಂಸರು. ಆತ್ಮವಿದ್ಯೆಯಲ್ಲಿ ಪರಾಕಾಷ್ಠೆಯನ್ನು ಮುಟ್ಟಿದ ಈ ಮಹರ್ಷಿಯ ಶಿಷ್ಯ ಸ್ವಾಮಿ ವಿವೇಕಾನಂದರು ಭಾರತೀಯರಿಗೆ ಮೊದಲ ಬಾರಿಗೆ ತಮ್ಮ ಅಂದಗೆಟ್ಟ ಧಾರ್ಮಿಕ ಬದುಕಿನ ಪರಿಚಯ ಮಾಡಿಕೊಟ್ಟರು. ಇತಿಹಾಸದ ತಿರುವಿನಲ್ಲಿ ಹೂತು ಹೋದ ಭಾರತೀಯ ಮೌಲ್ಯಗಳನ್ನು ಹೆಕ್ಕಿ ತೋರಿಸಿದರು. ಸ್ವಾಭಿಮಾನದ ಸಡು ಬಗ್ಗಿ, ಅಧೋವದನರಾಗಿದ್ದ ಭಾರತೀಯರಿಗೆ ಸಿಡಿದು ನಿಲ್ಲುವ ಸಂದೇಶ ನೀಡಿದವರು ಸ್ವಾಮಿ ವಿವೇಕಾನಂದರು.

ಇವರಿಬ್ಬರು ದಾರ್ಶನಿಕರ ಆಧ್ಯಾತ್ಮಿಕ ಆಂದೋಳನದ ಅಲೆಗಳು ಭಾರತೀಯರಲ್ಲಿ ಪರಾಡಳಿತದ ವಿರುದ್ಧ ಭಾವನೆಗಳನ್ನು ಹುಟ್ಟಿಸಿದವೆನ್ನಬಹುದು. ಇಂತಹ ಭಾವನೆಗಳಿಗೆ ಮಹಾತ್ಮಾಗಾಂಧಿ ನಿಖರವಾದ ರಾಜಕೀಯ ರೂಪು ಕೊಟ್ಟರು. ಭಾರತದ ರಾಷ್ಟ್ರೀಯ ಕಲ್ಪನೆಗೆ ಪ್ರಜಾಸಮೂಹದ ಆಶೋತ್ತರಗಳ ತಿರುಳು ತುಂಬಿದವರು. ರಾಷ್ಟ್ರೀಯತೆ ಮತ್ತು ಅದರ ಸಮಗ್ರತೆ ಜನರ ಸಂಕಲ್ಪವಾಗುವಂತೆ ಮಾಡಿದರು.

> ## ದಾರ್ಶನಿಕರ ಆಧ್ಯಾತ್ಮಿಕ ಆಂದೋಳನದ ಅಲೆಗಳು ಭಾರತೀಯರಲ್ಲಿ ಪರಾಡಳಿತದ ವಿರುದ್ಧ ಹುಟ್ಟಿಸಿದ ಭಾವನೆಗಳಿಗೆ ಮಹಾತ್ಮಾಗಾಂಧಿ ನಿಖರವಾದ ರಾಜಕೀಯ ರೂಪು ಕೊಟ್ಟರು.

ಹೀಗೆ ಪರಮಹಂಸ ವಿವೇಕಾನಂದರ ಆಧ್ಯಾತ್ಮಿಕ ಆಂದೋಳನದಿಂದ ಪ್ರೇರಿತವಾಗಿ ಮಹಾತ್ಮಾಗಾಂಧಿಯವರ ನಾಯಕತ್ವದಲ್ಲಿ ರೂಪುಗೊಂಡ ರಾಷ್ಟ್ರೀಯ ಕಲ್ಪನೆ ಈ ದೇಶದಲ್ಲಿ ಪರಾಡಳಿತ ಸಲ್ಲದ ವಿಚಾರವಾಗಿ ತೋರಿತು. ಈ ದೇಶದಜನ ಹೋರಾಟ ನಡೆಸಿ ಸ್ವಾತಂತ್ರ್ಯ ಗಳಿಸಿದರೆನ್ನುವುದಕ್ಕಿಂತ ಮಹಾತ್ಮಾ ಗಾಂಧಿಯವರು ಕಟ್ಟಿ ಭಾರತೀಯವೆನ್ನಬಹುದಾದ ನೈತಿಕ ನೆಲಗಟ್ಟಿನಲ್ಲಿ ನಿಂತು ಒಡ್ಡಿದ ಪ್ರತಿರೋಧವೇ ಬ್ರಿಟಿಷರ ಆಡಳಿತವನ್ನು ಇಲ್ಲಿಗೆ ಸಲ್ಲದ ವಿಚಾರವಾಗಿ ಮಾಡಿದ್ದು ಎನ್ನುವುದು ಸತ್ಯ.

ಬ್ರಿಟಿಷರ ಅಗಲಿಕೆಯಿಂದ ಕೊನೆಗೊಂಡ ಪರಾಡಳಿತದ ಅಪಮಾನಕಾರಿ ಅಧ್ಯಾಯ ಭಾರತದ ಇತಿಹಾಸದಲ್ಲಿ ಸ್ವತಂತ್ರ ಬದುಕಿನ ಹೊನಲೆಬ್ಬಿಸುವುದೆಂಬುದು ಒಂದು ನಿರೀಕ್ಷೆಯಾಗಿತ್ತು. ಈ ನಿರೀಕ್ಷೆಯಲ್ಲಿ ವಾಸ್ತವಿಕತೆಗಿಂತ ಭಾವುಕತೆಯೇ ಮಿಗಿಲಾಗಿತ್ತೆನ್ನುವುದೂ ನಿಜ.

ಇತಿಹಾಸದಲ್ಲಿ ಮೊದಲ ಬಾರಿಗೆ ತಮ್ಮ ಬದುಕಿನ ರೀತಿ ನೀತಿಯನ್ನು ನಿರ್ಣಯಿಸಿ ವಿಕಸನದ ಹಾದಿಯನ್ನು ಗುರುತಿಸಿ ಮುನ್ನಡೆವ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದ ಭಾರತೀಯರು ರೂಪಿಸಿಕೊಂಡ ಕಾರ್ಯಸೂತ್ರವೇ ನಮ್ಮ ರಾಜ್ಯಾಂಗವೆನ್ನಬಹುದು.

1950ರ ಜನವರಿ 26ರಂದು ಭಾರತವು ಅಂಗೀಕರಿಸಿದ ರಾಜ್ಯಾಂಗ ಜಗತ್ತಿನ ಇತರೆಲ್ಲ ದೇಶಗಳ ರಾಜ್ಯಾಂಗಗಳಿಗಿಂತ ಉತ್ಕೃಷ್ಟವಾದುದೆಂಬ ಖ್ಯಾತಿ ಇದೆ. ದೇಶವು ಒಪ್ಪಿಕೊಂಡ ಜನತಂತ್ರ ವ್ಯವಸ್ಥೆಯನ್ನು ಅರ್ಥವತ್ತಾಗಿ ಆಚರಣೆಗೆ ತರಲು ಬೇಕಾದ ವಿಧಿ-ವಿಧಾನಗಳು ಈ ರಾಜ್ಯಾಂಗದಲ್ಲಿ ವ್ಯಾಪಕವಾಗಿ ಇವೆ. ಮಾನವನ ಮೂಲಭೂತ ಹಕ್ಕುಗಳ ಬಗ್ಗೆ ವ್ಯಾಪಕವಾದ ವ್ಯಾಖ್ಯಾನ ಈ ರಾಜ್ಯಾಂಗದಲ್ಲಿದೆ.

ನಿರ್ದೇಶಕ ತತ್ವಗಳು

ರಾಜ್ಯಾಂಗ ಬದ್ಧವಾದ ರಾಜ್ಯ ವ್ಯವಸ್ಥೆ ಅನುಸರಿಸಬೇಕಾದ ನಿರ್ದೇಶಿತ ತತ್ವಗಳ ಒಂದು ಪ್ರತ್ಯೇಕ ಅಂಕಣವೇ ಈ ರಾಜ್ಯಾಂಗದಲ್ಲಿದೆ. ಪ್ರತಿಯೊಬ್ಬ ಪ್ರಜೆಗೂ ಸ್ವಾಭಿಮಾನಿಯಾಗಿ ಇತರೆಲ್ಲರಿಗೂ ಸಮಾನನಾಗಿ ಸ್ವತಂತ್ರನಾಗಿ ಬದುಕಲು ಮುಕ್ತ ಅವಕಾಶ ಕಲ್ಪನೆಯ ಉದ್ದೇಶ ನಿರೂಪಣೆ ಈ ರಾಜ್ಯಾಂಗದಲ್ಲಿದೆ.

ಈ ರಾಜ್ಯಾಂಗದ ನೆಲೆಯಲ್ಲಿ ರೂಪುಗೊಳ್ಳುವ ಸರಕಾರ ಅಥವಾ ರಾಜ್ಯ ವ್ಯವಸ್ಥೆ ಎಲ್ಲ ಕಾಲಕ್ಕೂ ಜನಾಭಿಪ್ರಾಯದ ಆಶ್ರಿತವಾಗಿರಬೇಕೆಂಬುದು ಒಂದು ನಿಯಮ. ಜನತಂತ್ರಕ್ಕೆ ಪೂರಕವಾದ ಇಂತಹ ವಿಧಿ-ನಿಯಮಗಳಿಂದಾಗಿ ಭಾರತದ ರಾಜ್ಯಾಂಗವು ಒಂದು ಗಣರಾಜ್ಯ ವ್ಯವಸ್ಥೆ ಎನ್ನಿಸಿಕೊಂಡಿದೆ.

ಜಗತ್ತಿನ ಲಿಖಿತ ರಾಜ್ಯಾಂಗಗಳ ಪಟ್ಟಿಯಲ್ಲಿ ಭಾರತದ ರಾಜ್ಯಾಂಗವು ಅತ್ಯಂತ ಸುದೀರ್ಘವಾದುದೆಂದು ಹೇಳಲಾಗಿದೆ.

ಗಾತ್ರದಲ್ಲಿ ಜಗತ್ತಿನ ಏಳನೆಯ ಅತ್ಯಂತ ದೊಡ್ಡದೂ ಮತ್ತು ಜನಸಂಖ್ಯೆಯಲ್ಲಿ ಜಗತ್ತಿನ ಎರಡನೆಯ ಅತಿ ದೊಡ್ಡ ದೇಶವೂ ಎನ್ನಿಸಿರುವ ಭಾರತದ ರಾಜ್ಯಾಂಗ ಒಂದು ಸೊಗಸಾದ ರಾಜಕೀಯ ಕಲ್ಪನೆಯೆಂಬುದರಲ್ಲಿ ಸಂದೇಹವಿಲ್ಲ.

ಈಗೇನಾಗಿದೆ?

ಭಾರತೀಯರ ಬದುಕಿನಲ್ಲಿ ಹೊಸ ಅಧ್ಯಾಯವನ್ನು ತೆರೆಯಬೇಕಾದ ರಾಜ್ಯಾಂಗದ ಸ್ಥಿತಿ-ಗತಿ ಈಗೇನಾಗಿದೆ? ಅದು ಘೋಷಿಸಲು ಉದ್ದೇಶಿಸಿದ ಸಮಾನತೆ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪಾಡೇನಾಗಿದೆ? ರಾಜ್ಯಾಂಗವು ಭರವಸೆ ನೀಡಿದ್ದ ವ್ಯಕ್ತಿ ವಿಕಸನಕ್ಕೆ ಸಮಾನ ಅವಕಾಶಗಳೆಲ್ಲಿವೆ? ರಾಜ್ಯಾಂಗ ನಿರೂಪಿತವಾದ ಪ್ರಾದೇಶಿಕ ಸ್ವಾಯತ್ತೆಯ ಪಾಡೇನಾಯಿತು? ನಮ್ಮಲ್ಲೀಗ ಜನತಂತ್ರ ನಿಜವಾಗಿಯೂ ಅರ್ಥವತ್ತಾಗಿ ಆಚರಣೆಯಲ್ಲಿದೆಯೇ?- ಎಂಬೆಲ್ಲ ಪ್ರಶ್ನೆಗಳು ಏಳುತ್ತವೆ.

ನಾವು ರಾಜ್ಯಾಂಗವನ್ನು ಅಂಗೀಕರಿಸಿದ ದಿನವಾದ ಜನವರಿ 26ನ್ನು ಗಣರಾಜ್ಯದಿನವಾಗಿ ಆಚರಿಸುವ ಸಂದರ್ಭದಲ್ಲಿ ನಮಗೆ ನಾವೇ ಈ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಾದುದು ಅಗತ್ಯವೆನ್ನಿಸುತ್ತದೆ. ಈ ಬಗ್ಗೆ ಸ್ವಲ್ಪ ಚಿಂತನೆ ಮಾಡುವುದೂ ನಮ್ಮ ಸಾಮಾಜಿಕ ಆರೋಗ್ಯಕ್ಕೆ ಹಿತಕಾರಿಯಾದೀತು.

ಕಳಕೊಂಡ ತಿರುಳು

ರಾಜ್ಯಾಂಗವನ್ನು ಅಂಗೀಕರಿಸಿ ಇಂದಿಗೆ 37ವರ್ಷಗಳು ಸಂದುವು. ಒಂದು ತಲೆಮಾರು ಕಳೆದು ಹೋಗಿ ಹೊಸ ಪೀಳಿಗೆ ಈಗ ತಲೆ ಎತ್ತಿದೆ. ರಾಜ್ಯಾಂಗದ ನಿರ್ಮಾಪಕರು ಅಳವಡಿಸಿದ್ದ ತತ್ವಗಳನ್ನು ಅರ್ಥ ಮಾಡಿಕೊಳ್ಳಲಾಗದವರ ಕೈಯಲ್ಲಿ ಆ ಸಾಧನವೀಗ ಸಿಕ್ಕಿದೆ. ಜನತಂತ್ರ ತತ್ವಾಧರಿತವಾಗಬೇಕಿದ್ದ ನಮ್ಮ ರಾಜಕೀಯ ವ್ಯವಸ್ಥೆ ತನ್ನ ತಿರುಳನ್ನು ಪೂರ್ಣವಾಗಿ ಕಳಕೊಳ್ಳುತ್ತಿದೆ. ನಮ್ಮ ಪಾರ್ಲಿಮೆಂಟ್ ಮತ್ತು ಶಾಸನ ಸಭೆಗಳು ಆರಂಭದ ವರ್ಷಗಳಲ್ಲಿ ಕೆಲಸ ಮಾಡುತ್ತಿದ್ದ ರೀತಿಗೆ ಹೋಲಿಸಿದರೆ ಈಗಿನ ಪಾರ್ಲಿಮೆಂಟ್ ಅಥವಾ ಶಾಸನ ಸಭೆಗಳು ಚಿಲ್ಲರೆ ರಾಜಕೀಯ ಕಚ್ಚಾಟದ ಕಣಗಳಾಗಿವೆ.

ಕಳಪೆ ಗುಣಮಟ್ಟ

ಗಣರಾಜ್ಯದ ಮೂಲತತ್ವಗಳನ್ನು ಅನುಷ್ಠಾನಕ್ಕೆ ತರಬೇಕಾದ ಜನಪ್ರತಿನಿಧಿ ಸಭೆಗಳ ಗುಣಮಟ್ಟವೇ ಕಳಪೆಯಾಗಲಾರಂಭಿಸಿದ ಮೇಲೆ ರಾಜ್ಯಾಂಗವು ಸಮೂಹ ಹಿತದ ಸಾಧನವಾಗಿ ಉಳಿಯುವುದು ಕಷ್ಟ. ನಮ್ಮ ಪ್ರತಿನಿಧಿ ಸಭೆಗಳು ವೈಚಾರಿಕ ಸ್ವಾತಂತ್ರ್ಯವನ್ನು ಉಳಿಸಿಕೊಂಡಿಲ್ಲವೆಂಬುದರ ಸ್ಪಷ್ಟ ಸೂಚನೆ, 1975ರಲ್ಲಿ ಹೇರಲಾದ ತುರ್ತು ಪರಿಸ್ಥಿತಿಯ ಕಾಲದಲ್ಲಿ ಸ್ಪಷ್ಟವಾಗಿ ಸಿಕ್ಕಿತ್ತು. ಆದರೂ ಈ ಬಗ್ಗೆ ಸರಿ ದಾರಿಯಲ್ಲಿ ಜಿಜ್ಞಾಸೆ ನಡೆದಿಲ್ಲ. ಒಂದು ವ್ಯಕ್ತಿಯ ರಾಜಕೀಯ ಹಿತರಕ್ಷಣೆಗಾಗಿ ಹೇರಿದ ತುರ್ತು ಪರಿಸ್ಥಿತಿ ನಮ್ಮ ಗಣತಂತ್ರ ರಾಜ್ಯ ವ್ಯವಸ್ಥೆಗೆ ಅಂಟಿದ ರೋಗಲಕ್ಷಣವೆಂಬುದನ್ನು ಈ ದೇಶ ಸರಿಯಾಗಿ ಮನಗಂಡಿಲ್ಲ.

ರಾಜಕೀಯ ವಿಚಾರವೇತ್ತರು ತುರ್ತುಪರಿಸ್ಥಿತಿಯನ್ನು ಒಂದು ರಾಜಕೀಯ ಅವಘಡವೆಂದು ವರ್ಣಿಸಿ ಆಗಲೇ ಬೇಕಾಗಿದ್ದ ಸಮೂಹ ಚಿಂತನೆಯ ಮೇಲೆ ಮುಸುಕೆಳೆದರು. ಜನತಂತ್ರ ರಾಜಕೀಯ ವ್ಯವಸ್ಥೆಯನ್ನು ಅಂಗೀಕರಿಸಿ ಇಷ್ಟು ವರ್ಷ ಕಳೆದರೂ ನಮ್ಮ ಸಮಾಜಕ್ಕೆ ಸಹಸ್ರ ವರ್ಷಗಳಿಂದ ಅಂಟಿದ್ದ ದಾಸ್ಯಮನೋವೃತ್ತಿ ಅಥವಾ ಶರಣಾಗತಿಯ ಮನೋಧರ್ಮ ಮಾಯವಾಗಿಲ್ಲವೆಂಬುದನ್ನು ನಾವು ಇಂದಿಗೂ ನಿರಾಕರಿಸುತ್ತಲೇ ಇದ್ದೇವೆ.

ಒಮ್ಮೆ ಹೇರಿದ ತುರ್ತು ಪರಿಸ್ಥಿತಿ ಹೋಗಿ ಇಂದಿಗೆ ಹತ್ತು ವರ್ಷಗಳು ಸಂದರೂ ದೇಶದ ಒಟ್ಟಾರೆ ರಾಜಕೀಯ ಪರಿಸ್ಥಿತಿ ತುರ್ತು ಪರಿಸ್ಥಿತಿ ಹೇರಿಕೆಗೆ ಪೂರಕವಾಗಿಯೇ ಇದೆಯೆಂಬುದನ್ನು ಅಲ್ಲಗಳೆಯಲಾಗದು. 1975ರಲ್ಲಿ ಇಂದಿರಾಗಾಂಧಿಯವರು ತಮ್ಮ ವೈಯಕ್ತಿಕ ರಾಜಕೀಯ ಹಿತಕ್ಕಾಗಿ ತುರ್ತು ಪರಿಸ್ಥಿತಿಯನ್ನು ಹೇರಿದರಾದರೆ ಇಂದು ಅವರ ಮಗ ರಾಜೀವ ಗಾಂಧಿಯವರಿಗೆ ರಾಷ್ಟ್ರೀಯ ಭದ್ರತೆ ಮತ್ತು ಸಮಗ್ರತೆಯ ರಕ್ಷಣೆಗಾಗಿ ತುರ್ತುಪರಿಸ್ಥಿತಿ ಹೇರಲು ಎಲ್ಲ ಬಗೆಯ ಸಮರ್ಥನೆ ಇದೆ. ಅವರು ಹಾಗೆ ಮಾಡಿದರೆ ಯಾರೂ ಅವರನ್ನು ದೂರಲಾರರು.

ಈ ನಿರ್ದೇಶಕಾಯಾಚರಣೆಗೆ ಬಂದಿದ್ದರೆ ನಮ್ಮಲ್ಲಿ ಅಕ್ಷರಸ್ಥರ ಪ್ರಮಾಣ ಶೇಕಡಾ 90ಕ್ಕೆ ಏರುತ್ತಿತ್ತು. ಇಂತಹ ಸಾಕ್ಷರತೆ ಎಚ್ಚೆತ್ತ ಜನಶಕ್ತಿಯನ್ನು ರಾಷ್ಟ್ರ ಜೀವನಕ್ಕೆ ಒದಗಿಸುತ್ತಿತ್ತು.

ಈ ದೇಶದ ಮುಂಚೂಣಿಯಲ್ಲಿರುವ ಜನವರ್ಗಕ್ಕೆ ಸಾಮೂಹಿಕ ಸಾಕ್ಷರತೆ ಸಾಧಿಸುವ ಪ್ರಾಮಾಣಿಕ ಇಚ್ಛೆ ಇರಲಿಲ್ಲವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ಅದಿಲ್ಲವಾದರೆ ಸ್ವಾತಂತ್ರ್ಯಬಂದು ನಲ್ವತ್ತು ವರ್ಷಗಳು ಸಂದರೂ ದೇಶದಲ್ಲಿ ಸಾಕ್ಷರತೆಯ ಪ್ರಮಾಣ ಶೇಕಡಾ 35ನ್ನು ಮೀರಿಲ್ಲವೆಂದರೆ ಇದಕ್ಕೆ ಅರ್ಥವೇನು?

> ## ನಮ್ಮ ಪ್ರತಿನಿಧಿ ಸಭೆಗಳು ವೈಚಾರಿಕ ಸ್ವಾತಂತ್ರ್ಯವನ್ನು ಉಳಿಸಿಕೊಂಡಿಲ್ಲವೆನ್ನುವುದರ ಸೂಚನೆ 1975ರಲ್ಲಿ ಹೇರಲಾದ ತುರ್ತುಪರಿಸ್ಥಿತಿಯ ವೇಳೆ ಸ್ಪಷ್ಟವಾಗಿ ಸಿಕ್ಕಿತ್ತು.

ಎಪ್ಪತ್ತು ಕೋಟಿ ಜನ ಸಮೂಹವನ್ನು ಹೊಂದಿರುವ ಒಂದು ಗಣತಂತ್ರ ರಾಜ್ಯವ್ಯವಸ್ಥೆ ತನ್ನ ಭವಿಷ್ಯದ ಬುಟ್ಟಿಯನ್ನು ಒಬ್ಬ ವ್ಯಕ್ತಿಯ ಕೈಗೆ ಕೊಡಲು ಯಾಕೆ ಸಿದ್ಧವಾಗುತ್ತಿದೆ ? ಎಂಬುದು ನಾವೆಲ್ಲ ಅತ್ಯ ಶೋಧನೆ ಮಾಡಬೇಕಾದ ಪ್ರಶ್ನೆ.

ದಾಸ್ಯ ಮನೋವೃತ್ತಿ

ಸ್ವಾಭಿಮಾನದಿಂದ ಸಿಡಿದು ನಿಲ್ಲಲು ಸ್ವಾಮಿ ವಿವೇಕಾನಂದರು ನೀಡಿದ ಸಂದೇಶವಾಗಲೀ ಬದುಕಿಗೆ ನೈತಿಕ ನೆಲೆಗಟ್ಟು ಹಾಕಿಕೊಳ್ಳಲು ಗಾಂಧೀಜಿ ನೀಡಿದ ಕರೆಯಾಗಲೀ ನಮ್ಮ ಜನರ ಮನದಾಳಕ್ಕೆ ಇನ್ನೂ ಇಳಿದಿಲ್ಲವೆಂಬುದು ಇದರಿಂದಾಗಿ ಗೊತ್ತಾಗುತ್ತದೆ. ರಾಜಕೀಯ ಪ್ರಭುಗಳಿಗೆ ನಡು ಬಗ್ಗಿ ನಮಸ್ಕರಿಸಿ ಅವರ ಆಶ್ರಯದಲ್ಲಿ ದಿನ ಕಳೆದ ನಮ್ಮ ಜನರ ದಾಸ್ಯಮನೋವೃತ್ತಿ ಇನ್ನೂ ದೂರವಾಗಿಲ್ಲ. ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಭಾವಿಗಳಾಗಿರುವ ಮೇಲಂತಸ್ತಿನ ಜನ ತಮ್ಮ ಸ್ವಾರ್ಥಕ್ಕಾಗಿ ಅಧಿಕಾರಸ್ಥರ ಮುಂದೆ ಕೃತಕ ನಿಷ್ಠೆಯ ನಿರ್ಲಜ್ಜ ಪ್ರದರ್ಶನ ಮಾಡುವ ಪರಂಪರೆಯನ್ನು ಇನ್ನೂ ಬಿಟ್ಟಿಲ್ಲ. ಹಿಂದೆ ವಿದೇಶೀ ಆಕ್ರಮಣಕಾರಿಗಳು ಬಂದಾಗ ಅವರೊಂದಿಗೆ ಶಾಮೀಲಾಗಿ ತಮ್ಮ ಸ್ವಾರ್ಥದ ಜಹಗೀರುಗಳನ್ನು ಕಟ್ಟಿಕೊಂಡು ದೇಶವನ್ನು ಗುಲಾಮಗಿರಿಗೆ ತಳ್ಳಿದ ಈ ಪೀಳಿಗೆ ಇಂದಿಗೂ ತನ್ನ ಪರಂಪರಾಗತ ಗುಣವನ್ನು ಕಳಕೊಂಡಿಲ್ಲ.

ಸ್ವಾತಂತ್ರ್ಯಾನಂತರ ರಾಷ್ಟ್ರೀಯ ಜೀವನಕ್ಕೆ ಪ್ರವಹಿಸುವುದೆಂದು ನಿರೀಕ್ಷಿಸಲಾಗಿದ್ದ ಜನರ ಶಕ್ತಿ ಇಂದಿಗೂ ಕತ್ತಲ ಕೋಣೆಯಲ್ಲೇ ಇದೆ. ಅವರಿಗೆ ವಿದ್ಯೆ ಕೊಟ್ಟು ಅವರ ಕೃತು ಶಕ್ತಿಗೆ ಚಾಲನೆ ಕೊಡುವ ಉದ್ದೇಶದಲ್ಲಿ ಭಾರತದ ಸಾಧನೆ ನಿರಾಶಾದಾಯಕ.

ಅನುಷ್ಠಾನಗೊಳ್ಳದ ಆಶಯ

ಭಾರತದ ರಾಜ್ಯಾಂಗದ ನಿರ್ದೇಶಕ ತತ್ವಗಳು ಅನುಷ್ಠಾನಕ್ಕೆ ಬಾರದ ಆಶಯಗಳಾಗಿ ಉಳಿದಿವೆ. ಹತ್ತು ವರ್ಷಗಳೊಳಗೆ ಈ ದೇಶದಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನೊದಗಿಸುವುದು ರಾಜ್ಯಾಂಗದ ನಿರ್ದೇಶಕ ತತ್ವಗಳಲ್ಲಿ ಒಂದು.

1960ರ ನಂತರ ರಾಜಕೀಯ ಸ್ವಾತಂತ್ರ್ಯ ಗಳಿಸಿದ ಆಫ್ರಿಕದ ದೇಶಗಳೂ ಕೂಡಾ ಸಾಕ್ಷರತೆಯಲ್ಲಿ ಶೇಕಡಾ 50ರ ಗಡು ದಾಟಿವೆ. ಕರಿಯ ಜನಾಂಗದವರನ್ನು ಜಾನುವಾರುಗಳಂತೆ ನಡೆಸಿಕೊಳ್ಳುತ್ತಿದೆಯೆನ್ನಲಾದ ದ. ಆಫ್ರಿಕಾದ ಬಿಳಿಯರ ಸರಕಾರ ಕೂಡಾ ಕರಿಯರ ಸಾಕ್ಷರತೆಯನ್ನು ಶೇಕಡಾ 70ಕ್ಕೆ ಮುಟ್ಟಿಸಿದೆ.

ರಾಜ್ಯಾಂಗದ ನಿರ್ದೇಶಕ ತತ್ವದಲ್ಲಿ 14 ವರ್ಷದೊಳಗಿನ ಬಾಲ ಕಾರ್ಮಿಕರ ಶ್ರಮದುಡಿಮೆಯನ್ನು ನಿಷೇಧಿಸುವ ಮಾತಿದೆ. ಆದರೆ ಇಂದು ಅನಕ್ಷರಸ್ಥ ಬಾಲಕಾರ್ಮಿಕರ ದೊಡ್ಡ ಸಮೂಹವೇ ಭಾರತದಲ್ಲಿದೆ. ಹೀಗೆ ಭಾರತದರಾಜ್ಯಾಂಗದ ನಿರ್ದೇಶಕ ತತ್ವಗಳಲ್ಲಿ ನಗೆ ಪಾಟಲಿಗೆ ಈಡಾಗಿರುವ ಇನ್ನೂ ಕೆಲವು ಮಾತುಗಳಿಂದರೆ ಶೋಷಣೆ ರಹಿತವಾದ ಸಮಾಜರಚನೆ, ಸಾಮಾಜಿಕ ನ್ಯಾಯದ ಕಲ್ಪನೆ- ಸಮಾನ ಹಕ್ಕುಗಳ ಆಶ್ವಾಸನೆ ಇವೆಲ್ಲ ಎಲ್ಲಿವೆ?

ಹೀಗೆ ಆಚರಣೆಗೆ ಬಾರದ ಆಶಯಗಳಿಂದ ಕೂಡಿರುವ ಒಂದು ರಾಜ್ಯಾಂಗ ಗಣರಾಜ್ಯ ಕಲ್ಪನೆಯನ್ನು ಅರ್ಥವತ್ತಾಗಿ ಮಾಡಲಾರದು. ನನ್ನ ದೃಷ್ಟಿಯಲ್ಲಿ ಭಾರತದ ರಾಜ್ಯಾಂಗಕ್ಕೆ ಒದಗಿದ ಈ ದುರ್ಗತಿಗೆ ಮೊದಲ ಕಾರಣ ಆಡಳಿತದ ಸೂತ್ರ, ಹಿಂದೆ ಬ್ರಿಟಿಷರಸೇವಕರಾಗಿದ್ದ ಜನವರ್ಗದ ಕೈಯಲ್ಲೇ ಉಳಿದುದು.

ಅಧಿಕಾರದ ಅಸಮರ್ಪಕ ಹಂಚಿಕೆ

ರಾಜ್ಯಾಂಗದ ನಿರ್ಮಾಪಕರು ಸದುದ್ದೇಶದಿಂದಲೇ ಮಾಡಿರಬಹುದಾದ ಇನ್ನೊಂದು ಪ್ರಮಾದವೆಂದರೆ ರಾಜ್ಯಾಂಗದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವೆ ಅಧಿಕಾರಗಳ ಹಂಚಿಕೆ ಮಾಡುವಾಗ 1935ರಲ್ಲಿ ಬ್ರಿಟಿಷರು ಮಾಡಿದ್ದ ಭಾರತ ಸರಕಾರದ ಶಾಸನ (Government of India Act)ದ ಪಟ್ಟಿಯನ್ನೇ ಯಥಾವತ್ತಾಗಿ ನಕಲು ಮಾಡಿದ್ದು. ರಾಜ್ಯಾಂಗದ 246 ನೇ ವಿಧಿಗನುಸಾರ ಏಳನೆಯ ಪರಿಚ್ಛೇದದಲ್ಲಿ ನಮೂದಿತವಾದ ಕೇಂದ್ರದ ಅಧಿಕಾರಕ್ಕೊಳಪಟ್ಟ 97 ವಿಷಯಗಳ ಪಟ್ಟಿಯನ್ನೋದಿದರೆ ಇದು ಸ್ಪಷ್ಟವಾಗುತ್ತದೆ. ರಾಜ್ಯಸರಕಾರಗಳ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿ ಅದೇ ಪರಿಚ್ಛೇದದಲ್ಲಿ ಕೊಟ್ಟ 66 ವಿಷಯಗಳ ಪಟ್ಟಿಯೂ ಹಾಗೆಯೇ. ನಮ್ಮ ರಾಜ್ಯಾಂಗದಲ್ಲಿ ಬ್ರಿಟಿಷರ ಶಾಸನವಿಗಿಂತ ಭಿನ್ನವಾದ ಸಹವರ್ತಿ ಪಟ್ಟಿ (Concurrent list)ಯನ್ನು ಬಿಟ್ಟರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ನಡುವಿನ ಅಧಿಕಾರ ವ್ಯಾಪ್ತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

> ## ಶೋಷಣೆ ರಹಿತ ಸಮಾಜ ರಚನೆ, ಸಾಮಾಜಿಕ ನ್ಯಾಯದ ಕಲ್ಪನೆ, ಸಮಾನ ಹಕ್ಕುಗಳ ಆಶ್ವಾಸನೆ ಇವೆಲ್ಲ ಎಲ್ಲಿವೆ ?

ರಾಜ್ಯಾಂಗದ ನಿರೂಪಿತ ತತ್ವಗಳಲ್ಲಿ ಭಾರತವನ್ನು ಸ್ವಾಯತ್ತ ರಾಜ್ಯಗಳ ಒಕ್ಕೂಟವೆಂದು ಬಣ್ಣಿಸಲಾಗಿರುವುದೇನೋ ನಿಜ. ಆದರೆ ಅಧಿಕಾರ ಹಂಚಿಕೆಯಲ್ಲಿ ರಾಜ್ಯಗಳ ಸ್ವಾಯತ್ತೆಯನ್ನು ಅರ್ಥವತ್ತಾಗಿ ಮಾಡುವ ಅಂಶಗಳ ಅಭಾವ ಎದ್ದು ಕಾಣುತ್ತದೆ.

ವಡ್ಡರ್ಸೆ ರಘುರಾಮ ಶೆಟ್ಟಿ

ಬ್ರಿಟಿಷರು ಭಾರತವನ್ನು ಒಂದು ವಸಾಹತು ರಾಷ್ಟ್ರವಾಗಿ ಉಳಿಸಿಕೊಳ್ಳಲು ತಯಾರಿಸಿದ 1935ರ ಶಾಸನ ಮಾದರಿ ಎಲ್ಲ ಅಧಿಕಾರವನ್ನು ಕೇಂದ್ರದೊಡನೆ ಉಳಿಸಿಕೊಳ್ಳುವುದಾಗಿತ್ತು. ರಾಜ್ಯಗಳಿಗೆ "ಬರೀ ಗುಲ್ಲು ಬಿದ್ದ ಗೇಣು" - ಎನ್ನುವ ರೀತಿಯ ಗೌಣವಾದ ಅಧಿಕಾರಗಳನ್ನವರು ಕೊಟ್ಟಿದ್ದರು.

ಸ್ವತಂತ್ರ ಭಾರತದಲ್ಲಿಯೂ ರಾಜ್ಯಗಳ ಸ್ಥಿತಿ ಆಶ್ರಿತ ರಾಜ್ಯಗಳ ಸಾಲಿನಲ್ಲೇ ಉಳಿಯಿತು. ಕೇಂದ್ರ ಸರಕಾರ ಸರ್ವೋಚ್ಛಶಕ್ತ ಅಧಿಕಾರಗಳ ಕೇಂದ್ರ ಬಿಂದುವಾಗಿ ಉಳಿಯಿತು. ಆಡಳಿತದಲ್ಲಿ ಬ್ರಿಟಿಷರ ಕಾಲದ ಐ. ಸಿ. ಎಸ್. ಅಧಿಕಾರಿಗಳು ಹೋಗಿ ಐ. ಎ. ಎಸ್., ಐ. ಪಿ. ಎಸ್. ಮೊದಲಾದ ಉನ್ನತಾಧಿಕಾರ ವರ್ಗದ ಸೃಷ್ಟಿಯಾಯಿತು. ಅರ್ಥಿಕವಾಗಿ ಎಲ್ಲ ಪ್ರಮುಖ ಆದಾಯ ಮೂಲಗಳೂ ಕೇಂದ್ರದೊಡನೆಯೇ ಉಳಿದವು. ಇಂತಹ ಕೇಂದ್ರೀಕರಣವನ್ನು ಮತ್ತಷ್ಟು ಬಲಪಡಿಸುವ ಪ್ರವೃತ್ತಿ ದೇಶದ ರಾಜಕೀಯದಲ್ಲೂ ಕಾಣಿಸಿತು. ಮಹಾನ್ ಧುರೀಣರಾದ ಭಾರತೀಯರು ಜವಾಹರಲಾಲ್ ನೆಹರೂ ಅವರನ್ನು ಆರಾಧ್ಯವ್ಯಕ್ತಿಯಾಗಿ ಮಾಡಿದರು. "ಅವರು ಮಾಡಿದ್ದೇ ಸರಿ- ಅವರಿದ್ದಲ್ಲಿ ಬೇರೆ ಹಾಗಿಲ್ಲ". ಎನ್ನುವ ರಾಜಕೀಯ ವಾತಾವರಣ ನಿರ್ಮಾಣವಾಯಿತು.

> ## ಉಸಿರು ಕಟ್ಟಿಸುವ ಕೇಂದ್ರೀಕೃತ ವ್ಯವಸ್ಥೆ ಸ್ವಾಯತ್ತ ರಾಜ್ಯಗಳ ಭಾರತ ಒಕ್ಕೂಟಕ್ಕೆ ಅಪಾಯಕಾರಿಯಾದ ವಾತಾವರಣವನ್ನು ನಿರ್ಮಿಸಿದೆ.

ನೆಹರೂರವರ ಆರೋಗ್ಯಕರ ವ್ಯಕ್ತಿತ್ವದ ಎದುರು ಇತರ ಜನಪ್ರತಿನಿಧಿಗಳೆಲ್ಲ ಪೆಂಗರಾಗಿ ಕಾಣುವಂತಾಯಿತು. ನೆಹರೂ ಆರಾಧನೆಯಿಂದ ಉದ್ಭವಿಸಿದ ಹೊಸ ವಿದ್ಯಮಾನ ಈ ದೇಶದಲ್ಲಿ ರಾಜಕೀಯ ಅಧಿಕಾರದ ಪೂರ್ಣ ಕೇಂದ್ರೀಕರಣಕ್ಕೆ ದಾರಿಮಾಡಿತು. ಇದರ ಬೆನ್ನಲ್ಲೇ ನೆಹರೂ ರೂಪಿಸಿದ ಕೇಂದ್ರೀಕೃತ ಯೋಜನಾ ವ್ಯವಸ್ಥೆ ರಾಜ್ಯಗಳ ಅಲ್ಪ-ಸ್ವಲ್ಪ ಅಧಿಕಾರಗಳನ್ನೂ ಅಪಹರಿಸಿತು.

ಒಂದೂರಿನಲ್ಲಿ ಸಣ್ಣ ಸೇತುವೆಯಾಗಬೇಕಾದರೂ ಅದಕ್ಕೆ ಕೇಂದ್ರದ ದೊರೆಗಳ ಅನುಮಂತಿಗೆ ಮೊರೆಹೋಗಬೇಕಾದ ದುಃಸ್ಥಿತಿ ಇಂದು ಈ ದೇಶದ ರಾಜ್ಯ ಸರಕಾರಗಳಿಗೆ ಒದಗಿದೆ. ಇದರ ಪರಿಣಾಮವಾಗಿ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೆಗಳು ತಲೆದೋರಿವೆ. ಅವೆಲ್ಲ ಮುಂತ್ರ ಜನರಿಂದ ದೂರ ಸರಿದಿವೆ. ಜನರ ಆಶೋತ್ತರಗಳಿಗೆ ಹಾಗೂ ಪ್ರಾದೇಶಿಕ ಆಕಾಂಕ್ಷೆಗಳಿಗೆ ಪ್ರತಿಸ್ಪಂದಿಸುವ ರಾಜಕೀಯ ವೇದಿಕೆಗಳು ರೂಪುಗೊಳ್ಳುವುದು ಸಾಧ್ಯವಾಗಿಲ್ಲ.

ಇಂತಹ ಒಂದು ಉಸಿರು ಕಟ್ಟಿಸುವ ಕೇಂದ್ರೀಕೃತ ರಾಜ್ಯ ವ್ಯವಸ್ಥೆ ಸ್ವಾಯತ್ತರಾಜ್ಯಗಳ ಭಾರತ ಒಕ್ಕೂಟಕ್ಕೆ ಅಪಾಯಕಾರಿಯಾದ ವಾತಾವರಣವನ್ನು ನಿರ್ಮಿಸಿದೆ. ಅಸ್ಸಾಮಿನ ಕ್ಷೋಭೆಗೂ ಇದೇ ಕಾರಣ. ಪಂಜಾಬಿನ ಹಿಂಸಾ ಕಾಂಡಕ್ಕೂ ಇದೇ ಮೂಲ. ಈಗ ಗೂರ್ಖಾಲ್ಯಾಂಡ್ ಚಳವಳಿಯನ್ನು ಎಬ್ಬಿಸಿದ್ದೂ ನಮ್ಮ ರಾಜ್ಯ ವ್ಯವಸ್ಥೆಯಲ್ಲಿನ ಈ ವಿಕೃತಿ. ತ್ರಿಪುರದಲ್ಲಿ ಅಲ್ಲಿನ ಮೂಲ ನಿವಾಸಿಗಳು ಬಂಗಾಳಿ ವಲಸಿಗರ ತಲೆ ಕಡಿಯುತ್ತಿರುವುದರ ಮೂಲವೂ ಇದರಲ್ಲಿದೆ.

ಭಾರತದ ರಾಷ್ಟ್ರೀಯತೆ ಅಥವಾ ಸಮಗ್ರತೆಯು ಕಿರುಚಾಟದ ಘೋಷಣೆಗಳಿಂದಾಗಲೀ ಅಥವಾ ನಮ್ಮ ಪ್ರಧಾನಿಯವರ ಉಡಾಫೆ ಹೇಳಿಕೆಗಳಿಂದಾಗಲೀ ಈಗ ದೇಶದಲ್ಲಿ ಎದ್ದಿರುವ ಪ್ರಾದೇಶಿಕ ಆಕಾಂಕ್ಷೆಗಳನ್ನು ಹತ್ತಿಕ್ಕಲಾಗದು.

ಅದಕ್ಕಿರುವ ಒಂದೇ ಪರಿಹಾರವೆಂದರೆ ರಾಜ್ಯಾಂಗದಲ್ಲಿ ನಿರೂಪಿತವಾದಂತೆ ರಾಜ್ಯಗಳ ಸ್ವಾಯತ್ತೆಯನ್ನು ಅರ್ಥವತ್ತಾಗಿ ಮಾಡುವುದು. ಕೇಂದ್ರ ಸರಕಾರದೊಡನೆ ವಿದೇಶಾಂಗ ವ್ಯವಹಾರ ದೇಶರಕ್ಷಣೆ, ಸಾರಿಗೆ ಸಂಪರ್ಕ, ಹಣಕಾಸು ಮುದ್ರಣ ಮತ್ತು ನ್ಯಾಯಾಂಗದ ಅಧಿಕಾರವನ್ನು ಬಿಟ್ಟು ಉಳಿದೆಲ್ಲ ಅಧಿಕಾರಗಳನ್ನೂ ರಾಜ್ಯಗಳಿಗೆ ವರ್ಗಾಯಿಸಬೇಕು. ಅದು ರೀತಿ ಮಾಡಿದಾಗಲೇ ಭಾರತವು ಸ್ವಾಯತ್ತ ರಾಜ್ಯಗಳ ಒಕ್ಕೂಟವಾಗಬೇಕು. ಆಗ ಮಾತ್ರ ಭಾರತವು ರಾಜಕೀಯವಾಗಿ ದೀರ್ಘ ಕಾಲ ಬಾಳಬೇಕು. ಇಲ್ಲವಾದರೆ ಭಾರತವು ಒಂದು ಸಮಗ್ರ ರಾಷ್ಟ್ರವಾಗಿ ಉಳಿಯುವುದು [illegible] ಪ್ರದೇಶಗಳಲ್ಲಿ ಪ್ರಭಾವಿಯಾಗಿರುವ ಕೇಂದ್ರದ ಬಂಧನದಿಂದ ವಿಮೋಚನೆ ಬಯಸಬಹುದು.

ಗಣರಾಜ್ಯ ದಿನವನ್ನು ಆಚರಿಸುವ ಈ ಸಂದರ್ಭದಲ್ಲಿ ವಿಚಾರವಂತರೆಲ್ಲರೂ ಯೋಚಿಸಬೇಕಾದ ವಿಷಯವಿದು. ●

ಬಿತ್ತಿ ಸೋತಿದ್ದೇವೆ

ಬಿತ್ತಿದ್ದೇವೆ ನಾವು
ಹೆಚ್ಚು ಮಳೆ ಇಲ್ಲದಲ್ಲಿ
ಮೊಳಕೆ ಕಂಡಿದ್ದೇವೆ ನಾವು
ಬಂಜರು ನೆಲದಲ್ಲಿ....
ಬೆಳೆದಿದ್ದೇವೆ ನಾವು
ಒಣಿವ ಬಿಸಿಲಲ್ಲಿ
ಬದುಕಿದ್ದೇವೆ ನಾವು
ನದಿಗಳ ದಿಕ್ಕುಗಳನ್ನು
ಬದಲಿಸಿದ ಕಟ್ಟುಗಳಲ್ಲಿ...
ಕಟ್ಟಿದ್ದೇವೆ ನಾವು
ಮಹಾ ಸೌಧಗಳನಿಲ್ಲಿ
ಮಲಗಿದ್ದೇವೆ ನಾವು
ನನಸುಗಳಲ್ಲಿ — ಆ
ಮಯೂರದ ಮಹಲುಗಳಲ್ಲಿ....
ಬೇಡುತ್ತಿದ್ದೇವೆ ನಾವು
ಫುಟ್‌ಪಾತ್‌ಗಳಲ್ಲಿ-ಬಸ್ಸಲ್ಲಿ
ಕರುಣೆಗಳು ಸತ್ತ ಕಣ್ಣಾಗಳಲ್ಲಿ...
ಬಿತ್ತಿ ಸೋತಿದ್ದೇವೆ ನಾವು
ಶೂನ್ಯ ಹೃದಯಗಳಲ್ಲಿ
ಉಸಿರುಗಟ್ಟಿದ್ದೇವೆ ನಾವು
ಭವಿಷ್ಯವಿಲ್ಲದ ಗೂಡಿಯಲ್ಲಿ
ಹುಟ್ಟಿಗೆ ಬದುಕಿದ್ದೇವೆ ನಾವು
ಹೇಗೋ ಬರದಲ್ಲಿ....

● ಎಚ್. ಶಿವರಾಂ



ಅವ್ಯಕ್ತ

ಕ್ಷಮಾ ಆ ಊರಿಗೆ ಬಂದಾಗಿನಿಂದ ನೋಡುತ್ತಲೇ ಇದ್ದಾಳೆ. ದಿನವೂ ಬ್ಯಾಂಕಿಗೆ ಹೋಗುವಾಗ ಬರುವಾಗ ಅಂಚಿನ ಮನೆಯ ದೊಡ್ಡ ಕಿಟಕಿಯ ಹಿಂದೆ ಏನೋ ಸಂಕೇತ ಸಾರುವವಳ ಭಂಗಿಯಲ್ಲಿ ಕುಳಿತಿರುತ್ತಾಳೆ ಮುಪ್ಪಿನ ವಯಸ್ಸು ದಾಟಿದ ಆ ಮಹಿಳೆ. ಬೆಳಗಿನ ಸಮಯ ಒಮ್ಮೊಮ್ಮೆ ಬೇರೆಲ್ಲಾದರೂ ಕಂಡು ಬಂದರೂ ಸಂಜೆ ಮಾತ್ರ ಅದೇ ಕುರ್ಚಿ, ಅದೇ ಭಂಗಿ. ಒಮ್ಮೊಮ್ಮೆ ಕೈಯಲ್ಲಿ ದಿನಪತ್ರಿಕೆಯೂ ಒಮ್ಮೊಮ್ಮೆ ದಪ್ಪ ದಪ್ಪದ ಶೇಕ್ಸ್‌ಪಿಯರನ ವಾಲ್ಯೂಮ್‌ಗಳೂ ಇರುತ್ತವೆ. ಆ ಮನೆಯ ಎದುರು ಬಂದೊಡನೆಯೇ ಕ್ಷಮಾಳ ಹೆಜ್ಜೆಗಳು ನಿಧಾನಗೊಂಡು ಕಣ್ಣುಗಳು ಕಿಟಕಿಯ ಹಿಂದೆ ಕೂತವಳನ್ನು ದಿಟ್ಟಿಸುತ್ತವೆ. ಅಪ್ರಯತ್ನವಾಗಿ ಒಂದು ಕ್ಷಣ, ಅಷ್ಟೇ. ತನ್ನೊಳಗೆ ತುಂಬಿರುವಂತಹ ಹೊರೆ ಹೊರೆ ಸಾಂಟ ಆಫೀಸ್‌ನ ಸುಸ್ತು ಎಲ್ಲವನ್ನು ಮರೆಸುವ ಒಂದು ಚೇತರಿಕೆ ಉಂಟಾದಂತಾಗುತ್ತದೆ, ಕ್ಷಮಾಳಿಗೆ. ಆದರೆ ನೋಡುತ್ತಾ ನಿಂತು ಬಿಟ್ಟರೆ ಏನೆಂದುಕೊಳ್ಳಲಿಕ್ಕಿಲ್ಲ? ಮತ್ತೆ ತನ್ನ ನಿರುತ್ಸಾಹದ ಹೆಜ್ಜೆಗಳನ್ನು ಎಳೆಯುತ್ತ ತನ್ನ ಹಾಸ್ಟೆಲ್ಲಿಗೆ ಬರುತ್ತಾಳೆ.

ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿರುವ ಕ್ಷಮಾ ಆ ಊರಿಗೆ ಟ್ರಾನ್ಸ್‌ಫರ್ ಆಗಿ ಬಂದು ಕೇವಲ ಹದಿನೈದು ದಿನಗಳಾಗಿವೆ. ಗಿಜಿ ಗಿಜಿ ಗುಟ್ಟುವ ಮಹಿಳೆಯರ ಹಾಸ್ಟೆಲಿನಲ್ಲಿ ಉಳಿದಿದ್ದಾಳೆ. ದೋಣಿ ಒಡೆದು ಸಮುದ್ರದ ಪಾಲಾಗಿ ಅಲೆಗಳು ಯಾವುದೋ ಭೂ ಪ್ರದೇಶಕ್ಕೆ ತಂದು ಬಿಟ್ಟವಳಂತೆ ಇರುವ ಅವಳಲ್ಲಿ ಯಾರಾದರೂ "ನೀವು ಅಪಘಾತಕ್ಕೆ ತುತ್ತಾಗಿ ಬಂದವರೇ?" ಎಂದು ಕೇಳಿದಾಗ ಎಲ್ಲವನ್ನೂ ಹೇಳಿಬಿಡಬಯಸುವ ಅಗಂತುಕ ಪ್ರಯಾಣಿಕನ ಉತ್ಕಂಟತೆ ಒಳಗಿನಿಂದ ಇತ್ತಾದರೂ ಅವಳ ಒಡೆದ ದೋಣಿಯ ಕಥೆ, ಹೊರಬರಲು ಆ ಸಂತೆಯಲ್ಲಿ ಅವಕಾಶವಿರಲಿಲ್ಲ. ಕ್ಷಮಾಳಿಗೆ ಹುಟಿ ಬಿಚ್ಚಲು ಮನಸ್ಸಾಗುವುದಿಲ್ಲ ಹೊಸ ಹುಡುಗಿಗೆ ಮಾತೇ ಬರುವದಿಲ್ಲ ಎಂಬ ಸುದ್ದಿ ಹಾಸ್ಟೆಲಿನಲ್ಲಿ ಹರಡುವಷ್ಟರ ಮಟ್ಟಿಗಿನ ಮೌನವನ್ನು ತಳೆದಿದ್ದಾಳೆ ಅವಳು. ಇಡೀ ದಿನವೂ ಎಲ್ಲೋ ಹೂತು ಬಿದ್ದ ಮನಸ್ಸನ್ನು ಎತ್ತಿ ಎತ್ತಿ ಆ ಕ್ಷಣಕ್ಕೆ ತಂದೆಳೆದು ನಿಲ್ಲಿಸುತ್ತಿರುವ ಪ್ರಯತ್ನ ಮಾಡುತ್ತಿರುವವಳಂತೆ ಇರುತ್ತದೆ ಅವಳ ನೋಟ, ಅವಳ ಆಕರ್ಷಕ ಕಣ್ಣುಗಳು ಅವೆಲ್ಲಿ ನೆಟ್ಟಿರುತ್ತವೆಯೋ ಅವಳಿಗೇ ತಿಳಿಯದು. ನೋಡಲು ಹಿತವೆನಿಸುವ ಸ್ನಿಗ್ಧ ಸೌಂದರ್ಯ ಅವಳದಾದರೂ ಅವಳ ಕುರಿತು ಅವಳಿಗೆ ಲಕ್ಷ್ಯ ಇಲ್ಲ, ಆಸ್ಥೆಯೂ ಇಲ್ಲ. ಇಪ್ಪತ್ತೆರಡರ ಯುವತಿಯಲ್ಲಿ ಇರಬೇಕಾದ ಚಾಂಚಲ್ಯ, ಚುರುಕುತನ ಎಲ್ಲ ಎಲ್ಲಿ ಹೋಗಿವೆಯೋ. ದಟ್ಟವಾಗಿ ಕವಿದ ಗಾಂಭೀರ್ಯ ನೋವಿನಿಂದ ಅರ್ಧವಾದಂತೆ ತೋರುವ ಹೊಲಿದ ತುಟಿಗಳು, ಈ ಬಾಲೆಯನ್ನು ಹಿಂಸಿಸುತ್ತಿರುವ ನೋವಾದರೂ ಏನಿರಬಹುದು? ಕೇಳುವವರಿಲ್ಲ ಆ ಸಂತೆಯಲ್ಲಿ.

ಆಫೀಸಿನಲ್ಲೂ ಹೊಸಬಳು ಮಾತು ಬರದವಳು ಎಂಬ ಸುದ್ದಿ ಹರಡಿ ಯಾರು ಅವಳ ಪರಿಚಯ ಬಯಸಿ ಬಂದಿದ್ದಿಲ್ಲ. ಒಂದೇ ಒಂದು ಮಾತನಾಡದಿದ್ದರೂ ಪರಿಚಿತಳಾದವಳೆಂದರೆ ಅವಳೇ: ಆ ಕಿಟಕಿಯ ಹಿಂಬದಿಯ ಹೆಂಗಸು. ಅಂದು ಬೆಳಿಗ್ಗೆ ಆಫೀಸಿಗೆ ಹೋಗುವಾಗ ಕ್ಷಮಾ ಎಂದಿನಂತೆ ಕಿಟಕಿಯತ್ತ ದಿಟ್ಟಿಸಿದಳು. ಆದರೆ ಅವಳು ಕಿಟಕಿಯ ಹಿಂದೆ ಕಾಣದಿದ್ದಾಗ ಸುಮ್ಮನೇ ಸುತ್ತ ಒಂದು ನೋಟ ಹರಿಸಿದಳು. ಆಕೆ ಗುಲಾಬಿ ಗಿಡವೊಂದರ ಬಳಿ ಮಣ್ಣು ಅಗೆಯುತ್ತಾ ನಿಂತಿದ್ದಳು ಕಣ್ಣಿನಲ್ಲಿ ಮಾತ್ರ ಅದೇ ನಗೆ ಸೂಸಿ ಕ್ಷಮಾಳತ್ತ ನೋಡಿದಳು.

ಆ ಹೆಂಗಸಿನ ಬಗೆಗೆ ಆ ಊರಲ್ಲಿ ಬೇಕಾದಷ್ಟು ಊಹಾಪೋಹಗಳೂ, ದಂತಕಥೆಗಳು ಇವೆ. ಅವಳು ಗಂಡನನ್ನು ಬಿಟ್ಟವಳಂತೆ. ತಲೆ ಕೆಟ್ಟು ಗುಣವಾದವಳಂತೆ, ಅಪಾರ ಆಸ್ತಿ ಮನೆ ಎಲ್ಲವೂ ಇದ್ದೂ ವಿರಕ್ತ ಸನ್ಯಾಸಿಯ ಬದುಕನ್ನು ಸಾಗಿಸುತ್ತಿರುವ ಹುಚ್ಚಿಯಂತೆ, ಮದುವೆಯಾಗದ ಹುಡುಗಿಯರ ಮೇಲೆ ಮೋಡಿ ಹಾಕಿ ನೀವು ಜಗತ್ತಿನಲ್ಲಿ ಯಾವುದಾದರನ್ನೂ ನಂಬಿ ಆದರೆ ಗಂಡಸು ನಿಮ್ಮ ದೇಹದ ಮೇಲೆ ತೋರುವ ಪ್ರೀತಿಯನ್ನು ಮಾತ್ರ ನಂಬಬೇಡಿ. ಎಂದೆಲ್ಲ ಹೇಳಿ ತಲೆ ಕೆಡಿಸಿ ಗಂಡಸೆಂದರೆ ಮಾರು ದೂರ ಸರಿಯುವಂತೆ ಮಾಡುವ ಮಾಟಗಾತಿಯಂತೆ ... ಒಂದಲ್ಲ ಎರಡಲ್ಲ ನೂರು ಕತೆಗಳು ಆದರೆ ಇದಾವುದರ ಬಗ್ಗೆಯೂ ತಲೆ ಕೆಡಿಸಿಕೊಂಡಿಲ್ಲ. ಕ್ಷಮಾ.

ಆದರೆ ಅವಳ ಬಗೆಗೆ ಏನೆಂದೂ ಅರಿಯದೇ ಅವರಿಂದ ದಿಢೀರನೆ ಉಪಕೃತರಾಗಿ ಆಜೀವ ಪರ್ಯಂತ ಅವಳನ್ನು ನೆನೆಸಿ ನಮಿಸುವ ಇನ್ನೊಂದು ಗುಂಪೂ ಆ ಊರಲ್ಲಿದೆ. ಕೆ.ಎಂ.ಸಿ.ಯಲ್ಲಿದ್ದ ಗಂಡ ನರ್ಸಿಂಗ್‌ಹೋಂನಲ್ಲಿ ಸತ್ತು, ಅನಾಥ ವಿಧವೆಯಾಗಿ ಗೋಳಾಡುತ್ತಿದ್ದ ಸುಬ್ಬಲಕ್ಷ್ಮಮ್ಮನನ್ನು ಇದೇ ಮಹಿಳೆ ಸಂತೈಸಿ ತನ್ನ ಕಾರಿನಲ್ಲೇ ಹೆಣ ಹಾಕಿಕೊಂಡು ಸುಳ್ಯದ ಅವರ ಮನೆಯ ತನಕ ಮುಟ್ಟಿಸಿ, ಬರುವಾಗ ಲಕ್ಷ್ಮಮ್ಮನ ಕೈಯಲ್ಲಿ ಐನೂರು ರೂಪಾಯಿ ಕೊಟ್ಟು ಬಂದು ಅವರ ಬಗ್ಗೆ ಯಾರಲ್ಲಿಯೂ ಹೇಳಿಕೊಳ್ಳದೆ ಇದ್ದುದಿದೆ. ಕ್ಷಮಾ ವಾಸಿಸುವ ಅವಳ ಮನೆಯ ಬಳಿಯಿರುವ ಹಾಸ್ಟೆಲಿನಲ್ಲಿರುವ ಜನತಾ ಬಜಾರದಲ್ಲಿ ಕೆಲಸ ಮಾಡುವ ಗಂಗಾ ಎಂಬವಳನ್ನು ವಾರ್ಡನ್ ವಿನಾಕಾರಣ ಬೈದು ಹೊರಹಾಕಿದಾಗ ಅವಳನ್ನು ವಾರಗಟ್ಟಲೆ ತನ್ನ ಮನೆಯಲ್ಲಿಟ್ಟುಕೊಂಡು ಬೇರೊಂದು ರೂಮು ಹಿಡಿದು ಕೊಟ್ಟಿದ್ದಿದೆ. ಒಂದೊಂದು ದಿನ ಬೆಳಗಾಗುವಷ್ಟರಲ್ಲಿ ಹಣ್ಣಿನ ಬುಟ್ಟಿಗಳೊಂದಿಗೆ ಅನಾಥಾಶ್ರಮದ ಎದುರು ಹಾಜರಾಗಿ ಕೊನೆಯ ಹಣ್ಣನ್ನು ಕೊನೆಯ ಹುಡುಗ ತಿನ್ನುವ ತನಕವೂ ಅಲ್ಲಿದ್ದು ಕಾರನ್ನು ಸಮುದ್ರ ದಂಡೆಯತ್ತ ಓಡಿಸುವದಿದೆ. ಒಟ್ಟಿನಲ್ಲಿ ಅವಳೊಬ್ಬ ವಿಚಿತ್ರ ಹೆಂಗಸೆಂಬುದು ಅವಳ ಅಸುಪಾಸಿನವರಿಗೆಲ್ಲ ಗೊತ್ತು.

ಕ್ಷಮಾಳಿಗೆ ಆದ ಅನುಭವವೇ ಬೇರೆ. ಕಿಟಕಿಯಾಚೆಯಿಂದ ಅವೆರಡು ಕಣ್ಣುಗಳು ತನ್ನನ್ನು ದಿಟ್ಟಿಸುತ್ತಿದ್ದಂತೆ ಘನೀಭೂತವಾಗಿರುವ ತನ್ನೆಲ್ಲ ನೋವೂ ಕರಗಿ ಹರಿಯುತ್ತಿರುವ ಅನುಭವ, ಅವಳೆದುರು ತನ್ನ ದುಃಖ ಜಲಪಾತವಾಗಿ ಧುಮ್ಮಿಕ್ಕಿ ಬಿಡಬಹುದೆಂಬ ಭಯ ... ಅನಾಥ ಶಿಶುವೊಂದನ್ನ 'ಮಗೂ' ಎಂದು ಕರೆದವಳನ್ನು ಆ ಮಗು 'ಅಮ್ಮಾ' ಎಂದು ಅಪ್ಪಿ ಹಿಡಿದು ಬಿಡುವ ಹದದಂತೆ ತಾನೂ ವಿವಶಳಾಗಿ ಬಿಡಬಹುದೆಂಬ ಭಯ... ಇವೆಲ್ಲವುಗಳ ನಡುವೆ ಕ್ಷಮಾ ಮತ್ತಷ್ಟು ದುರ್ಬಲಳಾಗಿ ಬೇಗ ಬೇಗನೆ ಹೆಜ್ಜೆಯಿಕ್ಕಿ ಬಂದು ಬಿಡುತ್ತಾಳೆ. ಆದರೂ ಅದೇನೋ. ಹಿಂದಿನಿಂದ ತನ್ನ ಬೆನ್ನ ಮೇಲೆ ಅವಳ ನೋಟ ಮೈ ತಡವುತ್ತಲೇ ಇದೆ ಎನ್ನುವ ಅನುಭವ ಮಾತ್ರ ಆಗುತ್ತಲೇ ಇರುತ್ತದೆ.

ಭುವನೇಶ್ವರಿ ಹೆಗಡೆ

ಅಂದು ಕ್ಷಮಾ ತೀರಾ ಬಳಲಿದ್ದಳು. ಈ ಜಗತ್ತಿಗೂ ತನಗೂ ಏನೂ ಸಂಬಂಧವಿಲ್ಲದವಳಂತೆ ಎಲ್ಲರಿಂದ್ಲೂ, ಹೆಜ್ಜೆ ಇಟ್ಟು ಟ್ರಾಫಿಕ್ ಪೋಲೀಸ್, ಬಸ್ ಕಂಡಕ್ಟರ್, ಎಲ್ಲರಿಂದಲೂ ಬೈಗುಳ ತಿಂದಿದ್ದಳು. ತಾನೇನು ಮಾಡುತ್ತಿರುವೆನೆಂಬ ಪರಿವೆಯೇ ಅವಳಿಗಿದ್ದಂತಿರಲಿಲ್ಲ. ಈ ಊರಿಗೆ ಬಂದಾಗಿನಿಂದ ಬೂದಿ ಮುಚ್ಚಿಕೊಂಡಿದ್ದ ಅವಳ ಹೊಟ್ಟೆಯೊಳಗಿನ ಕೆಂಡ ಇಂದು ಹಠಾತ್ತನೆ ದಾವಾನಲವಾಗಿ ಹೊತ್ತಿ ಉರಿಯತೊಡಗಿತ್ತು. ಅಂದು ರವಿಯ ಪತ್ರ ಬಂದಿತ್ತು. ರವಿ ಮತ್ತೆ ಬರೆಯುವ ಸಾಹಸ ಮಾಡಿಯಾನೆಂಬ ನಿರೀಕ್ಷೆಯಲ್ಲಿ ಅವಳಿರಲಿಲ್ಲ.

ನ್ನ ಕ್ಷಮಾ.

[illegible]

ಬಾದು ನನಗೆ ಗೊತ್ತು. ನಾನು ಪಾಪಿ. ನನಗೆ ಗೊತ್ತು. ನಾನು ಈಗಾಗಲೇ ಬೇರೊಬ್ಬಳಿಗೆ ನಿಶ್ಚಯಿಸಲ್ಪಟ್ಟವ ಎಂದು ನಿನಗೆ ಪ್ರಾರಂಭದಲ್ಲೇ ಹೇಳಿದ್ದರೆ ಖಂಡಿತ ನಿನ್ನ ಪ್ರೇಮ ನನಗೆ ಸಿಗುತ್ತಿರಲಿಲ್ಲ. ಆದರೆ ಕ್ಷಮಾ ಬ್ಯಾಂಕಿನಲ್ಲಿ ನಿನ್ನನ್ನು ನೋಡಿದಾಕ್ಷಣವೇ ನನ್ನ ಪಕ್ಕಿಯಾಗಿರಿದ್ದ ಊರಿನ ಹುಡುಗಿ ಜಯಾ ಮರೆತು ಹೋದಳು. ನಿನ್ನ ಕಣ್ಣುಗಳು ನನಗೆ ಹುಚ್ಚು ಹಿಡಿಸಿದವು. ನಿನ್ನನ್ನು ಗೆಲ್ಲುವ ಆಸೆಯಿಂದ ನನ್ನ ಕುರಿತು ಸುಳ್ಳು ಸುಳ್ಳೆ ಕರುಣಾಜನಕ ಕಥೆಗಳ ಸರಣಿಯನ್ನು ನಿನ್ನೆದುರು ಬಿಚ್ಚಿದೆ. ಕರುಣೆಯಿಂದ ಪ್ರೀತಿ ಗಳಿಸಿಕೊಳ್ಳುವ ಪ್ರಯತ್ನದಲ್ಲಿ ನಾನು ಗೆದ್ದೆ. ನೀನು ನಿನ್ನೆಲ್ಲ ಪ್ರೀತಿಯನ್ನು ಈ ಅಪಾತ್ರನ ಮೇಲೆ ಎರೆದೆ. ನನ್ನನ್ನ ಮದುವೆಯಾಗುವ ಹುಡುಗ ಎಂದು ಎಲ್ಲರೆದುರು ತೋರಿಸಿ ಬೀಗಿದೆ. ಒಬ್ಬ ಹುಡುಗಿ ತಾನು ಪ್ರೀತಿಸಿದಾತನಿಗೆ ಏನೆಲ್ಲ ನೀಡಬಹುದೆಂಬುದನ್ನು ನೀನು ನನಗೆ ತೋರಿಸಿಕೊಟ್ಟೆ ನಿಜ ಕ್ಷಮಾ ನಿನ್ನನ್ನು ಪಡೆದ ಸಂಭ್ರಮದಲ್ಲಿ ನಾನು ಓಡಿಯರು ನಿಶ್ಚಯಿಸಿಟ್ಟ ನಾನು ಮದುವೆಯಾಗಿ ಕೊಟ್ಟ ಹುಡುಗಿ ಜಯಾಳನ್ನು ಪೂರ್ತಿ ಮರೆತಿದ್ದೆ.

ಆದರೆ ಬ್ಯಾಂಕು ನನ್ನನ್ನು ಹದಿನೈದು ದಿನದ ಮಟ್ಟಿಗೆ ಹೈದರಾಬಾದಿಗೆ ಕಳಿಸಿದ ಮರುದಿನವೇ ಇದೆಲ್ಲ ಘಟಿಸಿದ್ದು. ನನ್ನ ಜೊತೆಗೆ ಬೇರೊಬ್ಬ ಹುಡುಗಿ ತಿರುಗುತ್ತಿರುವುದನ್ನು ಕೇಳಿದ ಜಯಾ ತನ್ನ ಗೆಳತಿಯೊಂದಿಗೆ ಸೀದಾ ನಮ್ಮ ಬ್ಯಾಂಕಿಗೆ ಬಂದಿದ್ದಳಂತೆ. ನನ್ನನ್ನು ಕೇಳಿಕೊಂಡು ಬಂದವರೆಂದು ಸಹಜವಾಗಿ ಅಸ್ಥೆ ವಹಿಸಿದ ನೀನು ಅವರನ್ನು ಕ್ಯಾಂಟೀನಿಗೆ ಕರೆದೊಯ್ದೆಯಂತೆ. ಅಲ್ಲಿ ಜಯಾ ತನ್ನ ನಿಶ್ಚಿತಾರ್ಥದ ಉಂಗುರ ತೋರಿಸಿ ದಿಕ್ಕು ದಿಕ್ಕು ಅತ್ತಳಂತೆ. ಒಂದೂ ಮಾತಾಡದೆ ಕಲ್ಲಾಗಿ ಕೂತ ನೀನು ಕೊನೆಯಲ್ಲಿ 'ಚಿಂತಿಸಬೇಡ ಜಯಾ ಆದಷ್ಟು ಬೇಗನೆ ನಿಮ್ಮಿಬ್ಬರ ಮದುವೆಯಾಗುವಂತೆ ನೋಡಿಕೊಳ್ಳುತ್ತೇನೆ' ಎಂದು ಭರವಸೆ ಕೊಟ್ಟೆಯಂತೆ. ಇದೆಲ್ಲಾ ಜಯಾಳೇ ನನಗೆ ಹೇಳಿದ್ದು. ಮರುದಿನವೇ ನೀನು ಟ್ರಾನ್ಸ್‌ಫರ್ ತೆಗೆದುಕೊಂಡು ಹೋದೆಯಂತಲ್ಲ. ಕ್ಷಮಾ ನನ್ನನ್ನು ನೀನು ಕ್ಷಮಿಸಿದ್ದೀ ಎಂದಾದರೆ ನನ್ನ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡೆ. ನೀನು ನನಗೆ ಬರೆದಿಟ್ಟ ಪತ್ರದಲ್ಲಿ ನಾನು ಜಯಾಳನ್ನೇ ವಿವಾಹವಾಗಬೇಕೆಂದು ಆಣೆ ಹಾಕಿರುವೆ. ಹಾಗೆ ಮಾಡುವುದು ನಿನಗಿಷ್ಟವೇ? ನನಗೇನೂ ತೋಚುತ್ತಿಲ್ಲ. ನನ್ನನ್ನು ಕ್ಷಮಿಸುತ್ತೀಯ ಕ್ಷಮಾ?

ಪತ್ರ ಓದಿದ ಕ್ಷಮಾ ಭೂತ ದರ್ಶನವಾದವರಂತೆ ಬೆಚ್ಚಿದಳು ನನ್ನ ಸೌಧವೊಂದರಿಂದ ಕಡಲಿಗೆ ಎಸೆಯಲ್ಪಟ್ಟ ತಾನು ಅದರಲ್ಲೇ ಒಂದು ದ್ವೀಪ ಸೇರಿಕಣ್ಣೊರೆಸಿಕೊಂಡದ್ದಾಗಿದೆ. "ನನ್ನೆದುರು ಈಗ ನಿಷ್ಕಳವಾದ ಸಾವಿರ ರವೀ. ಮತ್ತೆ ನನ್ನನ್ನು ಪೀಡಿಸಬೇಡ ಪ್ಲೀಸ್ ಕ್ಷಮಿಸಿಬಿಡುತ್ತೇನೆ" ಎಂದು ಬರೆದು ಹಾಕಿದಳು. ಅಂದು ಬರುವಾಗಲೇ ಕಿಡಕಿಯ ಹೆಂಗಸು ಕಿಡಕಿ ಬಿಟ್ಟು ಗೇಟಿನ ಬಳಿ ನಿಂತು ಪೋಸ್ಟು ಮೊದಲ ಬಾರಿಗೆ ಕ್ಷಮಾಳೊಂದಿಗೆ ಮಾತನಾಡಿದಳು. ಬಹುಶಃ ಕ್ಷಮಾಳ ಊದಿದ ಕಣ್ಣು, ಸೋತ ನೋಟ, ಬಳಲಿದ ದೇಹ ಸಾವನ್ನೇ ನೆಟ್ಟಿ ಹೊರಟವಳ ಆ ಭಂಗಿ ಇವು ಆ ಮಹಿಳೆಯನ್ನು ಗೇಟಿನ ಬಳಿ ತಂದಿರಬೇಕು.

"ಭಲ್ಲ ಹತ್ತಿ ಬರುವಾಗ ತುಂಬಾ ಆಯಾಸವಾಗುತ್ತದೆ ಅಲ್ಲವೇ ಮಗೂ?" ಧ್ವನಿ ಬಂದತ್ತ ಕಣ್ಣೆತ್ತಿದಳು ಕ್ಷಮಾ. ಆಕೆ ಗೇಟಿಗೊರಗಿ ನಿಂತಿದ್ದಾಳೆ. ಅರಿವಿಲ್ಲದೇ ಅರ್ಧವಾಗಿ ಮಾತು ಹೊರಬಿತ್ತು ಕ್ಷಮಾಳ ಬಾಯಿಂದ,

"ಹೌದು ಅಮ್ಮ ತುಂಬ ಆಯಾಸವಾಗುತ್ತಿದೆ"

"ಒಳಗೆ ಬಂದು ವಿಶ್ರಮಿಸಿಕೊಂಡು ಹೋಗು" ಎನ್ನುತ್ತ ಆಕೆ ಗೇಟು ತೆರೆದಳು ಕ್ಷಮಾ ಮುಂದೆ ಮುಗ್ಧ ಕಂಗಳ ಒಳಹೊಕ್ಕಳು. ""ಕೂತಿರು ಮಗು" ಎಂದು ಒಳಹೋದ ಆಕೆ

[illegible]

"ಮಗು ನೀನು ಯಾರನ್ನಾದರೂ ಪ್ರೀತಿಸಿದ್ದೆಯಾ?" ಪ್ರಶ್ನೆಯಿಂದ ಕ್ಷಮಾಳಿಗೆ ಆಘಾತವಾಗಲಿಲ್ಲ. ಆದರೆ ಅವಳು ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ಹೂಂ ಎಂದು ಗೋಣಲ್ಲಾಡಿಸಿದಳು.

"ಆದರೆ ಪ್ರೀತಿಯಿಂದ ಧೂರೀಕರಿಸಲ್ಪಟ್ಟೆ ಅಲ್ಲವೆ?। ಅಷ್ಟೇ ಮೃದುವಾಗಿ ಮತ್ತೆ ಬಂತು ಪ್ರಶ್ನೆ. ಓ ಇವರಿಗೆ ಹೇಗೆ ತಿಳಿಯಿತು ನಾನು ಪ್ರೀತಿಸಿ ಪ್ರೀತಿಯಿಂದ ಉಚ್ಚಾಟಿಸಲ್ಪಟ್ಟ ವಿಚಾರ? ಅಳುತ್ತಲೇ ಕ್ಷಮಾ ಕೇಳಿದಳು,

"ಅಮ್ಮ ನಿಮಗೆ ಹೇಗೆ ತಿಳಿಯಿತು? ನೀವು ಮನಸ್ಸನ್ನು ಓದಬಲ್ಲಿರಾ?"

"ಇಲ್ಲ ಕಣ್ಣುಗಳಲ್ಲಿರುವ ನೋವನ್ನು ಗುರುತಿಸಬಲ್ಲೆ" ನಿಜ ಕ್ಷಮಾಳ ಕಣ್ಣಲ್ಲಿ ತುಂಬಿದ ನೋವು ಪ್ರೀತಿ ಕಾಣ ಸಿಗುವುದಕ್ಕಾಗಿ ಉಂಟಾದ ನಿರಾಸೆಯಲ್ಲ. ಒಮ್ಮೆ ಪ್ರೀತಿಯ ಸಿಂಹಾಸನದಲ್ಲಿ ಕುಳಿತು ಮೆರೆದು ಈಗ ನೆಲಕ್ಕಪ್ಪಳಿಸಲ್ಪಟ್ಟ ಆಘಾತದ ತತ್ತರಿಸುವಿಕೆಯ ನೋವು.

[illegible]

ಅರ್ಥವಾಗಿ ಹೋದವು. ಈ ಮುದುಕಿಯ ಪ್ರತೀಕ್ಷೆ ವ್ಯರ್ಥವಾಗಲಿಲ್ಲ ಮಗೂ, ನೀನು... ನೀನು ನನ್ನನ್ನು ಒಪ್ಪಿಕೊಳ್ಳುತ್ತೀ ಅಲ್ಲವೆ?" ಹೆಂಗಸು ಗದ್ಗದಿತಳಾಗಿ ಕ್ಷಮಾಳ ಕೈಯನ್ನು ಹಿಡಿದುಕೊಂಡಳು.

ಕ್ಷಮಾಳಿಗೆ ವಿಸ್ಮಯವಾಗಿ ಹೋಯಿತು. ಈ ತಾಯಿ ತನ್ನ ಹೊಟ್ಟೆಯಲ್ಲಿರುವ ಬಿಡಿಯ ಕೊಡುಗೆಯನ್ನು ತೆರೆದು ಹಾಕಿಕೊಡುವದಿಲ್ಲ. ತನ್ನ ಈ ನಿರುಪಯುಕ್ತ ದೇಹವನ್ನು ತಾನು ವಿಧೇಯಳಾದಂತೆ ಕತ್ತರಿಗೆ ಒಪ್ಪಿಸಿಕೊಳ್ಳುವದಿಲ್ಲ. ಅವಳ ಇಷ್ಟು ದಿನದ ವೇದನೆ ಮೆಲ್ಲ ಕರಗಿ ಕಣ್ಣೀರಾಗಿ ಕಡಲಾಗಿ ಉಕ್ಕತೊಡಗಿತು. ಅಳುತ್ತಲೇ ಹೇಳಿದಳು

"ಅಮ್ಮ ನಾನು ಸಾಯಬಯಸಿದೆ. ಆದರೆ ಇಲ್ಲ. ನಿಮ್ಮನ್ನು ನೋಡಿದ ಮೇಲೆ ಸಾವಿನಾಸೆ ನನ್ನನ್ನು ಬಿಟ್ಟೋಯಿತು. ನಾನು ಸಾಯಲಾರೆ. ಇದೋ ನನ್ನ ಮಗುವನ್ನು ನನ್ನನ್ನೂ ನಿಮ್ಮ ಮಡಿಲಿಗೇ ಹಾಕಿದ್ದೇನೆ" ಎನ್ನುತ್ತ ಆ ಹೆಂಗಸಿನ ತೊಡೆಯ ಮೇಲೆ ತಲೆಯಿಟ್ಟು, ಮಲಗಿಬಿಟ್ಟಳು.

ಸತ್ವ ಪರೀಕ್ಷೆಯ ಸರಣಿ

ಶ್ರೀಲಂಕಾ ವಿರುದ್ಧ 2-0 ಸರಣಿ ಜಯ ಪಡೆಯುವ ಮೂಲಕ 1985ರಲ್ಲಿ ಶ್ರೀಲಂಕಾದಲ್ಲಾದ ಸರಣಿ ಸೋಲಿನ ಮುಯ್ಯಿ ತೀರಿಸಿಕೊಂಡ ಭಾರತ ಕ್ರಿಕೆಟ್ ತಂಡ ತನ್ನ ನಿಜವಾದ ಸತ್ವ ಪರೀಕ್ಷೆಯನ್ನು ಇದೀಗ ಭಾರತ ಪ್ರವಾಸದಲ್ಲಿರುವ ಪಾಕಿಸ್ತಾನ ಕ್ರಿಕೆಟ್ ತಂಡ ದಿಂದ ಎದುರಿಸಲಿದೆ.

1986 ಭಾರತ ಟೆಸ್ಟ್ ಕ್ರಿಕೆಟ್‌ಗೆ ಹೆಚ್ಚು ಸವಿಯನ್ನು ನೀಡಿದ ವರ್ಷ. ಈ ವರ್ಷದುದ್ದಕ್ಕೂ ವಿಶ್ವ ಚಾಂಪಿಯನ್ ಭಾರತ ಒಂದು ದಿನದ ಕ್ರಿಕೆಟ್‌ನಲ್ಲಿ ಅಸ್ಥಿರ ಪ್ರದರ್ಶನ ನೀಡಿತ್ತಾದರೂ ಟೆಸ್ಟ್‌ನಲ್ಲಿ ಮಾತ್ರ ಉತ್ತಮ ಪ್ರದರ್ಶನ ನೀಡಿತ್ತು.

ಇಂಗ್ಲೆಂಡ್ ವಿರುದ್ಧ 2-0 ಜಯವನ್ನು ಅದರ ನೆಲದಲ್ಲಿ ದಾಖಲಿಸಿದ ಭಾರತ,ಆಸ್ಟ್ರೇಲಿಯಾವಿರುದ್ಧ ಸಮಸಾಹರ್ಹ ಆಟವಾಡಿತ್ತು. ಶ್ರೀಲಂಕಾ ವಿರುದ್ಧ ಕಾನ್ಪುರದಲ್ಲಿ ಟೆಸ್ಟ್ ವಿಜಯದೊಂದಿಗೆ 86ಕ್ಕೆ ವಿದಾಯ ಹಾಡಿದ ತಂಡ ಹೊಸ ವರ್ಷದಲ್ಲಿ ಕಟಕ್‌ನಲ್ಲಿ ಜಯ ಗಳಿಸುವದರೊಂದಿಗೆ ಸರಣಿ ಜಯ ಪಡೆದು 87ಕ್ಕೆ ಶುಭಾ ರಂಭ ಮಾಡಿತ್ತು.

ಶ್ರೀಲಂಕಾ ವಿರುದ್ಧದ ಜಯ ಭಾರತಕ್ಕೆ ಬೆನ್ನು ತಟ್ಟಿಕೊಳ್ಳುವ ರೀತಿಯದ್ದಲ್ಲ. ಟೆಸ್ಟ್ ಕ್ರಿಕೆಟ್‌ಗೆ ಇನ್ನೂ 'ಬೇಬಿ'ಯಾದ ಶ್ರೀಲಂಕಾದ ಬಳಿ ವೈವಿಧ್ಯಮಯ ಬೌಲಿಂಗ್ ಆಗಲೀ ಅನುಭವೀ ಬ್ಯಾಟಿಂಗ್ ಬಲವಾಗಲೀ ಇರಲಿಲ್ಲ.

ಅದೇ ರೀತಿಯಲ್ಲಿ ಆಸ್ಟ್ರೇಲಿಯ ಮತ್ತು ಇಂಗ್ಲೆಂಡ್ ಸಹ. ಭಾರತ ಇಂಗ್ಲೆಂಡ್ ಪ್ರವಾಸಕ್ಕೆ ತೆರಳಿದ್ದಾಗ ಇಂಗ್ಲೆಂಡ್, ವಿಂಡೀಸ್ ವಿರುದ್ಧ ಪಡೆದ ಬ್ಲ್ಯಾಕ್ ವಾಷ್‌ನಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ. ಇದೀಗ ಆಸ್ಟ್ರೇಲಿಯ ಪ್ರವಾಸದಲ್ಲಿರುವ ಇಂಗ್ಲೆಂಡ್ ಹೆಚ್ಚು ಆತ್ಮವಿಶ್ವಾಸದಿಂದ ಕೂಡಿದ್ದು ಬಲಿಷ್ಠ ತಂಡವಾಗಿ ಮೂಡಿಬರುವ ಲಕ್ಷಣ ಕಂಡು ಬರುತ್ತಿದೆ. ಭಾರತ ಎದುರಿಸಿದ ಆಸ್ಟ್ರೇಲಿಯ ಸಹ ಬೌಲಿಂಗ್‌ನಲ್ಲಿ ಹೇಳಿಕೊಳ್ಳುವಂತಹ ದ್ದಾಗಿರಲಿಲ್ಲ.

ಇಲ್ಲದರಿಂದಾಗಿ ಭಾರತದ ನಿಜವಾದ ಸತ್ವ ಪರೀಕ್ಷೆ ಪಾಕಿಸ್ತಾನ ವಿರುದ್ಧ ಸರಣಿಯಲ್ಲಿ ಆಗಲಿದೆ. ನಾಯಕ ಇಮ್ರಾನ್ ಅವರೇ ದೃಢವಾಗಿ ಹೇಳಿಕೊಳ್ಳುವಂತೆ ಪಾಕಿಸ್ತಾನದ ಬೌಲಿಂಗ್ ವಿಶ್ವದಲ್ಲೇ ಬಲಿಷ್ಠ ಮತ್ತು ವೈವಿಧ್ಯತೆಯಿಂದ ಕೂಡಿದೆ. ವಿಂಡೀಸ್ ತಂಡ ನಾಲ್ವರು ಭಯಾನಕ ವೇಗದ ಬೌಲರ್‌ಗಳನ್ನು ಮಾತ್ರ ಹೊಂದಿದ್ದರೆ ಪಾಕಿಸ್ತಾನ ತಂಡದಲ್ಲಿ ಇಮ್ರಾನ್ ಸೇರಿದಂತೆ ಇಬ್ಬರು ವೇಗದ ಬೌಲರ್‌ಗಳಲ್ಲದೇ ಇಬ್ಬರು ಉತ್ತಮ ಸ್ಪಿನ್ನರ್‌ಗಳೂ ಇದ್ದಾರೆ.

ವಿಂಡೀಸ್ ವಿರುದ್ಧ ಅತ್ಯುತ್ತಮ ಬೌಲಿಂಗ್ ಪ್ರದರ್ಶನ ನೀಡಿರುವ ನಾಯಕ ಇಮ್ರಾನ್. ಈಗ ತನ್ನ ಕ್ರಿಕೆಟ್ ಜೀವನದ ಶಿಖರದಲ್ಲೂ (ವಿಶ್ವಕಪ್ ನಂತರ ನಿವೃತ್ತನಾಗುವುದಾಗಿ ಈಗಾಗಲೇ ಪ್ರಕಟಿಸಿದ್ದಾರೆ) ಉತ್ತಮ ಫಾರ್ಮ್‌ನಲ್ಲಿದ್ದಾರೆ. ಅವರ ಉತ್ತರಾಧಿಕಾರಿಯಂತೆ ಮೂಡಿಬರುತ್ತಿರುವ ವಸೀಂ ಅಕ್ರಂ, ಜಾಕೀರ್ ಖಾನ್ ಮತ್ತು ವಿಂಡೀಸ್ ಸರಣಿಯ ಶೋಧ ಸಲೀಂ ಜಾಫರ್ ಬೌಲಿಂಗ್‌ನಲ್ಲಿ ನಾಯಕನ ಬೆಂಬಲಕ್ಕಿದ್ದಾರೆ.

ಆದರೆ ಪಾಕಿಸ್ತಾನದ ಬೌಲಿಂಗ್‌ನಲ್ಲಿ ಮುಂಚೂಣಿಯಲ್ಲಿರುವವರು ಲೆಗ್‌ಸ್ಪಿನ್ನರ್ ಅಬ್ದುಲ್ ಕಾದಿರ್. ಸದ್ಯಕ್ಕೆ ನಿಸ್ಸಂಶಯವಾಗಿ ವಿಶ್ವದ ಸರ್ವ ಶ್ರೇಷ್ಠ ಸ್ಪಿನ್ನರ್ ಎನಿಸಿರುವ ಕಾದಿರ್. ವಿಶ್ವದ ಎಲ್ಲಾ ಎದುರಾಳಿಗಳಿಗೆ ಸಿಂಹಸ್ವಪ್ನರಾಗಿರುತವರು.

ಕ್ರೀಡಾಂಗಣ

ಏಕಾಂಗಿಯಾಗಿ ತಂಡವನ್ನು ವಿಜಯದತ್ತ ಕೊಂಡೊಯ್ಯುವ ಶಕ್ತಿಯುಳ್ಳ ಕಾದಿರ್. ಫೈಸ್ಲಾಬಾದ್‌ನಲ್ಲಿ ಬಲಿಷ್ಠ ವಿಂಡೀಸ್‌ನ ದಯನೀಯ ಸೋಲಿಗೆ ಕಾರಣರಾದವರು. ಅವರೀಗ ತನ್ನ ಟೆಸ್ಟ್ ಜೀವನದ ಉತ್ತುಂಗ ಫಾರ್ಮ್‌ನಲ್ಲಿದ್ದಾರೆ.

ಕಾದಿರ್ ಅವರ ಬೌಲಿಂಗ್ ವಿಶ್ವದ ಶ್ರೇಷ್ಠ ಲೆಗ್ ಸ್ಪಿನ್ನರ್‌ಗಳಲ್ಲೊಬ್ಬರಾಗಿದ್ದ ಭಾರತದ ಬಿ. ಎಸ್. ಚಂದ್ರಶೇಖರ್ ಅವರ ಮಟ್ಟಕ್ಕೇರುವಂಥಾದಾಗಿದ್ದು. ಅವರಿಗೆ ತೌಸಿಫ್ ಅಹ್ಮದ್ ಅವರು ಸಮರ್ಥ ಜೊತೆಗಾರರಾಗಿದ್ದಾರೆ.

ಅಗತ್ಯ ಬಿದ್ದಾಗ ಮುದಸ್ಸರ್‌ನಜರ್ ಮತ್ತು ಮನ್ಸೂರ್ ಇಲಾಹಿ ಅವರೂ ಮಧ್ಯಮ ವೇಗದ ಬೌಲಿಂಗ್ ನಡೆಸಲು ಸಮರ್ಥರಿದ್ದಾರೆ.

ಆದರೆ ಪಾಕಿಸ್ತಾನದ ಬ್ಯಾಟಿಂಗ್ ಮಾತ್ರ ದುರ್ಬಲವಾಗಿದೆ. ಮಾಜಿ ನಾಯಕ ಈಗ ಉಪನಾಯಕರಾಗಿರುವ ಅನುಭವಿ ಜಾವೇದ್ ಮಿಯಾಂದಾದ್ ಮಾತ್ರ ಭರವಸೆಯ ಬ್ಯಾಟ್ಸ್‌ಮನ್ ಆಗಿದ್ದು ಪೂರ್ಣ ಹೊಣೆ ಅವರ ಹೆಗಲಿಗೇರಿದೆ. ಜಾವೇದ್‌ಗೆ ಉಳಿದವರಿಂದ ಎಷ್ಟು ಬೆಂಬಲ ಸಿಗುತ್ತದೆ ಎನ್ನುವುದು ಕಾದು ನೋಡಬೇಕಷ್ಟೇ.

ಆದರೆ ಭಾರತದ್ದು ಬೌಲಿಂಗ್‌ಗಿಂತ ಬ್ಯಾಟಿಂಗ್‌ನಲ್ಲಿ ಬಲಿಷ್ಠ ತಂಡ. ದಿನದಿಂದ ದಿನಕ್ಕೆ ಹದಿಹರೆಯದ ತರುಣರನ್ನು ನಾಚಿಸುವ ಗಾವಸ್ಕರ್ ತಮ್ಮ ಬ್ಯಾಟಿಂಗ್ ಎಂದೂ ಕಳೆಗುಂದುವುದು ಸಾಧ್ಯವಿಲ್ಲವೇನೊ ಎನ್ನಿಸುವ ಆಟವಾಡುತ್ತಿದ್ದರೆ, ವೆಂಗ್‌ಸರ್ಕಾರ್, ಅಜರುದ್ದೀನ್, ಅಮರ್‌ನಾಥ್ ಸಹ ತೀವ್ರ ಒತ್ತಡದಲ್ಲೂ ಎಂಥ ವಿಕೆಟ್‌ನಲ್ಲೂ ಬ್ಯಾಟಿಂಗ್ ನೀಡಬಲ್ಲೆವೆಂದು ತೋರಿಸಿಕೊಟ್ಟಿದ್ದಾರೆ.

ಪಾಕಿಸ್ತಾನಕ್ಕೆ ಹೋಲಿಸಿದರೆ ಭಾರತ ಬೌಲಿಂಗ್ ಸಶಕ್ತವಲ್ಲವೆಂಬಂತೆ ಕಾಣಿಸಿದರೂ, ಒಂದು ವರ್ಷದ ಹಿಂದೆ ಇದ್ದಂತೆ ದುರ್ಬಲವಾಗಿಲ್ಲ. ಲಂಕಾ ವಿರುದ್ಧದ ಸರಣಿಯೊಂದಿಗೆ ಭಾರತದ ಸ್ಪಿನ್ ದಾಳಿ ಮತ್ತೆ ಪ್ರಾಬಲ್ಯಕ್ಕೆ ಬರುವ ನಿರೀಕ್ಷೆ ಮೂಡಿಸಿದೆ. ಮಣಿಂದರ್-ಯಾದವ್-ರವಿಶಾಸ್ತ್ರಿ ಜೋಡಿ ಪ್ರಖ್ಯಾತ ಬೇಡಿ-ಪ್ರಸನ್ನ-ಚಂದ್ರಶೇಖರ್ ಜೋಡಿಯಂತೆ ಮಿಂಚಿ ಭಾರತದ ಕ್ರಿಕೆಟ್ ಸ್ವರ್ಣಯುಗವನ್ನು ಮತ್ತೊಮ್ಮೆ ಪುನರಾವರ್ತಿಸುವುದೇ ಎಂದು ಕಾದು ನೋಡಬೇಕಾಗಿದೆ.

ಆಸ್ಟ್ರೇಲಿಯ ವಿರುದ್ಧ ಸರಣಿಯಲ್ಲಿ ಎಂದಿನ ಮಟ್ಟ ಕಂಡುಕೊಳ್ಳಲು ವಿಫಲರಾದ ನಾಯಕ ಕಪಿಲ್, ಲಂಕಾ ವಿರುದ್ಧ ಮರಳಿ ಫಾರ್ಮ್‌ಗೆ ಬಂದಿದ್ದು ಭಾರತಕ್ಕೆ ಸಮಾಧಾನ ತಂದಿದೆ. ಬೌಲರ್ ಒಬ್ಬನ ಮಹತ್ಸಾಧನೆಯಾದ 300 ವಿಕೆಟ್‌ನ್ನು ಕಟಕ್‌ನಲ್ಲಿ ಪಡೆದ ಕಪಿಲ್ ಪಾಕ್ ವಿರುದ್ಧ ಯಾವುದೇ ಒತ್ತಡವಿಲ್ಲದೇ ನಿರಮ್ಮಳವಾಗಿ ಬೌಲಿಂಗ್ ನಡೆಸಬಹುದು. ಅವರ ಹೊಸ ಚೆಂಡಿನ ಜೊತೆಗಾರರಾಗಿ ರಾಜುಕುಲಕರ್ಣಿ ಭರವಸೆ ಹುಟ್ಟಿಸಿದ್ದಾರೆ. ಚೇತನ್ ಶರ್ಮ ಅವರು ಆಡಲು ಸಮರ್ಥರಿರುವುದಕ್ಕಿಂತ ಹೆಚ್ಚು ಅಸಮರ್ಥರಾಗಿರುತ್ತಾರೆ.

ಎರಡೂ ದೇಶಗಳ ನಡುವೆ ಇದುವರೆಗೆ ನಡೆದ 35 ಟೆಸ್ಟ್‌ಗಳಲ್ಲಿ ಪಾಕಿಸ್ತಾನ ಆರರಲ್ಲೂ ಭಾರತ ನಾಲ್ಕರಲ್ಲೂ ಗೆದ್ದಿದ್ದು ಉಳಿದ 25 ಡ್ರಾಗೊಂಡಿವೆ. ಭಾರತದ ಎಲ್ಲಾ ವಿಜಯಗಳೂ ಸ್ವದೇಶದಲ್ಲೇ ದಾಖಲಾದುದು ವಿಶೇಷ. ಇಲ್ಲಿ ನಡೆದ 19 ಟೆಸ್ಟ್‌ಗಳಲ್ಲಿ ಪಾಕ್ ಒಂದರಲ್ಲಿ ಜಯಗಳಿಸಿದೆ.

1981-82ರ ಸರಣಿಯ ಆರು ಟೆಸ್ಟ್‌ಗಳಲ್ಲಿ ಭಾರತ ಎರಡರಲ್ಲಿ ಜಯಗಳಿಸಿ ಸರಣಿ ಗೆದ್ದಿದ್ದರೆ 83ರ ಎಲ್ಲಾ ಮೂರು ಟೆಸ್ಟ್‌ಗಳು ಡ್ರಾಗೊಂಡಿತ್ತು.

ಎರಡು ಸಮಬಲ ತಂಡಗಳ ನಡುವಣ ಹೋರಾಟ ಕುತೂಹಲಕರವಾಗಿರುವ ನಿರೀಕ್ಷೆ ಹುಟ್ಟಿಸಿದ್ದರೂ ಅವೆಲ್ಲ ಪಿಚ್‌ನ್ನು ಪೂರ್ಣವಾಗಿ ಅವಲಂಬಿಸಿದೆ. ಸ್ಪಿನ್ ವಿಭಾಗ ದುರ್ಬಲಗೊಳ್ಳುತ್ತಾ ಬಂದಂತೆ ಭಾರತದ ಪಿಚ್‌ಗಳೆಲ್ಲ ಬ್ಯಾಟ್ಸ್‌ಮನ್‌ಗಳಿಗೆ ಸ್ವರ್ಗವಾಗಿ ಪರಿವರ್ತನೆಗೊಂಡವು.

ನಮ್ಮ ತಂಡದ ಸಾಮರ್ಥ್ಯಗಳಿಗೆ ಹೊಂದುವಂತೆ ಬ್ಯಾಟ್ಸ್‌ಮನ್ ಮತ್ತು ಬೌಲರ್ ಇಬ್ಬರಿಗೂ ನೆರವು ನೀಡುವ ಸ್ಪೋರ್ಟಿವ್ ವಿಕೆಟ್‌ಗಳನ್ನು ಈ ಸರಣಿಗೆ ಸಿದ್ಧಪಡಿಸಿದರೆ ಮಾತ್ರ ಅದು ಜೀವಂತವಾಗಿದ್ದು ಕುತೂಹಲ ಕೆರಳಿಸಬಹುದು ಇಲ್ಲವೇ ಹೋದರೆ ಆಸೀಸ್ ವಿರುದ್ಧದ ಸರಣಿಯಂತೆ ನೀರಸವಾಗಿ ಉಳಿಯಬಹುದು.

-ಬಿ. ಐ. ಕಟ್ಟಿಗಾರ್

ಒಂದು ಕನಸು

ನಿನ್ನೆ ರಾತ್ರಿ.
ನನ್ನ ಕನಸಿನಲ್ಲಿ
ಪುತ್ತೂರಿಗೆ ಹೋಗಿದ್ದೆ.
... ಡಮ್ ಡಮಕ್, ಡಮ್ ಡಮಕ್...
ಹೆಜ್ಜೆ ಹಾಕಿದೆ, ಹೌದು, ಚೋಮ!
ಅದೇ ತುಂಡು ಬಟ್ಟೆ, ಅದೇ ಕಣ್ಣುಗಳು.
ಅದೇ ಭಂಗಿ, ಕೈಯಲ್ಲಿ ದುಡಿ, ಬಗಲಲ್ಲಿ ಹೆಂಡ.
ನಾನು ಹೋದದ್ದನ್ನೂ ನೋಡದೆ,
ನಾನೇನು ? ನೀವು ಹೋಗಿದ್ದರೂ !
ದಿಗಂತಕ್ಕೆ ಮುಖ ಮಾಡಿ
'ಲೇ ಲೇ ಲೆ ಲೇ ಲೆ' ಕುಣಿಯುತ್ತಿದ್ದ
'ಅಂಗಾರ' ಮೊನ್ನೆ ತಾನೆ
ಎಲ್ಲರೆದುರಿಗೇ 'ಗಂಗಾ ತೀರ್ಥ'ದ ಬಿದಾಯಿಯೊಳಗೆ
ಮುಳುಗಿ ಸತ್ತನಂತೆ!
'ಕುಕ್ರ' 'ಮಿಷನರಿ ಪುರಂ'ನಲ್ಲಿ
ಸಾಹೇಬನಾದನಂತೆ.
'ಚನಿಯ' ಮಾರಿಕೋಣಕ್ಕೆ ಬಲಿಯಾದನಂತೆ.
'ಗುರುವ'ನನ್ನು ಮತ್ತೆ 'ಹಿಂದೂ' ಮಾಡುತ್ತೇವೆಂದು
ಶ್ರೀ ... ಮಠಾಧೀಶರು ಹೇಳಿದ್ದಾರಂತೆ!
ಪರಂಗಿ ಬೂಬನ ಬೆಳ್ಳಿ,
ಬಾಯಿ ಬಡಿದು ಕೊಂದಳು.
ಚೋಮಾ! ಎಂದೆ,
ನೋಡಿದ,
'ಅಂಗೈಯಗಲ ಜಮೀನು ದಣಿ' ಎಂದ,
ಅಂಗೈ ನೋಡಿಕೊಂಡೆ,
ಛಿದ್ರವಿಚ್ಛಿದ್ರ ಗೆರೆಗಳು!
ನಿಮ್ಮ ಜ್ಯೋತಿಷ್ಯಕ್ಕೆ ಮಣ್ಣುಹಾಕ, ಎಂದೆ.
ಮತ್ತೆ ಮುಖ ಮೇಲೆ ಮಾಡಿದ
ಬಹುಶಃ ಅವನ ಕಣ್ಣುಗಳು.
ಸಂಕಪ್ಪಯ್ಯನ ವೀಳ್ಯದ ರಸಕ್ಕಿಂತ ಕೆಂಪಿದ್ದವು!
ಪಟ್ಟೆಕ್ಕನೆ ಕಣ್ಣು ಬಿಟ್ಟೆ,-
ಪಳ್ಳಿಯ ಬಾಂಗು, ಸುಬ್ಬುಲಕ್ಷ್ಮಿಯ ಸುಪ್ರಭಾತ
ಚರ್ಚಿನ ಘಂಟೆ, ಕಿವಿಗೆ ಅಪ್ಪಳಿಸಿದವು.
ಹೆಂಡತಿ ಕೇಳಿದಳು.
'ಬೇಜಾರು ಚೋಮನದುಡಿ, ಸಿನಿಮಾಕ್ಕೆ ಹೋಗೋಣವೆ?'

ಭದ್ರಪ್ಪ ಹೆನ್ಲಿ

ನದಿ ಮತ್ತು ನಾನು

ನೀನು
ಬೆಟ್ಟದ ಒಡಲಲ್ಲಿ
ಹುಟ್ಟಿ
ನಿರಂತರ ಹೊಸತಾಗಿ
ಶಕ್ತಿ-ಪ್ರವಾಹವಾಗಿ
ಪ್ರಕೃತಿಯನ್ನು
ಹಸಿರಾಗಿಸುತ್ತ
ಕೋಟಿ ಕೋಟಿ ಜೀವಿಗಳಿಗೆ
ನೆಲೆಯಾಗಿದ್ದೀಯ.
ಊರುಗಳ ಕಟ್ಟಿ
ಬದುಕಿಗೆ
ಮಾನವೀಯತೆ
ತುಂಬುತ್ತೀಯ.
ಸ್ಫೂರ್ತಿಯನ್ನು
ಒಲುಮೆಯಲ್ಲಿ ತೇಲಿಸಿ
ವಿಶ್ವ ಭ್ರಾತೃತ್ವಕ್ಕೆ
ಸಾಕ್ಷಿಯಾಗುತ್ತೀಯ.
ಆದರೆ
ನಾನು
ತಾಯ ಬಸಿರಲ್ಲಿ
ಮೊಳೆತು, ಹುಟ್ಟಿ
ನಿನ್ನ ಸೃಷ್ಟಿಗೆ
ಸಿರಿಗೆ
ಭಂಡಾರಕ್ಕೆ
ಬಕಾಸುರನಾಗಿ
"ಬೆಳೆಯು"ತ್ತಿದ್ದೇನೆ
ಭಾಷೆಗೆ
ಬಣ್ಣಕ್ಕೆ
ಧರ್ಮಕ್ಕೆ
ನಿನ್ನೆಗೆ
ನಾಳೆಗೆ
ಉಸಿರಾಗಿ
"ನಾಗರಿಕತೆ" ಸೃಷ್ಟಿಸುತ್ತಿದ್ದೇನೆ.
ನೋವಿಗೆ
ನಲಿವಿಗೆ
ತುಡಿತಕ್ಕೆ
ಒಲವಿನೊತ್ತಡಕ್ಕೆ
ಕೊರಡಾಗುತಿದ್ದೇನೆ.
ಮತ್ಸರಕ್ಕೆ
ದ್ವೇಷಕ್ಕೆ
ಸೇಡಿಗೆ
ಸೋಲಿನ ಉರುಳಿಗೆ
ಕೊರಳಾಗುತ್ತಿದ್ದೇನೆ.

—ಅ. ಅಜೀಜ್ ಹಸನ್

ವಿಸ್ಮಯಗೊಳಿಸುವ ಹಾವುಗಳು

ಕ್ರೌರ್ಯವೆಯುಂತಹ ಉದ್ದವಾದ ದೇಹ, ಬಾಲದೆಡೆಗೆ ಬಂದಂತೆ ಸಂಪೂರವಾಗುತ್ತಾ ಕೊನೆಯಲ್ಲಿ ಚೂಪಾದ ಬಾಲ, ತಲೆ ದೊಂದು ರೆಪ್ಪೆಗಳಿಲ್ಲದ ಕಣ್ಣು, ಕಿವಿಗಳಿಲ್ಲದಿದ್ದರೂ ಸದ್ದಾದ ತಕ್ಷಣ ಸರಸರನೆ ಹೆವಳಿ ಮಾಯವಾಗಿ ಬಿಡುವ ಈ ಹಾವುಗಳ ಬಗೆಗೆ ನಿಮಗೆ ಆಶ್ಚರ್ಯ ಕುತೂಹಲಗಳೆರಡೂ ಇರಬಹುದಲ್ಲವೆ?

ಈ ಹಾವುಗಳು ಹಲ್ಲಿಗಳಿಂದ ಉದಯಗೊಂಡಿರಬೇಕೆಂದು ವಿಕಾಸ ವಿಜ್ಞಾನಿ ಡಾರ್ವಿನ್‌ರ ತರ್ಕ. ಇದಕ್ಕೆ ಆಧಾರ ಇಂದಿಗೂ ಹೆಬ್ಬಾವುಗಳ ಗುದದ್ವಾರದ ಹತ್ತಿರವಿರುವ ಕಾಲುಗಳ ಅವಶೇಷ.

ಆರ್ಕ್‌ಟಿಕ್, ನ್ಯೂಜಿಲೆಂಡ್, ಐಯರ್‌ಲೆಂಡ್‌ಗಳಲ್ಲಿ ಹಾವುಗಳೇ ಇಲ್ಲ. ಚೀನಾ, ಬರ್ಮಾಗಳಲ್ಲಿ ಹಾವುಗಳೆಂದರೆ ಆಹಾರ ವಸ್ತುಗಳು ಕೆಲವು ಕಡೆಗಳಲ್ಲಿ ಹಾವಿನ ಮಾಂಸದ ತುಂಡುಗಳು ವಿಶೇಷ ಆಕರ್ಷಣೆ. ಅಲ್ಲಿಯ ಹೊಟೇಲ್ ಮಾಲೀಕ ಗಿರಾಕಿಗಳು ಬಂದ ಕೂಡಲೇ ಚೀಲದಿಂದ ಹಾವು ತೆಗೆದು ತಲೆ ಕತ್ತರಿಸಿ ಉಳಿದ ಭಾಗದಿಂದ ಚರ್ಮ ತೆಗೆದು ತುಂಡು ತುಂಡಾಗಿ ಮಾರಾಟಮಾಡುತ್ತಾರೆ. ಜಪಾನಿನಲ್ಲಿ ಕೆಲ ಹಾವುಗಳಿಗೂ ವಿಪರೀತ ಬೇಡಿಕೆ.

ಹಾವುಗಳಲ್ಲಿರುವ ವಿಶೇಷತೆಯೆಂದರೆ ಎರಡು ಕೋಂಡು ಬಾರಿ (ಕೆಲವು ಹಾವುಗಳು ಹಲವು ಬಾರಿ) ಪೊರೆ ಬಿಡುವುದು. ಇದಕ್ಕೆ ಕಾರಣ ಹಾವಿನ ಬೆಳವಣಿಗೆ. ಚಿಕ್ಕ ತಲೆ, ಅಗಲವಾದ ಬಾಯಿ. ದವಡೆಯಿಂದ ಸದಾ ಹೊರಚಾಚಿರುವ ಸೀಳು ನಾಲಿಗೆ-ಹಾವುಗಳಿಗೆ ಪರಿಸರದ ವಾಸನೆಗಳನ್ನು ತಿಳಿದು ಅಲ್ಲಿಯ ಬೇಟೆ ಹುಡುಕಿ ತೆಗೆಯಲು ಬಹು ಸಹಾಯಕ ಹಾವುಗಳಲ್ಲಿ ನಾಲಗೆಯ ಕೆಲಸವೆಂದರೆ ಕುತ್ತಲಿನ ಪರಿಸ್ಥಿತಿಯ ಅರಿವು ಪಡೆಯುವುದು.

ಭಾರತದಲ್ಲಿ ಸುಮಾರು 330 ಜಾತಿ ಹಾವುಗಳಿವೆ ಅವುಗಳಲ್ಲಿ 70 ಜಾತಿ ಹಾವುಗಳು ವಿಷ ಹಾವುಗಳು ಪ್ರತಿವರ್ಷ ಪ್ರಪಂಚದಲ್ಲಿ ಹಾವಿನ ಕಡಿತದಿಂದ ಸಾಯುವವರ ಸಂಖ್ಯೆ 20,000ಕ್ಕೂ ಮಿಕ್ಕಿದೆ. ಜಗತ್ತಿನಾದ್ಯಂತ ಇರುವ ಮೂರು ಸಾವಿರ ಜಾತಿ ಹಾವುಗಳಲ್ಲಿ ಒಂದು ಸಾವಿರ ಜಾತಿ ಹಾವುಗಳು ವಿಷವುಳ್ಳವು.

ಇವೆಲ್ಲ ಗಮನಿಸಿದರೆ ಹಾವುಗಳು ಬಹಳ ಅಪಾಯಕಾರಿ ಎಂದೆನಿಸಬಹುದು. ಆದರೆ ಅವುಗಳಿಂದ ಉಪಕಾರವೂ ಬಹಳಷ್ಟಿದೆ. ಕೇರೆ ಹಾವುಗಳಂತಹ ಕೆಲವು ಹಾವುಗಳು ಇಲಿ ಮೊದಲಾದ ದಂಶಕಗಳನ್ನು ನಾಶ ಮಾಡಿ ರೈತನಿಗೆ ಬಹು ಉಪಕಾರ ಮಾಡುತ್ತವೆ. ಹಾವಿನ ಚರ್ಮ ಆಕರ್ಷಕ ವಸ್ತುಗಳ ತಯಾರಿಕೆಗೆ ಮೂಲವಸ್ತು ಕೂಡಾ. ಬೆಲ್ಟ್, ಹೆಂಡ ಪರ್ಸ್, ಹಾಗೆಯೇ ಬ್ರೆಜಿಲ್‌ನಲ್ಲಿ ಪುಕ್ಕಟೆ ಟ್ರೆಂಡ್‌ಗಳಿಗೆ ಹಾವಿನ ಚರ್ಮ ಉಪಯೋಗವಾಗುತ್ತಿದೆ. ಮಂಡಲ ಹಾವಿನ ಎಣ್ಣೆ ಕೈಕಾಲು ಗಂಟುಗಳ ಊತಕ್ಕೆ ರಾಮಬಾಣವಂತೆ. ಹಾಗೆಯೇ ಹೃದಯ ಸ್ಪಂದನಕ್ಕೂ ಹಾವಿನ ವಿಷ ಯೋಗ್ಯ ಔಷಧವೆನ್ನುವುದು ಲೇಡಿ ಹಾರ್ಡಿಂಜ್ ಕಾಲೇಜಿನ ಸಂಶೋಧನಾ ತಂಡದ ಅಭಿಪ್ರಾಯ.

ಹಾವು ಹಿಡಿಯುವವರು ಹಾವು ಸಂಗ್ರಹಿಸಿದ ಹಾವಿನ ವಿಷವನ್ನು ಗಾಜಿಗೆ ಸುರಿದು ಅದನ್ನು ಪುಡಿರೂಪಕ್ಕೆ ತರುತ್ತಾರೆ. ಈ ಹುಡಿಯನ್ನು ಪುನಹ ಕರಗಿಸಿ ಚುಚ್ಚುಮದ್ದಿನ ರೂಪದಲ್ಲಿ ಕುದುರೆಗೆ ನೀಡಿ, ಕುದುರೆಯ ದೇಹದಲ್ಲಿ Antibodiesಗಳನ್ನು ಉತ್ಪಾದಿಸುತ್ತಾರೆ. ದಿನದಿಂದ ದಿನಕ್ಕೆ ಈ ಚುಚ್ಚುಮದ್ದಿನ ಪ್ರಮಾಣ ಏರಿಸುತ್ತಾ ಬಂದು ಕೊನೆಯಲ್ಲಿ ಕುದುರೆ ಎಂತಹ ಹಾವಿನ ವಿಷವನ್ನೂ ತಡೆದುಕೊಳ್ಳುವ ಸ್ಥಿತಿಗೆ ಬಂದಾಗ, ಈ ಕುದುರೆಯ ರಕ್ತದಿಂದ ಶೀರ ಪಡೆದು ಬಗ್ಗಾದ ಲಸಿಕೆ ತಯಾರಿಸಿ ಮತ್ತದನ್ನು ಪ್ರತಿಯ ರೂಪಕ್ಕೆ ತರುತ್ತಾರೆ ಇದುವೇ ಪ್ರತಿ ವಿಷ. ಈಗ ವಿಷ ಸರ್ಪ ಕಚ್ಚಿದಾತನಿಗೆ ಈ ಹುಡಿಯನ್ನೇ ಚುಚ್ಚುಮದ್ದಿನ ಮೂಲಕ ದೇಹಕ್ಕೆ ಸೇರಿಸುತ್ತಾರೆ. ಈ ಚುಚ್ಚುಮದ್ದು ಆತನ ದೇಹದಲ್ಲಿ Antibodies ಗಳನ್ನು ತಯಾರಿಸಲು ಪ್ರಚೋದಿಸುತ್ತದೆ. ಈಗಂತೂ ಎಲ್ಲಾ ವಿಷ ಸರ್ಪಗಳಿಗೂ ಸಾಮಾನ್ಯವಾದ Poly-valent snakes antivene ತಯಾರಿಸಲಾಗಿದೆ. ಇದರಿಂದ ಎಂತಹ ಹಾವು ಕಚ್ಚಿದರೂ ಅದರಿಂದ ಮನುಷ್ಯನನ್ನು ಬದುಕಿಸಲು ಸಾಧ್ಯವಿದೆ.

ಮೆಕ್ಸಿಕೋದಲ್ಲಿ ರೆಡ್ ಇಂಡಿಯನ್ನರು ರ್‍ಯಾಟಲ್ ಹಾವುಗಳಿಂದ ಕಡಿಸಿಕೊಂಡು ತಮ್ಮ ರಕ್ತವನ್ನು ವಿಷಮಾಯ ಮಾಡಿಕೊಳ್ಳುತ್ತಾರೆ. ಇಲ್ಲಿ ಗಮನಿಸಬೇಕಾದ್ದೆಂದರೆ ವಿಷಸರ್ಪದಿಂದ ಕಡಿಸಿಕೊಳ್ಳುವಾಗ ಇವರು ಮೊದಲಿಗೆ ಅತಿ ಸ್ವಲ್ಪ ಪ್ರಮಾಣದಲ್ಲಿ ಮಾತ್ರವೇ ವಿಷ ದೇಹ ಪ್ರವೇಶಿಸುವಂತೆ ಜಾಗ್ರತೆ ವಹಿಸುತ್ತಾರೆ ಕ್ರಮೇಣ ಈ ಪ್ರಮಾಣ ಹೆಚ್ಚಾಗುತ್ತಾ ಬರುತ್ತದೆ. ರಕ್ತದಲ್ಲಿ Antibodies ತಯಾರಾಗುವುದರಿಂದ ಇವರ ದೇಹದ ಮೇಲೆ ವಿಷದ ಪರಿಣಾಮವೇನೂ ಇರುವುದಿಲ್ಲ.

ಫ್ಲೋರಿಡಾದಲ್ಲಿರುವ ವಿಲಿಯಂ ಹಾಸ್ಟ್ ಎಂಬವರಿಗೆ ವಿಷವೇ ವ್ಯಾಪಾರ. ಆತನ ಹೊಟ್ಟೆಯ ಪಾಡಿನ ದಾರಿ ಇದೇ. ಇಲ್ಲಿಯವರೆಗೆ ಆತನನ್ನು 130 ಬಾರಿ ಹಾವುಗಳು ಕಡಿದಿವೆ. ಜಗತ್ತಿನಲ್ಲೇ ಅತ್ಯಂತ ವಿಷದ ಹಾವು ಆತನಿಗೆ ಕಡಿದಾಗಲೂ ಆತನಿಗೆ ಲವಲೇಶವೂ ಅಪಾಯವಾಗಿಲ್ಲ. ಪ್ರತಿ ತಿಂಗಳೂ ಹಾವಿನ ವಿಷ ವಿರೋಧಕ ಚುಚ್ಚುಮದ್ದು ತೆಗೆದುಕೊಳ್ಳುವ ಈತನ ರಕ್ತ ಇದುವರೆಗೆ ಹಾವು ಕಡಿಸಿಕೊಂಡ 20ಕ್ಕೂ ಹೆಚ್ಚು ಜನರನ್ನು ಬದುಕಿಸಿದೆ.

—ಶ್ರೀ ಹರ್ಷ

ಪುಟಾಣಿ ಚಿತ್ರ ಪುಟಾಣಿ ಪದ್ಯ

ಕಪ್ಪು-ಬಿಳಿ ಬೆಕ್ಕು

ನನ್ನಯ ಬೆಕ್ಕೆ ಮುದ್ದಿನ ಬೆಕ್ಕೆ
ಬಿಳಿ-ಕಪ್ಪು ಬಣ್ಣದ ಬೆಕ್ಕೆ
ಎಲ್ಲಿಗೆ ಹೋಗಿ ಬಂದೆ ಬೆಕ್ಕೆ
ನನ್ನಯ ಕೈಯನೆ ನೋಡುವೆ ಏಕೆ
ಕೈಯಲ್ಲಿದ್ದ ತಿಂಡಿಯು ಬೇಕೆ
ಕೇಳದೆ ಸುಮ್ಮನೆ ನೋಡುವೆ ಏಕೆ
ಅಮ್ಮನು ಕೊಟ್ಟ ತಿಂಡಿಯನ್ನು
ನಿನಗೆ ಬೇಕಾದರೆ ಕೊಡುವೆನು ನಾನು
ತಿಂಡಿಯ ತಿಂದು ಹಾಲನು ಕುಡಿದು
ಒಟ್ಟಿಗೆ ಕೂಡಿ ಆಡುವ ನಾವು.

ರಾಜೇಶ್. ಎ. ಶೆಟ್ಟಿ
ಕಾಂತೂರು.

ಬೆಕ್ಕು

ಬೆಕ್ಕೇ ತುಂಟ ಬೆಕ್ಕೇ
ಇಲ್ಲಿಗೆ ಏತಕೆ ಬಂದಿರುವೆ
ತಿಂಡಿ ಬೇಕೇ? ಹಾಲು ಬೇಕೇ
ಆಡಲು ಚೆಂಡು ಬೇಕೆ

ಪುಟ್ಟಾ ಮುದ್ದಿನ ಪುಟ್ಟಾ
ಆಡಲು ಇಲ್ಲಿಗೆ ಬಂದಿರುವೆ
ಹಾಲೂ ಬೇಕು ಚೆಂಡು ಬೇಕು
ಏನು ಕೊಡುತಿ ಹೇಳು

ಬೆಕ್ಕೇ ತುಂಟ ಬೆಕ್ಕೇ
ಹಾಲೂ ಕೊಡುವೆ
ಚೆಂಡು ಕೊಡುವೆ
ಆಟ ಆಡು

ರೋಶನ್ ಫೆರ್ನಾಂಡಿಸ್
4ನೇ ತರಗತಿ ವೇಣೂರು

ಮಕ್ಕಳ ತೋಟ

ಕಂದನ ಮಮತೆ

ಓ, ಪುಟ್ಟ ಮುದ್ದಿನ ಮಗುವೇ
ಕರದಲಿ ಏನು ಹಿಡಿದಿರುವೆ?
ಬೆಕ್ಕನು ಬಳಿಗೆ ಕರೆಯುತ ನೀನು
ಬಾಯಿಗೆ ಏನು ಕೊಡುತಿರುವೆ? ॥
ನಿನ್ನಯ ಹೃದಯದ ಬೆಕ್ಕಿನ ಹೆದರಿಕೆ
ಹೋಗಲು ಕರೆದೆಯಾ ಬಲು ಹತ್ತಿರಕೆ
ಕರಿಯ ಚುಕ್ಕೆಯ ಬಿಳಿಯ ಬೆಕ್ಕನ್ನು
ನೋಡುತಿದೆ ನಿನ್ನ ಕಣ್ಣನ್ನೂ ॥
ಅರಿಯೆಯ ನೀನು ತೊಟ್ಟ ಬಟ್ಟೆಯ
ಬಣ್ಣವೂ ಕರಿಯದೆಂದು
ಮೋರೆಯ ತುಂಬಾ ಕಪ್ಪು ಚುಕ್ಕೆಯ ತೊಟ್ಟು,
ಅರಿಸಿರುವೆಯಾ ಹಾಗೆ ಕಪ್ಪು ಚುಕ್ಕೆಯ ಬೆಕ್ಕು ॥
ನಿನ್ನಯ ಆಟವು ಬೆಕ್ಕಿಗೆ ಸವಿದೂಟವು
ದೊರೆತಿಹುದು ಕಂದನೇ ನಿನ್ನ ಮಮತೆಯಿಂದಾ ॥

ಎಂ. ಪಿ. ಕೌಸರ್, ಬಂಟ್ವಾಳ
ಕೆಳಗಿನ ಪೇಟೆ

ಇದು ನಿಮಗೆ ಗೊತ್ತೆ?

1) ಅತಿಶಯ ಅಂತಂದ ಪಟ್ಟಣ?
2) ಸಾವಿರ ಸರೋವರಗಳ ಭೂಮಿ?
3) ಭಾರತದ ಹೆಬ್ಬಾಗಿಲು?
4) ಬಿಳಿಯಾನೆಗಳ ಭೂಮಿ?
5) ಲವಂಗ ನಡುಗುಡ್ಡೆ?
6) ನೈದಿಲೆಗಳ ನಾಡು?
7) ಕೃತ್ರಿಮ ಸರೋವರ?
8) ಜಗತ್ತಿನ ಛಾವಣಿ?
9) ಜಗತ್ತಿನ ಸಕ್ಕರೆಯ ಉಗಮ?
10) ಪೆಂಗ್ವಿನ್‌ಗಳ ನಾಡು?

ಉತ್ತರ

(printed upside down)
1) [illegible] 2) [illegible]
3) [illegible] 4) [illegible]
5) [illegible] 6) [illegible]
7) [illegible] 8) [illegible]
9) ಕ್ಯೂಬಾ 10) ಅಂಟಾರ್ಕ್‌ಟಿಕಾ

ಮುದ್ದು ಮಕ್ಕಳೇ
ಈ ಮೇಲಿನ ಚಿತ್ರ ನೋಡಿ ನೀವೂ ಯಾಕೆ ಪದ್ಯ ಬರೀ ಬಾರದು? ನಮಗೆ ತಲುಪುವ ಕೊನೆಯ ದಿನಾಂಕ 1-2-87.

ಬದುಕಿನ ಆದರ್ಶಕ್ಕೆ ಈ ನುಡಿ ಮುತ್ತುಗಳು

1. ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು.
2. ಇಲಿಯಾಗಿ ನೂರು ವರ್ಷ ಬಾಳುವುದಕ್ಕಿಂತ ಹುಲಿಯಾಗಿ ಮೂರು ವರ್ಷ ಬಾಳುವುದೇ ಲೇಸು.
4. ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ.
5. ಈಜು ಮರೀಬೇಡ, ಜೂಜು ಕಲಿಬೇಡ.
6. ಅರಮನೆ ಇದ್ದರೂ ನೆರೆಮನೆಬೇಕು.
7. ಅಜ್ಞಾನಕ್ಕಿಂತ ಅಲ್ಪ ಜ್ಞಾನವೆ ಭೀಕರ.
8. ಆಪತ್ಕಾಲಕ್ಕೆ ಆದವನೇ ಬಂಧು.

- ರವೀಂದ್ರ ಕುಂದರ್.

ಹೊಸ ಹೊತ್ತಗೆ

ಪರಾಗ ಸ್ಪರ್ಶ
1. (ಕವನ ಸಂಕಲನ)
ಲೇ - ಎಸ್. ಪದ್ಮನಾಭ ನಾಯಕ್
ಪುಟ – 57
ಬೆಲೆ – 20 ರೂಪಾಯಿ
ಪ್ರ – ಸಗರಿ ಪ್ರಕಾಶನ
ಚಿತ್ರಾಪುರ, ಕುಳಾಯಿ
ಬೈಕಂಪಾಡಿ, ಮಂಗಳೂರು.

2. ದಣಪೆಯಲ್ಲಿ
(ಕವನ ಸಂಕಲನ)
ಲೇ – ಸುಂದರ ನಾಡಕರ್ಣಿ
ಪುಟ – 54
ಬೆಲೆ – 10 ರೂಪಾಯಿ
ಪ್ರ – ವಿಜಯಭಾರತಿ ಪ್ರಕಾಶನ
ಗೋಕರ್ಣ ಉತ್ತರ ಕನ್ನಡ 581326

ಸ್ವಾತಂತ್ರ್ಯ ಹೋರಾಟದ ವೈಜ್ಞಾನಿಕ ನಿರೂಪಣೆ

ಭಾರತದ ರಾಷ್ಟ್ರೀಯ ಚಳವಳಿ: ಅಯೋಧ್ಯ ಸಿಂಗ್ (ಅನು: ಬಿ. ವಿಷ್ಣು ಮೂರ್ತಿ) ಭಾರತಿ ಪ್ರಕಾಶನ, ಮೈಸೂರು. 1985

ನಮ್ಮ ಸ್ವಾತಂತ್ರ್ಯ ಹೋರಾಟ ಒಬ್ಬ ವ್ಯಕ್ತಿಯಿಂದಾಗಿ, ಒಂದು ವರ್ಗದಿಂದಾಗಿ ಅಥವಾ ಒಂದು ಸಂಸ್ಥೆಯಿಂದಾಗಿ ಸಾಗಿದ್ದು ಎಂಬ ಕಲ್ಪನೆ ನಮ್ಮ ಜನರಲ್ಲಿದೆ. ಈ ಕಲ್ಪನೆಗೆ ಸಾಕಷ್ಟು ನೀರೆರೆದು ಪೋಷಿಸಲಾಗುತ್ತಿದೆ. ಆದರೆ, ಯಾವುದೇ ವಿಮೋಚನಾ ಹೋರಾಟ ಎಲ್ಲ ವರ್ಗಗಳ, ಮುಖ್ಯವಾಗಿ ಸಮಾಜದ ದುಡಿಯುವ ವರ್ಗದ ಪಾಲುಗೊಳ್ಳುವಿಕೆ ಮತ್ತು ನೇತೃತ್ವದಿಂದಷ್ಟೇ ಯಶಸ್ವಿಯಾಗ ಬಲ್ಲದು. ಹಾಗಾದಾಗ ಮಾತ್ರ ನಿಶ್ಚಿತ ಬದಲಾವಣೆಯನ್ನು ಉಂಟುಮಾಡಬಲ್ಲದು. ಇದು ಚಾರಿತ್ರಿಕ ಅನಿವಾರ್ಯ. ಎರಡನೆಯದಾಗಿ, ಹೋರಾಟ ಎಂಬುದು ಕ್ರಿಯೆ ಮತ್ತು ಸಿದ್ಧಾಂತಗಳ ಅಂತರ್‌ಕ್ರಿಯೆಯಿಂದ, ದ್ವಂದ್ವಾತ್ಮಕ ಸಂಬಂಧದಿಂದ ರೂಪುಗೊಳ್ಳಬೇಕಾದುದು. ಈ ಪ್ರಕ್ರಿಯೆಯಲ್ಲಿ ನಿರ್ದಿಷ್ಟ ವ್ಯಕ್ತಿ ಮುಖ್ಯನಾಗುವುದಿಲ್ಲ. ಈ ದಿಸೆಯಿಂದ ನೋಡಿದಾಗ ಭಾರತೀಯ ಸ್ವಾತಂತ್ರ್ಯ ಹೋರಾಟವೆಂದರೆ ಗಾಂಧಿ ಎಂದೋ, ಕಾಂಗ್ರೆಸ್ ಎಂದೋ, ಸಮೀಕರಿಸಿ ಮಾತನಾಡುವುದು ಹೋರಾಟದ ನೈಜಸ್ವರೂಪವನ್ನು ತಿಳಿಯದ ಮೂಢರ ಮಾತಾಗುತ್ತದೆ.

'ಭಾರತದ ರಾಷ್ಟ್ರೀಯ ಚಳವಳಿ' ಎಂಬ ಅಯೋಧ್ಯಸಿಂಗರ ಪುಸ್ತಕ (ಅನು: ಬಿ. ವಿಷ್ಣುಮೂರ್ತಿ) ಹೋರಾಟ ಕುರಿತ ಭೂತಾರ್ಥ ದೃಷ್ಟಿಕೋನವನ್ನು ತಳೆಳಗಾಗಿಸುಲ್ಲ ಪ್ರಾಥಮಿಕ ಸಾಕ್ಷ್ಯಗಳಿಂದ ಕೂಡಿದೆ. ಪ್ರತಿಯೊಂದು ವರ್ಗವೂ ತನ್ನದೇ ಆದ ಸ್ವಪ್ನ ದೃಷ್ಟಿಕೋನದಿಂದ ರಾಷ್ಟ್ರೀಯ ಚಳವಳಿಯಲ್ಲಿ ವಹಿಸಿದ ಪಾತ್ರವನ್ನು ಅದರ ಇತಿಮಿತಿಗಳನ್ನು ಅಧಿಕಾರಯುತವಾಗಿ ಚಿತ್ರಿಸಿದೆ.

ಅಖಿಲ ಭಾರತ ಕಾಂಗ್ರೆಸ್‌ನ ಹುಟ್ಟಿನಲ್ಲಿ ಆ ಸಂಸ್ಥೆ ಮುಂದೆ ಸ್ವಾತಂತ್ರ್ಯ ಹೋರಾಟದ ಗತಿಯನ್ನು ಮತ್ತು ಸ್ವರೂಪವನ್ನು ನಿಯಂತ್ರಿಸುವಂತಾದ ವೈಪರೀತ್ಯದ ಬಗ್ಗೆ ಗಮನ ಸೆಳೆಯುವ ಲೇಖಕರು, ಇಂದಿಗೂ ಈ ದೇಶ ಎಟುಕಿಸಿಕೊಳ್ಳಲಾಗದಿರುವ ರಾಷ್ಟ್ರೀಯ ಏಕತೆ ಮತ್ತು ವೈಜ್ಞಾನಿಕ ತಳಹದಿಯ ರಾಷ್ಟ್ರೀಯವಾದದ ಆದರ್ಶಗಳಿಗೆ, ಕಾಂಗ್ರೆಸ್ಸಿನ ಶ್ರೀಮಂತ ಬಂಡವಾಳಶಾಹಿ ವರ್ಗ, ಧರ್ಮವನ್ನು ರಾಜಕೀಯದೊಂದಿಗೆ ಬೆರೆಸಿದುದೇ ಕಾರಣ ಎಂಬುದನ್ನು ಸರಿಯಾಗಿ ಗುರುತಿಸುತ್ತಾರೆ. (ಪು. 7-8). ಸ್ವಾತಂತ್ರ್ಯ ಹೋರಾಟವನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿ ಹೇಗೆ ತನ್ನ ಕುತಂತ್ರಗಳಿಂದ ವಿರೂಪಗೊಳಿಸಲು ಯತ್ನಿಸಿತು ಎಂಬುದನ್ನು ಹೇಗೆ ದಾಖಲಿಸುತ್ತಾರೆ.

'ಇದೇ ಸಾಮ್ರಾಜ್ಯಶಾಹಿಗಳು ಭಾರತದ ಮಧ್ಯಮವರ್ಗದ ವಿದ್ಯಾವಂತ ಯುವಕರನ್ನು ರೈತಾಪಿ ಜನತೆಯಿಂದ ಪ್ರತ್ಯೇಕಿಸುವ ಮೂಲಕ ದೇಶದಲ್ಲಿ ಸ್ಫೋಟಕ ಪರಿಸ್ಥಿತಿಯನ್ನು ಹದಗೊಳಿಸಲು ಕಾಂಗ್ರೆಸನ್ನು ಸ್ಥಾಪಿಸಲು ನೆರವಾಗಿದ್ದರು. ಈಗ ಅವರೇ ಮುಸ್ಲಿಂ ಲೀಗ್‌ನ ಜನನದ ಯೋಜನೆಯನ್ನು ತಯಾರಿಸಿ ಮುಸ್ಲಿಂರನ್ನು ಹಿಂದುಗಳ ವಿರುದ್ಧ ಎತ್ತಿಕಟ್ಟುವ ಮೂಲಕ ದೇಶದಲ್ಲಿ ಕ್ರಾಂತಿಕಾರೀ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳನ್ನು ನಿರ್ವೀರ್ಯಗೊಳಿಸಲು ಮುಂದಾದರು. ಲೀಗ್ ಸ್ಥಾಪನೆಯಾದ ಕೂಡಲೇ ಅದು ಬಂಗಾಳದ ವಿಭಜನೆಯನ್ನು ಬೆಂಬಲಿಸಿತಲ್ಲದೆ, ವಿದೇಶೀ ವಸ್ತುಗಳ ಬಹಿಷ್ಕಾರದ ಚಳವಳಿಯನ್ನು ವಿರೋಧಿಸಿತು' (ಪು. 19)

ರಷ್ಯಾದ ಅಕ್ಟೋಬರ್ ಕ್ರಾಂತಿಯ ಪರಿಣಾಮವಾಗಿ ಭಾರತದಲ್ಲೂ ಕಮ್ಯುನಿಸ್ಟ್ ಸಿದ್ಧಾಂತ ಬಲಗೊಂಡದ್ದು, ಅದು ಕಾಂಗ್ರೆಸ್ ಮತ್ತು ಸ್ವಾತಂತ್ರ್ಯ ಹೋರಾಟದ ಮೇಲೆ ಬೀರಿದ ಪ್ರಭಾವ, ಜನತೆ ಕ್ರಾಂತಿಕಾರಿ ಚಟುವಟಿಕೆಗಳಿಗೆ ಆಲವಟ್ಟಿಕೊಳ್ಳುವ ಸೂಚನೆಯಿದ್ದಾಗ ಗಾಂಧೀಜಿ ಅದಕ್ಕೆ ಬಿರಿ (ಬ್ರೇಕ್) ಹಾಕುವಲ್ಲಿ ತನ್ನ ವರ್ಗ ಹಿನ್ನೆಲೆಯನ್ನು ಸಾದರಪಡಿಸಿದ ರೀತಿ–ಇವೇ ಮುಂತಾದ ಸಂಗತಿಗಳ ವಿವರವಾದ ಚಿತ್ರಗಳಿಲ್ಲಿ ದೊರಕುತ್ತದೆ. ಕಾಂಗ್ರೆಸ್ ನೇತೃತ್ವದಿಂದಾಗಿ ದೇಶದ ಪ್ರಜಾಸತ್ತಾತ್ಮಕ ಕ್ರಾಂತಿ ಅಸಂಪೂರ್ಣವಾಗಿ ಉಳಿದಿರುವುದನ್ನು ಗ್ರಹಿಸಿರುವ ಲೇಖಕರು, ಈ ಕ್ರಾಂತಿಯ ಮುಂದಿರುವ ಕರ್ತವ್ಯಗಳನ್ನು ಸಮರ್ಪಕವಾಗಿ ಗುರುತಿಸಿದ್ದಾರೆ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಎಲ್ಲ ಇತಿಮಿತಿಗಳನ್ನು ಪೂರ್ವಾಗ್ರಹ ದೂರವಾಗಿ, ಕರಾರುವಾಕ್ಕಾಗಿ ತಿಳಿದು, ನಮ್ಮ ಮುಂದಿನ ಹೋರಾಟದ ಗತಿಯನ್ನು ನಿರ್ದಿಷ್ಟಪಡಿಸಿಕೊಳ್ಳಲು ಈ ಕೃತಿ ಒಳ್ಳೆಯ ಮಾರ್ಗದರ್ಶನ ನೀಡುತ್ತದೆ. ಸ್ವಾತಂತ್ರ್ಯ ಹೋರಾಟದ ತಲಸ್ಪರ್ಶಿಯಾದ ಮತ್ತು ಸಮಗ್ರವಾದ ದಾಖಲೆ ಇದಲ್ಲವಾದರೂ, ನಮ್ಮ ಪಠ್ಯಪುಸ್ತಕಗಳು ಅವೈಜ್ಞಾನಿಕ ಪಠ್ಯ ಪುಸ್ತಕಗಳನ್ನು ಸ್ಥಾನಪಲ್ಲಟಿಸಿ, ನಮ್ಮ ತಿಳುವಳಿಕೆಯನ್ನು ಐತಿಹಾಸಿಕ ವಾಸ್ತವಗಳಿಗೆ ಸಂವಾದಿಯನ್ನಾಗಿಸುವಲ್ಲಿ ಇದು ಸಹಕರಿಸುತ್ತದೆ ಎನ್ನುವಲ್ಲಿ ಯಾವ ಸಂಶಯವೂ ಇಲ್ಲ. ತಿಳಿಯಾದ, ಕೊಂಕಿಲ್ಲದ ಭಾಷೆ, ವಿಚಾರದ ಸರಿಯಾದ ಅಭಿವ್ಯಕ್ತಿಗೆ ಪೂರಕವಾಗಿರುವಂತೆ ಅನುವಾದಕರು ಎಚ್ಚರ ವಹಿಸಿದ್ದಾರೆ.

—ಆರ್ಕೆ

ಲೇಖನ ಚೆನ್ನಾಗಿತ್ತು

ಪ್ರಿಯ ಸಂಪಾದಕರೆ.....
ತಾ. 18-1-86 ರಂದು ಸಿನಿಮಾ ಪುಟದಲ್ಲಿ ಪ್ರಕಟವಾದ "ಗಂಭೀರ ಅಭಿನಯದ ಸುಂದರ ನಟ" ಅನಂತ್‌ನಾಗ್ ಅವರ ಲೇಖನ ತುಂಬಾ ಚೆನ್ನಾಗಿತ್ತು. ಇದನ್ನು ಪ್ರಕಟಿಸಿದ್ದಕ್ಕೆ ಮುಂಗಾರುವಿಗೆ, ಬರೆದ "ಶಂಗ"ರಿಗೆ ನನ್ನ ವಂದನೆಗಳು.

– ಮಂಜುನಾಥ ಬಿಲ್ಲವ,
ಗುರುಗೊಳ್ಳಿ.

ಪ್ರಿಯರೆ,
ಒಬ್ಬ ವಂಚಕ ಸ್ವಾರ್ಥಿ ಗಂಡಿಗೋಸ್ಕರ ತನ್ನ ಸರ್ವಸ್ವವನ್ನು ಕಳೆದು ಮೂರ್ಖಳಾದ ಒಬ್ಬ ಹೆಣ್ಣಿನ ಕಥೆ. (ಪ್ರಿಯನೊಂದಿಗೆ) ಅರುಣರವರ ಹಾಂಟ-ಕುತೂಹಲಕಾರಿ ಲೇಖನ.
ನಗೆಬರಹವನ್ನು ಓದಿ ಬಿದ್ದು ಬಿದ್ದು ನಕ್ಕೆನು.

– ಕದಿರ್ ಖಾನ್
ವಿಟ್ಲ.

ಮುದ ನೀಡುವ ಚಿತ್ರ

ಪ್ರಿಯ ಸಂಪಾದಕರೆ,
'ಮಕ್ಕಳ ತೋಟ' ವಿಭಾಗದಲ್ಲಿ ತಾವು ಆಯ್ಕೆ ಮಾಡುವ ಮಕ್ಕಳ ಚಿತ್ರ ತುಂಬಾ ಚೆನ್ನಾಗಿದ್ದು, ನಮ್ಮ ಮನಸ್ಸಿಗೆ ಮುದ ನೀಡುವಲ್ಲಿ ಯಶಸ್ವಿಯಾಗಿದೆ.
ನನ್ನ ಮಗಳಂತೂ ಒಂದೇ ಒಂದು ವಾರವೂ 'ವಾರದ ಮುಂಗಾರು' ನೋಡದಿದ್ದಲ್ಲಿ ಊಟ - ತಿಂಡಿ ಮುಟ್ಟಿದೆ ಬಿಟ್ಟು ಬಿಡುತ್ತಾಳೆ.

ಮಾದರಿ

ಮಕ್ಕಳ ಲೋಕಕ್ಕೇ ಒಂದು ಹುರುಪು, ಚೈತನ್ಯ ಕೊಡುತ್ತಿರುವ ನಿಮಗೆ ಕೃತಜ್ಞತೆಗಳು.

- ಸುಧೀರ್
ಕಾರವಾರ.

ಹೃದಯ ಕಲಕಿದ ಕಪ್ಪು ಜನ

ಪ್ರಿಯ ಸಂಪಾದಕರೆ,
ತಾ- 18-1-87ರ 'ವಾರದ ಮುಂಗಾರು'ವಿನಲ್ಲಿ ಪ್ರಕಟವಾದ 'ಉಪ್ಪಾಗುತ್ತಿರುವ ಕಪ್ಪು ಜನ ಆಗೇರರು' ಮುಖ ಪುಟ ಲೇಖನ ಚೆನ್ನಾಗಿತ್ತು.
ಜಡ್ಡು ಗಟ್ಟಿದ ನಮ್ಮ ಸಾಮಾಜ ಪರಿಸ್ಥಿತಿಯ, ಜಾತೀಯತೆಯ, ಕರಾಳ ಮುಖವನ್ನು ಸಮಗ್ರವಾಗಿ ಪರಿಚಯಿಸಿದ ಲೇಖಕ ಗುಂಡಿಯವರಿಗೆ ನಾವೆಲ್ಲಾ ಅಭಿನಂದಿಸಬೇಕು. ಜನ ಸಮುದಾಯಕ್ಕೆ 'ರುಚಿ'ಯವೂ ಇಲ್ಲವಾದ ಈ ಜನಾಂಗದ ಬಾಳ್ವೆ ಎಂತಹ ಕರಾಳ. ಇದಕ್ಕೆ ಕೊನೆ ಇಲ್ಲವೇ? ಇಂತಹ ಲೇಖನ ಇನ್ನೂ ಬರಲಿ ಎಂಬುದೇ ನಮ್ಮ ಆಶಯ

- ಸೀಮಾ
ಕುಮಟಾ.

ಪುಸ್ತಕ ವಿಮರ್ಶೆ

ಸೀಮಿತ ಅನುಭವದ ನೋವಿನ ಕತೆಗಳು

"ಸ್ವೀಕಾರ" ಲೇ:- ಭಾಗೀರಥಿ ಹೆಗಡೆ,
ಪುಟ 124 ಬೆಲೆ ರೂ. 10/-
ಪ್ರಕಾಶನ: ರಾಘವೇಂದ್ರ ಪ್ರಕಾಶನ
ಅಂಬರಕೊಡ್ಲ ಅಂಕೋಲಾ ಉ.ಕ.

'ಸ್ವೀಕಾರ' ಭಾಗಿರಥಿ ಹೆಗಡೆಯವರ ಮೊದಲ ಕಥಾ ಸಂಕಲನ. ಸಂಕಲನ ಮೊದಲನೆಯದಾದರೂ ಕತೆ ಹೇಳುವ ರೀತಿ ಲವಲವಿಕೆಯಿಂದ ಕೂಡಿರುವುದರಿಂದ ಓದಿಸಿಕೊಂಡು ಹೋಗುವ ಗುಣ ಹೊಂದಿದೆ.

ಸಂಗ್ರಹದಲ್ಲಿರುವ ಏಳು ಕತೆಗಳೂ ಆಕರ್ಷಕವಾದ ಆರಂಭದಿಂದ ಚುರುಕಾದ ವಿವರಣೆಯಿಂದ ಆಶಾದಾಯಕವಾದ ಮುಕ್ತಾಯದಿಂದ ಚೇತೋಹಾರಿಯಾಗಿವೆ.

ಈ ಏಳು ಕತೆಗಳೂ ನೋವಿನ ಕತೆಗಳು. ಮಧ್ಯಮ ವರ್ಗದ ಕುಟುಂಬಗಳಲ್ಲಿ ಬಂದೊದಗುವ ಆರ್ಥಿಕ, ಧಾರ್ಮಿಕ–ಸಂಕಟಗಳು ನೋವಾಗಿ ಅರಳಿವೆ. ಇವುಗಳಲ್ಲಿ ಎರಡು ಪುರುಷನಿಗೆ ಸಂಬಂಧಿಸಿದ್ದಾದರೆ ಉಳಿದೈದು ಹೆಣ್ಣಿನ ವಿವಿಧ ನೋವಿನ ಕತೆಗಳಾಗಿವೆ.

ಮೊದಲಿನ ಕತೆ "ಸ್ವೀಕಾರ" ಒಂದು ರೀತಿಯಿಂದ ಬಂದಿದ್ದನ್ನು ಸ್ವೀಕರಿಸಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತದೆ. ಕಥಾನಾಯಕ ವೆಂಕಯ್ಯ ಅವಿವಾಹಿತ. ತಾರುಣ್ಯದಲ್ಲಿ ಅವನ ಗಮೇಂಡಿ ಹೇಳತೀರದು. ಒಂದು ಮದುವೆ ಮಾಡಿಕೊ ಎಂದರೆ ಅದನ್ನು ನಿರಾಕರಿಸಿದ. ಆದರೆ ಈ ಮುದಿ ವಯಸ್ಸಿನಲ್ಲಿ ರೋಗಿಯಾಗಿ ಅಸಹಾಯಕನಾಗಿರುವಾಗ ಒಂಟಿತನ ಹಾಗೂ ಅಸಹಾಯಕತೆ ಅವನನ್ನು ಕಾಡುತ್ತದೆ. ಆದರೆ ಈಗ ಅದು 'ಸ್ವೀಕಾರ'ವೆ.

ವೆಂಕಯ್ಯ ಬರಿ ಜೋಳಿಯಲ್ಲಿ ದರ್ಶದ, ದೇವರ ಕುರಿತಾದ ಅವನ ಪ್ರತಿಭಟನಾ ಭಾವನೆಯನ್ನು ಕತೆ ನಿರೂಪಿಸುತ್ತದೆ. ಮದುವೆ ಎಂಬ ಸಂಸ್ಕಾರ ಎರಡು ಜೀವಿಗಳನ್ನು ಅಜನ್ಮ ಬಂಧುವಾಗಿ ಕಾಪಾಡುತ್ತದೆ, ಎಂಬುದರಲ್ಲಿ ವೆಂಕಯ್ಯನಿಗೆ ಭರವಸೆಯಿಲ್ಲ. ಎಂತಲೇ ಆತ ಸಾವಿತ್ರಿಯೊಡನೆ ಹೆಂಡತಿಯ ಹಾಗೆ ಬದುಕುತ್ತಾನೆ. ಆದರೆ ಆಕೆ ಕೈಕೊಟ್ಟು ಬಿಡುತ್ತಾಳೆ. ಯಾವುದೊ ನಾಟಕದವನ ಸಂಗಡ ಓಡಿಹೋಗಿ ಬಿಡುತ್ತಾಳೆ. ಆದರೂ ಅವಳ ನಡತೆಯ ಬಗ್ಗೆ ಆತ ವಿಮರ್ಶಿಸುವುದಿಲ್ಲ. ಇದು ಆತನ ಹಬ್ಬಳ ಆತನ ಮಾತುಗಳು ಮದುವೆಯ ಕುರಿತು ಶಿವರಾಮ ಕಾರಂತರ ಮಾತುಗಳಂತೆ ಕೇಳುತ್ತವೆ. ಆದರೆ ಅದನ್ನು ನಿರ್ವಹಿಸುವ ತಾಕತ್ತು ಇಲ್ಲಿಯ ಪಾತ್ರಕ್ಕೆ ಇಲ್ಲ. ಒಟ್ಟಾರೆಯಾಗಿ ಲೇಖಕಿಯರ ತಾತ್ವಿಕ-ಹಿನ್ನೆಲೆ ಮುಸುಕಾಗಿ ಪಾತ್ರದ ಆರಾಜಕತೆಯೇ ವಿಜೃಂಭಿಸಿ ಬಿಡುತ್ತದೆ.

ಅದರಂತೆ ಗಂಡಸಿನ ಪ್ರಾಧಾನ್ಯತೆಗೆ ಸಂಬಂಧಿಸಿದ ಕತೆ 'ದೇವರ ಮಕ್ಕಳು' ಕೂಡ ತಾತ್ವಿಕ–ಗಟ್ಟಿತನವಿಲ್ಲದೆ ಸೋಲುತ್ತದೆ. ಒಂದು ಮಾಧ್ಯಮ ವರ್ಗದ ಮಲೆನಾಡಿನ ಅಡಿಕೆ ತೋಟದ ಕುಟುಂಬದ ಅಡಚಣೆಯನ್ನು ಬಿಚ್ಚಿಟ್ಟಿದೆ. ಪೇಟೆಯ ವ್ಯಾಪಾರಿಗಳು ಹೇಗೆ ರೈತರನ್ನು ಸುಲಿಯುತ್ತಾರೆಂಬ ಬಗ್ಗೆ ಕಿಚ್ಚಿನ ಪ್ರತಿಭಟನೆಯಿದೆ. ಅದನ್ನು ನಿರ್ವಹಿಸುವ ರೀತಿಯೂ ಆಕರ್ಷಕವೆ. ಆದರೆ ಯಾವ ತಾತ್ವಿಕ-ನಿಲುವನ್ನು ವ್ಯಾಪಾರಿಗಳಿಗಾಗಿ ಶ್ರೀಕಾಂತ ತಳೆಯುತ್ತಾನೊ ಅದೇ ತಾತ್ವಿಕತೆ ತನ್ನ ತೋಟದಲ್ಲಿ ಗೆಯ್ಯುವ ಕೂಲಿಗಳಿಗೂ ಲಾಗೂ ಆಗುತ್ತದೆಂಬುದನ್ನು ಮರೆಯುತ್ತಾನೆ.

ಉಳಿದ ಕತೆಗಳು ಹೆಣ್ಣಿನ ನೋವಿನ ಕತೆಗಳು ಈ ಕತೆಗಳಲ್ಲಿ ಮನಮಿಡಿಯುವ ನಿರೂಪಣೆಗಳಿವೆ. ಪುರುಷ ಯಜಮಾನ್ಯ ಧರ್ಮ, ರೀತಿ ರಿವಾಜು, ಗಾದೆಮಾತುಗಳಲ್ಲಿ ಹೇಗೆ ಪಡಿಮೂಡಿ ಕ್ರೂರವಾಗಿ ಹೆಣ್ಣಿನ ಶೋಷಣೆಗೆ ಕಾರಣವಾಗುತ್ತದೆಂಬುದನ್ನು ಎತ್ತಿ ತೋರಿಸಲಾಗಿದೆ. ಅದು ಸಹಜವಾಗಿಯೇ ಮೂಡಿಬಂದಿದೆ ಕೂಡ.

ಇವುಗಳಲ್ಲಿ "ಕತೆಗೊಂದು ವೃಕ್ಷ" ಒಂದು ಆಕರ್ಷಕವಾದ ನಮೂನೆಯಲ್ಲಿ ಹಾಗೂ ಅಷ್ಟೇ ಅಚ್ಚುಕಟ್ಟಾಗಿ ಮೂಡಿಬಂದಿದೆ. ತಂದೆ ತಾಯಿಗಳ, ಕೊಲೆಗೆ ಪ್ರೇಮಿಯ ಪ್ರೀತಿಯಿಂದ ವಂಚಿತಳಾಗಿ ಹುಚ್ಚಿಯಾಗುವ ವಿನ್ನಿ ಒಂದು ಕರುಣಾಜನಕವಾಗುತ್ತಾಳೆ. ವಿನ್ನಿಯನ್ನು ಹಂತ ಹಂತವಾಗಿ ಹಿಂಸಿಸುವ ಸಂಗತಿಗಳು ಹೆಚ್ಚಾಗಿ ವೈಯಕ್ತಿಕವಾಗಿ ಇರುತ್ತದೆ. ಅದಕ್ಕೆ ಸಾಮಾಜಿಕವಾದ ಅಷ್ಟು ಒತ್ತುಬಿದ್ದಿಲ್ಲ. ಆದರೂ ಕತೆ ತನ್ನಷ್ಟಕ್ಕೆ ಸತ್ವಯುತವಾಗಿದೆ.

"ವ್ಯಾಪ್ತಿಯ" ಸುಮಿ, 'ಆಯಕ್ಕೆ ಸೆರಳಾಗಿ'ಯ ಕಾವೇರಿ, 'ಮನೆ'ಯ ಜಾಹ್ನವಿ ಇವರೆಲ್ಲ ಬಾಲ್ಯದಲ್ಲಿ ಅಬಲೆಯರಲ್ಲ. ಗಂಡಿನ ಹಾಗೆ ಆಶೆ–ಆಕಾಂಕ್ಷೆಯನ್ನು ತುಂಬಿಕೊಂಡವರು. ಆದರೆ ಆಗಿನಿಂದಲೇ ಅವರ ಪ್ರತಿಭೆ, ಶಕ್ತಿಗಳನ್ನು ಸಾಮಾಜಿಕ–ಸನ್ನಿವೇಶ ಮತ್ತು ಸಾಮಾಜಿಕರ ಮನೋಭಾವ ಕುಬ್ಜಗೊಳಿಸುತ್ತಾ, ಕೊಲ್ಲುತ್ತಾ ಬರುತ್ತವೆಂಬುದನ್ನು, ಗಂಡಸಿನ ಯಜಮಾನಿಕೆಯು ಗಮೇಂಡಿ ಹೇಗೆ ಹೆಣ್ಣಿನ ವೈವಾಹಿಕ, ಸಂಸಾರಿ ಬದುಕನ್ನು ಕಣ್ಣೀರಿನಲ್ಲಿ ಅದ್ದುತ್ತವೆಂಬುದನ್ನು ಮಾನವೀಯವಾಗಿ ಕೆಲವು ಸಲ ರಭಸದಿಂದ ಲೇಖಕಿಯರು ಚಿತ್ರಿಸುತ್ತಾರೆ. ಆದರೂ ಈ ಹೆಣ್ಣುಗಳು ಪಲಾಯನವಾದಿಗಳಲ್ಲ. ಸೋತು ಸುಣ್ಣಾದರೂ ಕೈಚೆಲ್ಲಿ ಕುಳಿತವರಲ್ಲ. ಹೋರಾಟ, ಬದುಕಿನ ಭವಿಷ್ಯದ ಬಗ್ಗೆ ಆಶಾವಾದ ಇವರ ನಾಡಿ ಮಿಡಿತವಾಗಿದೆ. ಎಂತಹ ಸ್ಥಿತಿಯಲ್ಲಿಯೂ ಕೊನೆಗೆ ಇವರ ಹೋರಾಟವನ್ನು 'ಸ್ವೀಕರಿ'ಸುತ್ತಾರೆ. ಈ ಪಾತ್ರಗಳ ಇಂಥ ಗುಣಗಳು ಅವರ ವ್ಯಕ್ತಿತ್ವದ ಗಂಟಿವೇ ಇದೆ ಎಂಬುದನ್ನು ಚಿತ್ರಿಸುವುದರಿಂದ ಸಹಜತೆ ಪ್ರಾಪ್ತವಾಗಿದೆ. ಈ ಆಶಾದಾಯಕ ಗುಣಗಳು ಕತೆಗಳನ್ನು ರಕ್ಷಿಸುತ್ತವೆ. ಹಾಗೆಯೇ ಲೇಖಕಿಯರು ಮಹಿಳೆಯರ ಈ ನೋವಿಗೆ ಕಾರಣಗಳನ್ನು ಹುಡುಕುವ ದೃಷ್ಟಿ ಇನ್ನು ಚೂಪು ಆಗಬಹುದೆಂಬ ಭರವಸೆಯನ್ನು ಹುಟ್ಟಿಸುತ್ತದೆ. ಒಟ್ಟಾರೆಯಾಗಿ ಸ್ವೀಕಾರ ಸೀಮಿತ ಅನುಭವದಿಂದ ಕೂಡಿದರೂ ನೋವಿನ ಕತೆಗಳಾಗಿ ಮನಮಿಡಿಯುತ್ತವೆ. ಸಾಂಪ್ರದಾಯಕ ಪಾತ್ರಗಳ ಪಡಿಯಚ್ಚಿಲ್ಲದ ಪಾತ್ರ ನಿರೂಪಣೆಯಿಂದಾಗಿ ಗಮನೀಯವಾಗುತ್ತದೆ.

—ಆರ್. ವಿ. ಭಂಡಾರಿ



ಶಿಂ ಗಣೇಶ್ 'ಅನಾಮಿಕಾ'

ತುಂಟಾಟದ ಹುಡುಗಿ - ರೂಪಾದೇವಿ

ಚಿತ್ರ ರಂಗದಲ್ಲಿ ಕೀರ್ತಿಯ, ಯಶಸ್ಸಿನ ಶಿಖರವನ್ನೇರಲು, ಏರಿ ನಿಲ್ಲಲು, ನಿಂತವರು 'ದೊಡ್ಡ' ಎಂದು ಕರೆಸಿಯಲು ಹೆಚ್ಚು ವೇಳೆಯೇ ಬೇಕಾಗದು. ಅದು ಒಂದು ದೃಷ್ಟಿಯಲ್ಲಿ ಸಾಗರದ ಅಲೆಗಳಂತೆ, ನದಿಯ 'ಮುಂಗಾರು' ಮಳೆಯ ಪ್ರವಾಹದಂತೆ. 'ತಾರಾ' ಪಟ್ಟಕ್ಕೆ ಒಂದು ಸ್ಥಿರತೆಯಿಲ್ಲ. ಅದು ಒಟ್ಟಾರೆಯ ಚಿತ್ರ ಒಗಟ್ಟಿನ ಅಸ್ಥಿರತೆಯ, ಅದಾಸ್ಥಿರದ ಪ್ರತೀಕವೂ, ಪ್ರತಿರೂಪವೂ, ಆಗಬಹುದು.

ಅದರಲ್ಲೂ ನಟಿಯರಲ್ಲಂತೂ ಇಂದು ನಗು ತುಂಬಿದ ಮೊಗದಿಂದ ಚಿತ್ರ ರಸಿಕರ ಕಣ್ಣಲ್ಲಿ ಆತ್ಮೀಯವಾದ ಮುದದೊಂದಿಗೆ ಸುಳಿದು ಹೋದವಳು, ನಾಳೆ ಹೆಚ್ಚು ಮೇಲೆ ಹಾಕಿಕೊಂಡು ಗಾಂಧಿ ನಗರದ ಚಿತ್ರ ಬೃಹಸ್ಪರ ಪಾದ ತದ್ವ ಬಳಿಯಲ್ಲಾದರೂ ಅನುಗ್ರಹಿಸುವುದೋ ಎಂದು ಹೊಸಿಲಿನಲ್ಲಿ ಹೊಸ ಮಿಂಚಿಗಾಗಿ ಕುಕ್ಕರು ಗಾಲಲ್ಲಿ ಕುಳಿತು, ಅಂತಃಕರಣದ ಕಣ್ಣಿಮಿಟುವುದು ಸರ್ವೇಸಾಮಾನ್ಯವಾಗಿದೆ. ಪಂಡರಿ ಬಾಯಿ, ಲೀಲಾವತಿ, ಸಾಹುಕಾರ ಜಾನಕಿ, ಜಯಂತಿ, ಭಾರತಿ, ಆರತಿ ಇವರೆಲ್ಲರ ಬಾಳ್ವೆಯ ಪ್ರಸ್ತುತ ಘಟನೆಗಳು ಮೇಲಿನ ಮಾತಿಗೆ ಪುಷ್ಟಿ ಕೊಡಬಲ್ಲವು. ಇವರೆಲ್ಲರಲ್ಲೂ ಆಗಿದ್ದ ಪ್ರತಿಭೆ, ಬುದ್ಧಿಶಕ್ತಿ, ಚಾತುರ್ಯ ಪ್ರಾಯಶಃ ಅರಸು ಹುಡುಕ ಹೋದರೆ ಸಹಾಗಿ ಸಿಗಲ್ಲ! ಮತ್ತು ಈ ಮೇಲಿನ ಅಭಿನೇತ್ರಿಯರ 'ಕಲೆ' ಕೆಲವೆ ಚಿತ್ರಕ್ಕೆ ಸೀಮಿತಗೊಂಡಿದೆಯೇ! ಹೊರತು ನಿರಂತರವಾಗಿ ಬೆಳವಣಿಗೆಯ ಹಾದಿಯಲ್ಲಿ ಮೂಡಿ ಬರಲಿಲ್ಲ. ಇದಕ್ಕೆ ಕೆಲವು ಕಾರಣಗಳಿವೆ. ಅವರ ವ್ಯಕ್ತಿತ್ವಕ್ಕೆ ತಾಳೆ ಬೀಳುವ ಪಾತ್ರಗಳು ಸಿಗದಿರುವುದು. ಅಸಕ್ತಿಗೆತಕ್ಕ ಪಾತ್ರಗಳ ಕೊರತೆ ಮತ್ತು ಈ ಮುನ್ನ ನಲ್ಲೇ ಅಂಕಿದ ಹೊಂದುಗಳಿಂದ ಇವರೊಂದಿಗೆ ಸ್ಪಂದಿಸದ ನಿರ್ದೇಶಕರಿಗಿರುವ ಕೊಳಕ ಮನಸ್ಸು. ನಟ ನಟಿಯರ ನಿಜವಾದ ಹಸವನ್ನು ತಿಂದು ತೇಗ ತೊಡಗಿದೆ.

ಈ ಸಾಲಿಗೆ ಅಷ್ಟೆ ಕನ್ನಡದ ನಟಿ-ರೂಪಾ ದೇವಿ ಸೇರಿಹೋಗಿದ್ದಾಳೋ, ಹೋಗುತ್ತಾಳೋ ಎಂಬ ಭಯ. ದೇವರೆ ನಮ್ಮ-ನಿಮ್ಮದಾಗಿದೆ. ನೂರು ಅರೆ ಬರೆ ಕಲೆಯನ್ನು ಮೈಗೂಡಿಸಿಕೊಂಡ ಕಲಾವಿದರಿಗೆ ಬೋನಸ್. ಅನ್ಯಾಯವಾಗಬಹುದು ಅದರ ಒಟ್ಟನೇ (ಳೇ) ಪೌಢ ಕಲಾವಿದರಿಗೆ ಅನ್ಯಾಯವಾಗಕೂಡದು. ಈ ದೃಷ್ಟಿಯಲ್ಲಿ ರೂಪಾಳನ್ನು ಕಂಡಾಗ ನಮ್ಮ ಭಯ, ಅಂತರಂಗದ ಏರಿ ಏರಿ ಅಪ್ಪುದ ತುದಿಕಕ್ಕೆ ಅರ್ಥ ಬರುತ್ತದೆ.

1979ರಲ್ಲಿ 'ಒರುತಲ ರಾಗಂ' ತೆಲುಗು ಚಿತ್ರದ ಮೂಲಕ ಚಿತ್ರರಂಗಕ್ಕೆ ಅಂಬೆಗಾಲಿಕ್ಕಿದ ರೂಪಾ 'ಅತ್ಯುತ್ತಮ ನಟಿ' ಎಂಬ ಪ್ರಶಸ್ತಿ ಪಡೆದ ಧೀರ-ಅಭಿನಯ ಚತುರೆ

ಮದ್ರಾಸ್ ನಗರದಲ್ಲೇ ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆದ 'ಒರುತಲ ರಾಗಂ' ಅತ್ಯುತ್ತಮ ಅಭಿರುಚಿಯ ಚಿತ್ರವೆಂದು ಪ್ರಶಂಸೆ, ಪ್ರಶಸ್ತಿ ಪಡೆದ ಪ್ರಿಯಳ್ಳೆ ಇಂದಿಗೂ ತಮಿಳುನಾಡು ಮತ್ತು ಬೆಂಗಳೂರಿನಲ್ಲಿ ಒರುತಲ ರೂಪಾ ಎಂದೇ ಕರೆಯುವ ವಾಡಿಕೆಯಿದೆ.

ಹೂವು ಬಿರಿದಂತೆ ಮೋಹ ತುಂಬಿದ ನಗು, ಮುದ್ದು ಮುದ್ದಾದ ಮುಖ, ಆಯಕಟ್ಟಿನ ಶಾರೀರ ಸೌಷ್ಠವ, ಆಕರ್ಷಣೀಯ ನಡೆ ಇವು ರೂಪಾಳ ಸೌಂದರ್ಯದ ಗುಟ್ಟು.

ತೆಲುಗಿನಿಂದ ಚಿತ್ರರಂಗಕ್ಕೆ ಪರಿಚಯಿಸಲ್ಪಟ್ಟರೂ ರೂಪಾದೇವಿ, ತನ್ನ ಕಲಾ ಪ್ರಾವೀಣ್ಯತೆಯ ಮುದ್ರೆ, ಒತ್ತಿ ಸ್ಥಾಯಿಗೊಳಿಸಿದ್ದು ಕನ್ನಡ ಚಿತ್ರರಂಗದಲ್ಲೇ!

'ಅತ್ಯುತ್ತಮ ನಟಿ' ಪ್ರಶಸ್ತಿ ಪಡೆದ 'ಅವಳ ಅಂತರಂಗ'ದ ಹರೆಯದ ನಾಯಕಿಯಲ್ಲಿ ಪ್ರದರ್ಶನಗೊಂಡ ಕೌಟುಂಬಿಕ ನೋವು-ನಲಿವು, ಎಷ್ಟು ಸೈಜವೋ, ಭಗ್ನ ಪ್ರೇಮಿಯಾಗಿ, ಬದುಕಿನ ಬೇಗೆಯಲ್ಲಿ ಬದುಕೇ ದಹಿಸಿ ಹೋಗುವಂತಹ ಭಾವನೆಯನ್ನು ಒಡಮೂಡಿಸುವಲ್ಲಿ ಅಷ್ಟೇ ಗಂಭೀರ. ಹುಡುಗಾಟದ ಹುಡುಗಿಯಾಗಿ, ಹುಡುಗನೊಬ್ಬನಿಗೆ ಕೀಟಲೆ ಮಾಡುತ್ತಾ, ಪ್ರೇಮದ ಗುಂಗಿನಲ್ಲಿ ಮನಸೆಳ್ಳು ಓಡಿ ಬರುವಂತಹ ಧೀಮಂತಿಕೆಯನ್ನು ತೋರಿಸುವ 'ಹಾಲು ಜೇನು' ಚಿತ್ರದ ರೂಪಾಳ ಪಾತ್ರ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತದೆ.

ರೂಪಾ ವೈವಿಧ್ಯಮಯ ನಟಿ. ಅವಳು ಯಾವ ಪಾತ್ರಕ್ಕೂ ಹಸ್ಯವಳೇ. ತಿಳಿ ಹಾಸ್ಯ ಮಿಶ್ರಿತ ವ್ಯಕ್ತಿತ್ವದಿಂದ ಕದ್ದು ಓಡುವಂತಹ ಕ್ರೂರ ಪಾತ್ರಕ್ಕೂ ಹಿಂದಿಲ್ಲ.

ಡಾ। ರಾಜ್ ವಲಯಕ್ಕೆ ಸೇರುವುದಾಗಲೀ, ಅಲ್ಲಿ 'ಸ್ಥ' ಎನಿಸಿಕೊಳ್ಳುವುದಾಗಲಿ ಚಿತ್ರರಂಗದಲ್ಲಿ ಅಷ್ಟು ಸುಲಭ ಸಾಧ್ಯವಲ್ಲ. ರೂಪಾ ರಾಜ್‌ರೊಂದಿಗೆ ಯಾವ ಅಳುಕಿಲ್ಲದೆ ಅಭಿನಯಿಸಿ 'ಸದು ಯ ದಗೊಂಬೆ' 'ಹಾಲು ಜೇನು' 'ಯಾರಿವನು' ಮುಂತಾದ ಚಿತ್ರಗಳಲ್ಲಿ ಹೆಸರು ಪಡೆದಿದ್ದಾಳೆ.

ಕನ್ನಡ ಚಿತ್ರರಂಗ ತನ್ನ ಗುಣಮಟ್ಟವನ್ನು ದಿನದಿಂದ ದಿನಕ್ಕೆ ಕಳೆದುಕೊಳ್ಳುತ್ತಿದೆ. ಅದರ ಜೊತೆ ಜೊತೆಗೆ ಒಳ್ಳೊಳ್ಳೆ ನಟ ನಟಿಯರನ್ನೂ ಗುರುತಿಸುವಲ್ಲಿ ಎಡವುತ್ತಿರುವುದು-ರೂಪಾಳಂತ ಹುಟ್ಟು ಪ್ರತಿಭಾವಂತರೂ ಅವಕಾಶಕ್ಕಾಗಿ ಹೊಂಚು ಹಾಕುವಂತಾಗಿದೆ.

ಕಲಾವಿದರಿಗೆ ಸರಿಯಾದ ಅವಕಾಶ ಸಿಗದಿದ್ದಲ್ಲಿ ಯಾವು ಯಾವುದೋ ಪಾತ್ರಗಳನ್ನಾದರೂ ಮಾಡುವ ಮಟ್ಟಕ್ಕೆ ತಂತಾನೇ ಇಳಿಯ ಬೇಕಾಗುವುದು ಸಹಜ. ರೂಪಾಳೂ ಹಾಗೆ. ತನ್ನ ಅಭಿರುಚಿಗೆ, ತನ್ನ ಸಾಮರ್ಥ್ಯಕ್ಕೆ ತಕ್ಕಂತ ಪಾತ್ರ ಸಿಗುತ್ತಿಲ್ಲ ಎಂಬ ಕೊರಗಿನೊಂದಿಗೆ; ಸಿಕ್ಕ ಪಾತ್ರಗಳನ್ನೆಲ್ಲಾ ಮಾಡುತ್ತಿದ್ದಾಳೆ. ಅವಳ ಅಪ್ಪಟವಾದಂತಹ ಕಲಾ ಮೌಲ್ಯ ಈ ರೀತಿ ವ್ಯಯವಾಗುತ್ತಿರುವುದು ತುಂಬಾ ನೋವಿನ ಸಂಗತಿ.

ರೂಪಾಳ ವಯಕ್ತಿಕ ಜೀವನ ತುಂಬಾ ಸುಖ ತರುವಂತಹದ್ದು. ಇವಳ ತಂದೆ ಕೆ. ರಘುರಾಮಯ್ಯ ತೆಲುಗು ರಂಗ ಭೂಮಿಯಲ್ಲಿ ಹೆಸರು ಮಾಡಿದಟ್ಟ ಹಿರಿಯನಟ. ತಾಯಿ ಆದವಾನಿ ಲಕ್ಷ್ಮೀ ದೇವಿ ಕನ್ನಡ ರಂಗ ಭೂಮಿ, ಚಿತ್ರರಂಗದ 'ಅತ್ಯುತ್ತಮ ನಟಿ' ಪ್ರಶಸ್ತಿ ಪಡೆದವರು ನಮ್ಮವರು. ರೂಪಾ ತುಂಬಾ ಬುದ್ಧಿವಂತೆ ಎಂ. ಎ ಮಾಡುತ್ತಿರುವಾಗಲೇ ಚಿತ್ರದಲ್ಲಿ ನಟಿಸಲು ಬಂದರೂ,ಎಂ. ಎ.ಯಲ್ಲಿ ಫಸ್ಟ್ ಕ್ಲಾಸ್ ಪಾಸ್ ಮಾಡಿದವಳು.

'ಪ್ರಿಯ ಬಾಂಧವಿ' ತೆಲುಗು ಚಿತ್ರಕ್ಕೆ ಆಂಧ್ರದ ರಾಜ್ಯ ಪ್ರಶಸ್ತಿಯಾಗಿದ್ದು ಸಿನಿಮಾ ಸಂಜೀವ ರೆಡ್ಡಿಯವರಿಂದ 'ತಂದೆಗೆ ತಕ್ಕ ಮಗಳು' ಎಂಬ ಪ್ರಶಂಸೆ ಪಡೆದ ವ್ಯಕ್ತಿ ಇವಳದು.

ರೂಪಾದೇವಿ ಬುದ್ಧಿವಂತ ವಿಚಾರಕ್ಕೆ ತುಂಬಾ ಅಂಟಿಕೊಂಡವಳು. ಯಾವ ಘಟನೆ ನಡೆದರೂ ತಾನಾ ತಾನಾ ವಿಚಾರಿಸಿಯೇ ನಿರ್ಧಾರ ತೆಗೆದುಕೊಳ್ಳುವಳು. ತಾಳ್ಮೆಯ ಮೈ ಇಟ್ಟು ಕೊಂಡ ವಿಶ್ವದ ವ್ಯಕ್ತಿತ್ವ ಪ್ರಾಯಶಃ ಗೋಜಲು ಗೋಜಲಾದಂತಹ ಚಿತ್ರ ಬದುಕಿಗೆ ಈ ರೀತಿಯ ಮನೋಸ್ಥಿತಿ ತುಂಬಾ ಅಗತ್ಯ. ಇಲ್ಲವಾದಲ್ಲಿ 'ಅತ್ಯುತ್ತಮ' ಪಟ್ಟ ದಿನದಿಂದ ದಿನಕ್ಕೆ ಬೆಳೆಯುವ ಸಾಧ್ಯತೆಯೇ ಹೆಚ್ಚು.

ರೂಪಾ ದೇವಿಯ ಹವ್ಯಾಸಗಳು ತುಂಬಾ ವಿಚಿತ್ರವಾದುದು. ಉಡುಗೆ-ತೊಡುಗೆ ಅಲಂಕಾರ ಅತೀ ಪ್ರಿಯವಾದದ್ದು. ಪೇಂಟ್, ಹೂ ಬಿಡಿಸುವುದು, ಪೈಂಟಿಂಗ್, ಐಸ್ಕ್ರೀ, ಸೀರೆ ಹೀಗೆ ಹಲವು-ಹಲವಾರು ಆಸಕ್ತಿಗಳನ್ನು ಹೊಂದಿದ್ದು ಬೇರಾರ ಜಾಡೇ ಇಲ್ಲ-ಕಲಾತ್ಮಕ ನಾಟಕ-ಸಿನಿಮಾ ನೋಡುವುದು, ಬುದ್ಧಿವಂತಿಗೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದು, ಮತ್ತು ಸುತ್ತ ಮುತ್ತಲಿನವರ ಬದುಕಿನ ನೋವುಗಳಿಗೆ ಸ್ಪಂದಿಸುವ ದಯಾಮಯಿಯಾಗಿ ಕೊಂಡ ರೂಪಾ ನಟಿಯಾಗಿ, ಸಾಧ್ವಿಯಾಗಿ, ಪ್ರಾಜ್ಞ ಹುಡುಗಿಯಾಗಿ ಮುಗ್ಧವಾಗಿ ಮನುಷ್ಯಳಾಗಿ, ಅಭಿನೇತ್ರಿಯಾಗಿ ಹೀಗೆ ಹಾತ್ವಾದ ರೀತಿಯ ಸಂದೇಶಗಳನ್ನು ಹುಟ್ಟು ಹಾಕುವವಳು. ಮಗುವಿನಂತೆ ಈಗಲೂ ಅಮ್ಮನಲ್ಲಿ ಕೀಟಲೆ ಮಾಡುವ ತುಂಟಾಟದ ಹುಡುಗಿ ರೂಪಾಳಂತ ಪ್ರತಿಭೆಯನ್ನು ಕನ್ನಡ ಚಿತ್ರರಂಗ ಬಾಳಿಸಿ ಬೆಳೆಸಲಿ ಎಂದು ಹಾರೈಸೋಣವೇ?

—ಭೃಂಗ

ರೂಪಾಳ ಕೆಲವು ರಸನಿಮಿಷಗಳು

1982ರಲ್ಲಿ ದಿಲ್ಲಿಯಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ರೂಪಾದೇವಿ ಅಭಿನಯಿಸಿದ ತಮಿಳು ಚಿತ್ರ "ಎಚ್ಚಿಲ್ ಇರವುಗಳ್" ಪ್ರದರ್ಶನಕ್ಕೆ ಆಯ್ಕೆಯಾಗಿತ್ತು. ಭಾರತೀಯ ನಿಯೋಗದಲ್ಲಿ ರೂಪಾ, ಟಿ. ಪ್ರಕಾಶ್, ಹಿಂದಿಯಿಂದ ರಾಜ್ ಕಪೂರ್, ರೇಖಾ, ಪರ್ವೀನ್ ಬಾಬಿ ಮೊದಲಾದವರಿದ್ದರು. ಚಿತ್ರ ಪ್ರದರ್ಶನದ ವೇಳೆಯಲ್ಲಿ ರೂಪಾ-ಚೆನ್ನಾಗಿ ಮಿಂಚುವ ಸೀರೆಯನ್ನು ಓಡಾಡಾಗಿ ಉಟ್ಟು ಹೋಗಿದ್ದಳು. ಪ್ರದರ್ಶನದ ನಂತರ ರೂಪಾದೇವಿಯನ್ನು ರಸಿಕರು ಮುತ್ತಿಗೆ ಹಾಕಿದ್ದರು! ಚಿತ್ರದ ಅಭಿನಯವನ್ನು ಪ್ರಶಂಸಿಸುವ ಭರಾಟೆ ಒಂದು ಕಡೆಯಾದರೆ, ಸೀರೆಯ ಉಡಿಗೆಯ, ಬಣ್ಣದ, ಅದರ ಸಾಂಸ್ಕೃತಿಕ ಮಹತ್ವದ ಕುರಿತಾದ ನೂರಾರು ಪ್ರಶ್ನೆಗಳ ಸುರಿಮಳೆಯನ್ನೇ ಗರೆದರು. ಪ್ರಾಯಶಃ 'ಈ ಕ್ಷಣಗಳು ಮೆಲುಕು ಹಾಕಿದಷ್ಟೂ ಮುಕ್ಕೊಡುವ ಜೊತೆ ಜು. ಹುಸಿಯಾದ ಧನ್ಯತೆಯ. ಹೆಮ್ಮೆಯ ಭಾವ ಪದವೂಳ ದಲ್ಲಿ ತೇಲಾಡಿ ಆನಂದಿಸಲ್ಪಟ್ಟಿದ ಎಷ್ಟು ತೀವ್ರ ರೂಪಾ.

ಪ್ರಶಸ್ತಿ ತಂದ ರೋಮಾಂಚನ

'ಹೊಸಬೆ ದೋಣಿ' ಕನ್ನಡ ಚಿತ್ರ ಚಿತ್ರೀಕರಣದಲ್ಲಿ ಪಾಲ್ಗೊಳ್ಳಲು ಮಡಿಕೇರಿಯಲ್ಲಿ ತಂಗಿರುವಾಗ ದಿಲ್ಲಿಯ ರೂಪಾದೇವಿಗೆ 'ಅತ್ಯುತ್ತಮ ನಟಿ' ಪ್ರಶಸ್ತಿಯ ಘೋಷಣೆ! 'ಅವಳ ಅಂತರಂಗ' ರೂಪಾಳ ಮೊಟ್ಟನ, ಪ್ರಸ್ತಿಕೆಯ ಚಿತ್ರವಾದರೂ ಪ್ರಶಸ್ತಿ ತರುವ ಯಾವ ಸೂಚನೆಯನ್ನೂ ರೂಪಾ ಇಟ್ಟಿರದ ಕಾರಣ ಮೊದಲ ತೆಲುಗು ಚಿತ್ರಕ್ಕೆ ಪ್ರಶಸ್ತಿ ಬಂದಾಗಿಂತ ಈ ಪ್ರಶಸ್ತಿ ಅತ್ಯಂತ ಸಂತೋಷ ತಂದು ರೋಮಾಂಚನ ಗೊಳಿಸಿದ ಘಟನೆ.

ವಿಶಿಷ್ಟ ಪಾತ್ರದಲ್ಲಿ ಅಂಬರೀಶ್

ತಾವು ಅಭಿನಯಿಸಿದ ಒಂದೊಂದು ಚಿತ್ರದಲ್ಲೂ ವಿಭಿನ್ನ ರೀತಿಯ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿರುವ ಅಂಬರೀಶ್ ರವರು ಇದೀಗ "ಪ್ರಗತಿ ಎಂಟರ್ ಪ್ರೈಸಸ್"ನ "ಅಂತಿಮ ತೀರ್ಪು" ಚಿತ್ರದಲ್ಲಿ ಹೊಸ ಶೈಲಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. "ಶಿವಂ" ಮೋಹನ್ ಅರ್ಪಿಸಲಿರುವ ಈ ಚಿತ್ರ, ಹೊಸ ವರ್ಷದ ಮೊದಲ ದಿನ ನಗರದ ಕಂಠೀರವ ಸ್ಟುಡಿಯೋದಲ್ಲಿ ಸೆಟ್ಟೇರಲಿದೆ.

ಈ ಗಾಗಲೇ ಎಸ್. ಪಿ. ಬಾಲಸುಬ್ರಹ್ಮಣ್ಯಂ, ಎಸ್. ಜಾನಕಿ ಹಾಗೂ ಚಿತ್ರಾ ಅವರುಗಳು ಹಾಡಿರುವ 3 ಹಾಡುಗಳ ಧ್ವನಿಮುದ್ರಣ ಅನ್ನ ಮುಗಿಸಿರುವ ಈ ಚಿತ್ರವನ್ನು ಎ. ಟಿ. ರಘು ನಿರ್ದೇಶಿಸಲಿದ್ದಾರೆ.

ಸಂಭಾಷಣೆಯನ್ನು ಕೆ. ವಿ. ರಾಜು ರಚಿಸಿದ್ದಾರೆ. ಈ ಚಿತ್ರಕ್ಕೆ ಸಂಗೀತ ನೀಡುತ್ತಿರುವ ಹಂಸಲೇಖ ಅವರೇ ಹಾಡುಗಳನ್ನು ಬರೆದಿದ್ದು ಚಿತ್ರಕಥೆಯನ್ನು ನಿರ್ದೇಶಕರಾದ ಎ. ಟಿ. ರಘು ಅವರು ರಚಿಸಿದ್ದಾರೆ. ನೃತ್ಯ ಸಂಯೋಜನೆ ಉಡುಪಿ ಜಯರಾಂ ಅವರದು.

ಸಹ ಸಂಯೋಜಕರು ವೈ. ಶಿವಯ್ಯ, ಛಾಯಾಗ್ರಾಹಕರು ಪಿ. ಎಸ್. ರಾಜು, ಸಹ ನಿರ್ದೇಶಕ ಆರ್.ಕೆ. ರಂಗಾ ಅವರದು. ತಾರಾಗಣದಲ್ಲಿ ಅಂಬರೀಶ್, ಭಾರತಿ, ಗೀತಾ, ತುಳಸಿ, ದೇವರಾಜ್, ತೂಗುದೀಪ ಶ್ರೀನಿವಾಸ್, ದೊಡ್ಡಣ್ಣ, ಲಕ್ಷ್ಮಣ್, ಎಸ್. ಎಸ್. ರಾವ್, ಸೋಮು, ಮೈಸೂರು ಲೋಕೇಶ್, ಸುಂದರ್ ಮುಂತಾದವರಿದ್ದಾರೆ.

ಅರುಣ್ ಗೋವಿಲ್, ಸಂಗೀತ ಶಾಹುಳ 'ಏಕ್ ರೇಜ್'

ಚಿತ್ರ ವಿಚಿತ್ರ

ರಾಜಕೀಯದಿಂದ ಸಿನಿಮಾಕ್ಕೆ

ಸಿನಿಮಾ ಬಿಟ್ಟು ರಾಜಕೀಯದ ಕೈ ಹಿಡಿಯುವುದು ಈಗ ಹೊಸತೇನಲ್ಲ ಬಿಡಿ. ಅಮೇರಿಕದ ರೊನಾಲ್ಡ್ ರೇಗನ್‌ರಿಂದ ಹಿಡಿದು ಭಾರತದ ಎಂಜಿಆರ್, ಎನ್ ಟಿ ಆರ್, ಅಮಿತಾಬ್...ಮೊದಲಾದವರೆಲ್ಲ ಇದೇ ದಾರಿ ಹಿಡಿದವರು. ಈಗ ಹೊಸ ತೊಂದು ವಲಸೆ ಪ್ರಾರಂಭಗಾಗಿದೆ ಅದು ರಾಜಕಾರಣದಿಂದ ಸಿನಿಮಾ ಪ್ರವೇಶ. ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ತೆಲುಗುದೇಶಂ ಶಾಸಕ ಬಿ. ವಿ. ರೆಡ್ಡಿ ಇಂಥ ಓರ್ವ ರಾಜಕಾರಣಿ.

ಎನ್ ಟಿ ಆರ್ ನಂತೆ ಬಿ. ವಿ. ಆರ್ ಎಂದೇ ಪ್ರಸಿದ್ಧರಾಗಿರುವ ರೆಡ್ಡಿ ತಮ್ಮ ಹುಡುಗತನದಲ್ಲಿ ಬಹಳಷ್ಟು ನಾಟಕಗಳಲ್ಲಿ ನಟಿಸಿ ಅನುಭವವಿರುವವರು ಪ್ಯಾಕ್ಟಿಯಲ್ ಚಿತ್ರ "ಅಲ್ಲುಡು ಕೋಸಂ" ದಲ್ಲಿ ವಿಲನಾಯಕನಾಗಿ ಕಾಣಿಸಿಕೊಂಡಿರುವ ಬಿ. ವಿ. ಆರ್ ಬಳಿಗೆ ಈಗಾಗಲೇ ಇನ್ನೂ ಕೆಲವು ಚಿತ್ರಗಳಿಗೆ ಕರೆ ಬಂದಿದೆ.

ರಾಜಕಾರಣಿಗಳ ಕೈಯಲ್ಲಿ ದೇಶದ ಪಾಲು ಮಾಡುವುದಕ್ಕೇನು ಉಳಿದಿದೆ, ಏನೇ ಆಗಲೀ, ಬಿವಿಆರ್‌ಗೂ ಚಿತ್ರೋದ್ಯಮಕ್ಕೆ ಸ್ವಾಗತ ಬಯಸುವ ಆಗದೇ?

ದರಂ-ಗರಂ

ಈ ಗಂಡಸರೆಷ್ಟು ಸ್ವಾರ್ಥಿಗಳು ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಹಿಂದಿಯ ಧರ್ಮೇಂದ್ರ.

ತನ್ನ ಪತ್ನಿ ಹೇಮಾ ಬೇರೆ ಯಾವನೋ ಒಬ್ಬನ ಕೈಯಲ್ಲಿ ಕೈ ಕೈಜೋಡಿಸಿಕೊಂಡು, ಮೈಗೆ ಮೈ ತಾಗಿಸಿಕೊಂಡು ಕುಣಿಯುವುದಾಗಲೀ ಅಥವ ತನ್ನ ತೋಳ ತೆಕ್ಕೆಯೊಳಗೆ ಆತ ಹೇಮಾಳನ್ನು ಸೆಳೆದುಕೊಳ್ಳುವುದನ್ನಾಗಲೀ ಕಂಡರೆ ಧರ್ಮೇಂದ್ರನಿಗೆ ಸಹಿಸಲಸಾಧ್ಯವಾದ ಅಸೂಯೆ ಉಂಟಾಗುತ್ತದೆ. ಇಷ್ಟಾಗಿಯೂ ಹೇಮಾ ಇತರರ ತೋಳ ತೆಕ್ಕೆಯೊಳಗೆ ಹೋಗುವುದು ನಿಜಜೀವನದ ಸುಖಕ್ಕಾಗಿ ಅಲ್ಲ, ಬದಲು ಸಿನಿಮಾಕ್ಕಾಗಿ-ಧರಂ ಬಹಳಷ್ಟು ಗರಂ ಆಗಿ ಬಿಡುತ್ತಾನೆ. ಆದರೆ ಲಕ್ಷಾಂತರ ರೂಪಾಯಿ ಆದಾಯ ತರುವ ಚಿತ್ರ ನಟನೆಯನ್ನು ಕೇವಲ ಇಂದೊಂದು ಕಾರಣಕ್ಕಾಗಿ ಬಿಟ್ಟು ಬಿಡುವುದು ಪ್ರಾಯಶಃ ಹೇಮಾಳಿಗೆ ಒಪ್ಪಿಗೆಯಿಲ್ಲ.

ಇದಕ್ಕಾಗಿ ಈಗ ಧರ್ಮೇಂದ್ರನೇ ಹೊಸ ಉಪಾಯವೊಂದನ್ನು ಕಂಡು ಕೊಂಡಿದ್ದಾನೆ. ಹೇಮಾ ನಾಯಕಿಯಾಗಿ ಇತರ ನಟರೊಂದಿಗೆ ಪ್ರೇಮ ದೃಶ್ಯಗಳಲ್ಲಿ ನಟಿಸುತ್ತಿರುವ ಚಿತ್ರದ ಶೂಟಿಂಗ್‌ನಲ್ಲಿ ಭಾಗವಹಿಸದೇ ಇರುವುದು ಮತ್ತು ಅಂಥಾ ಚಿತ್ರಗಳನ್ನು ನೋಡದೇ ಇರುವುದು.

ಒಂದೋ ಎಷ್ಟು ನಾವು ಹೊಡೆದಷ್ಟು ಹೋಗಬೇಕು. ಇಲ್ಲಾಂದ್ರೆ "ಎಷ್ಟು ಹೋದಷ್ಟು ನಾವು ಹೊಡೆಯಬೇಕು" ಹಾಗಾ ತಸದ ಗಾದೆ ಮಾತು ಧರ್ಮೇಂದ್ರನಿಗೆ ಸರಿಯಾಗಿ ಒಪ್ಪುತ್ತದೆ ಅಲ್ಲವೆ?

ಕಂಪ್ಯೂಟರ್-ಕಿಮಿ

ಮಹಾರಾಷ್ಟ್ರದ ಚಿತ್ರೋದ್ಯಮ ಮುಷ್ಕರದ ದಿನಗಳಲ್ಲಿ ಕೊರಗುತ್ತಿರುವಾಗ ಕೆಲನಿರ್ದೇಶಕರು ಮೊರಗಾಡುತ್ತ ಹೋಗಿ ಹೊರಾಂಗಣ ಮುಗಿಸಿಕೊಂಡು ಬಂದುದು ನಿಮಗೆಲ್ಲ ಗೊತ್ತಿರಬೇಕು. ಈಗ ಮುಂಬೈನಲ್ಲಿಯೇ ಉಳಿದವರು ಏನು ಮಾಡಿದರು? ಎಂದು ಕೇಳಿದರೆ ಕಿಮಿ "ನಾನಂತೂ ಕಂಪ್ಯೂಟರ್ ಕ್ಲಾಸ್‌ಗೆ ಹೋಗುತ್ತಿದ್ದೆನೆ" ಎಂದು ಬೀಗುತ್ತಿದ್ದಾಳೆ.

ಆದರೆ ಕಂಪ್ಯೂಟರ್ ಎಂದರೆ ಯಾವುದೋ ಕ್ಲಿಷ್ಟಕರವಾದ ಕಲಿಕೆ ಎಂದೇ ತಿಳಿದು ಕೊಂಡಿರುವ ಆಕೆಯ ತಾಯಿ "ನನ್ನ ಮಗಳು ತುಂಬ ಬುದ್ಧಿವಂತ ಹುಡುಗಿ ಈಗ ಆಕೆ ವಿಜ್ಞಾನದ ಸರ್ವೋತ್ಕೃಷ್ಟ ಕಲಿಕೆಯಾದ ಕಂಪ್ಯೂಟರ್ ಕ್ಲಾಸ್‌ಗೆ ಹೋಗುತ್ತಿದ್ದಾಳೆ" ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದಾಳಂತೆ.

'ಕಂಪ್ಯೂಟರ್ ಕಲಿಕೆ' ಈಗ ಹೈಸ್ಕೂಲ್ ಮಟ್ಟದ ಮಕ್ಕಳೂ ಅರಗಿಸಿ ಕೊಳ್ಳುವ ವಿದ್ಯೆ. ಅದಕ್ಕೇನಂತ ಬುದ್ಧಿವಂತಿಕೆ ಬೇಕು? ಆದರೆ ಚಿತ್ರರಂಗದ ಪ್ರಸಿದ್ಧ ತಾರೆಯರಾದ ರೇಖಾ, ಪದ್ಮಿನಿ ಕೊಲ್ಹಾಪುರೆ, ಸಾರಿಕಾ, ಶ್ರೀದೇವಿ, ಜಯಪ್ರದ, ಭಗ್ಯಶ್ರೀ ಮೊದಲಾದವರಂತೆ ಸ್ಟ್ಯಾಂಡರ್ಡಿನಲ್ಲಿಯೇ ಕಲಿಕೆಗೆ ಕಲಿತು ಹೊರೆದು ಚಿತ್ರನಗರ ಹೊಕ್ಕಿದ್ದ ಕಿಮಿಗೆ 'ಕಂಪ್ಯೂಟರ್ ಸೆಷನ್' ನಲ್ಲಿ ಡಿಪ್ಲೊಮಾ ಪಡೆಯುವ ಹುಚ್ಚು ಯಾಕೆ ಬಂತು? ಎಂಬುದು ಇನ್ನೂ ಯಾರಿಗೂ ಗೊತ್ತಾಗಿಲ್ಲ.

ಆದರೆ, ಕಂಪ್ಯೂಟರ್ ಪರೀಕ್ಷೆಯಲ್ಲಿ ಕಿಮಿ ಉತ್ತೀರ್ಣಳಾಗಿದ್ದಳೋ ಅವಳನ್ನಾಳೆ ಏನೂ ಗೊತ್ತೆ? "ಕಲಿಯುವುದು ಕೇವಲ ಪರೀಕ್ಷೆಯಲ್ಲಿ ಪಾಸ್ ಎಂಬ ಹೆಗ್ಗಳಿಕೆ ಗಳಿಸಲು ಮಾತ್ರ ಅಲ್ಲ ತಾನೆ?

ಕಿಮಿಯ ಮಾತೂ ನಿಜಾ ಅಲ್ವಿ.

- ದೀಪಾ ಮಟ್ಟಿ

'ಅರಮನೆ'ಯಲ್ಲಿ 'ದಿಗ್ವಿಜಯ'

"ವಿಜಯೇಶ್ವರಿ ಪ್ರೊಡಕ್ಷನ್ಸ್" ಲಾಂಛನದಲ್ಲಿ ಶ್ರೀನಾಥ್ ಆರ್ಟ್ಸ್, ಶ್ರೀಮತಿ ಗೀತಾ ಶ್ರೀನಾಥ್, ಎಂ. ಎಸ್. ಕಾರಂತ್ ಹಾಗೂ ಸೋಮು ನಿರ್ಮಿಸುತ್ತಿರುವ "ದಿಗ್ವಿಜಯ" ಅದ್ಧೂರಿ ಚಿತ್ರಕ್ಕೆ 15 ದಿನಗಳ ಒಂದು ಹಂತದ ಚಿತ್ರೀಕರಣ ಈಗಾಗಲೇ ಮುಗಿದಿದ್ದು ದ್ವಿತೀಯ ಹಾಗೂ ಅಂತಿಮ ಹಂತದ ಚಿತ್ರೀಕರಣ ಈ ತಿಂಗಳ 11 ರಿಂದ ಬೆಂಗಳೂರು ಅರಮನೆಯಲ್ಲಿ ಅಂಬರೀಷ್-ಅಂಬಿಕಾ-ಶ್ರೀನಾಥ್ ಅಭಿನಯದ ಹೋರಾಟದ ಚಿತ್ರಣದೊಂದಿಗೆ ಆರಂಭವಾಗಲಿದೆ.

ಕಥಾಲೇಖಕ ಸೋಮು ಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ ಚಿತ್ರ ನಾಟಕವನ್ನು ಕೆ. ಎಸ್. ಸತ್ಯನಾರಾಯಣ, ಬರೆದಿದ್ದಾರೆ.

ಭಾವಪೂರ್ಣ ಅಭಿನಯ

ತಾನು ತುತ್ತು ತಿನ್ನಿಸಿ - ತೊಡೆಯ ಮೇಲೇರಿಸಿಕೊಂಡು ಆಟವಾಡಿಸಿ ಬೆಳೆಸಿದ ತನ್ನ ಅಣ್ಣನ ಮಗಳು ಗಿರಿಜೆಯ ಬಗ್ಗೆ ಊರ ಗೌಡನಿಗೆ ಅಪಾರ ವಾತ್ಸಲ್ಯ. ಗಿರಿಜಾಳ ಚಾರಿತ್ರ್ಯದ ಬಗ್ಗೆ ಹಬ್ಬಿದ ಗಾಳಿ ಸುದ್ದಿ, ಗೌಡನ ಕಿವಿಗೆ ಕಾದ ಸೀಸ ಸುರಿದಂತಾಗಿತ್ತು. ನಡುರಾತ್ರಿಯಲ್ಲಿ ಪರಪುರುಷನೊಬ್ಬ, ಗಿರಿಜೆಯ ಕೋಣೆಯಿಂದ ಹೊರಬಂದದ್ದನ್ನು ನೋಡಿದ. ಹೃದಯದಲ್ಲೂ ರಕ್ತವೆ ತುಂಬಿತು.

ತನ್ನ ಮನೆಯಲ್ಲಿ ಇನ್ನು ಗಿರಿಜೆಗೆ ಸ್ಥಾನ ನೀಡಬಾರದೆಂದು ನಿರ್ಧರಿಸಿದ. ಆಳು ಮಲ್ಲಣ್ಣನನ್ನು ಕರೆದು, ಗಿರಿಜೆಯನ್ನು ಅವನ ಮನೆಯಲ್ಲೇ ಇನ್ನು ಮುಂದೆ ಆಶ್ರಯ ನೀಡಬೇಕೆಂದು ಹೇಳಿದ. "ನಾಯಿ ಮುಟ್ಟಿದ ಮಡಿಕೆ" ಎಂಬಂತೆ ಮಲ್ಲಣ್ಣ, ಗಿರಿಜೆಯನ್ನು ದೂಡಲಿಸಿದ. ತನಗೆ ಇದು ಪುದೂ ತಿಳಿಯದೆಂದು ಗಿರಿಜೆ ಕಣ್ಣೀರಿಟ್ಟಳು.

ಕೋಪಾವೇಶಕ್ಕೆ ಬಲಿಯಾಗಿದ್ದ ಗೌಡ ತನಗೆ ಗಿರಿಜೆಯ ಮುಖ ನೋಡಲು ಅಸಹ್ಯ. ಏನ್ಯಾದರೂ ಅವಳು ಅಳಿನ ಮಗಳು. ಇನ್ನು ಮುಂದೆ ಆಳಿನ ಮನೆಯಲ್ಲೇ ಇರಲಿ, ಎಂದು ಹೇಳಿದರೂ, ತಾನು ಸಾಕಿದ ಗಿರಿಜೆಯ ಮೇಲಿನ ವಾತ್ಸಲ್ಯದಿಂದ ಗೌಡನಿಗೆ ಕಣ್ಣು ತುಂಬಿ, ಕಂಬನಿ ಹರಿಯಿತು.

ಚಿತ್ರೀಕರಣದ ನಂತರ ದೀಪ ಆರಿದರೂ - ಗೌಡನ ತಾಪ ಆರಿರಲಿಲ್ಲ. ಗೌಡನ ಪಾತ್ರ ವಹಿಸಿದ್ದ ಕಲ್ಯಾಣ್ ಕುಮಾರ್‌ಗೆ ಸರಿವ್ ಸಹಾಯವಿಲ್ಲದೆ ಕಣ್ಣೀರು ಸುರಿಸಿದರು. ಕಲ್ಯಾಣ್ ಕುಮಾರ್‌ರ ಈ ಭಾವಪೂರ್ಣ ಅಭಿನಯಕ್ಕೆ ಪೂರಕವಾಗಿ ಮಲ್ಲಣ್ಣನಾಗಿ ಬಾಲಕೃಷ್ಣ. ಗಿರಿಜೆಯಾಗಿ ಸುಧಾಚಂದ್ರನ್ ನಟಿಸಿದರು. ಈ ಹೃದಯಸ್ಪರ್ಶಿ ಸನ್ನಿವೇಶ. ಚಿತ್ರ ತಂಡದವರೆಲ್ಲರನ್ನೂ ಮಂತ್ರಮುಗ್ಧರನ್ನಾಗಿಸಿತ್ತು.

"ಊರಿಗಿಟ್ಟ ಕೊಳ್ಳಿ" ಚಿತ್ರಕ್ಕಾಗಿ ನಿರ್ದೇಶಕ ಕಲ್ಲೇಶ್ ಈ ಸನ್ನಿವೇಶವನ್ನು ಚಿತ್ರೀಕರಿಸಿದ ನಂತರ ಕಲ್ಯಾಣ್ ಕುಮಾರ್ ರವರನ್ನು ಆನಂದದಿಂದ ತಬ್ಬಿಹಿಡಿದು, ತಮ್ಮ ನಿರೀಕ್ಷೆಗೂ ಮೀರಿ ಈ ಸನ್ನಿವೇಶ ಮೂಡಿದೆ ಎಂದರು. ಕೆ. ಎಸ್. ಚಂದ್ರು ರವರ ಛಾಯಾಗ್ರಹಣ - ಎಂ. ರಂಗರಾವ್ ರವರ ಸಂಗೀತವಿರುವ "ಚಿತ್ರಕಲಾಆರ್ಟ್ಸ್" ಸಂಸ್ಥೆಯ ನಿರ್ಮಾಣದಲ್ಲಿ ಮುಕ್ತಾಯ ಘಟ್ಟದಲ್ಲಿರುವ ಈ ಚಿತ್ರದ ತಾರಾಗಣದಲ್ಲಿ ಶಿವಕುಮಾರ್, ಕವಿಸಿಧರನ್, ಮೈಸೂರು ಲೋಕೇಶ್, ಅಭಿನಯಿಸಿದ್ದಾರೆ.

ಶ್ರೀಲ, ಕೃಷ್ಣಂ ರಾಜು 'ಖೈದಿ ನಂ 467'

ದೂರದರ್ಶನಕ್ಕೆ 'ಮಾರಿಗೊಂಜಿ ಕುರಿ'

ಮುಂಬಯಿ, 'ಕಲಾಜಗತ್ತು' (ರಿ) ನಾಟಕ ತಂಡದ ಮೂಲಕ ಹೆಸರು ಮಾಡಿರುವ ದ. ಕನ್ನಡದ ವಿಜಯ ಕುಮಾರ್ ಶೆಟ್ಟಿ ಅವರ 'ಮಾರಿಗೊಂಜಿ ಕುರಿ' ಕಥೆಯನ್ನು ದಿಲ್ಲಿ ದೂರದರ್ಶನದ ಹಿಂದಿ ಚಿತ್ರವೊಂದಕ್ಕಾಗಿ ಆರಿಸಿಕೊಳ್ಳಲಾಗಿದೆ.

ದಿಲ್ಲಿ ದೂರದರ್ಶನದ ಚಿತ್ರ ನಿರ್ಮಾಪಕಿ ಮಂಜು ಸಿಂಗ್ ಅವರು 'ಏಕ್ ಕಹಾನಿ' ಎನ್ನುವ ಚಿತ್ರ ಸರಣಿಗೆ ವಿಜಯಕುಮಾರ್‌ರ 'ಮಾರಿಗೊಂಜಿ ಕುರಿ' ಕತೆಯನ್ನು ಆರಿಸಿಕೊಂಡಿದ್ದಾರೆ. 'ಏಕ್ ಕಹಾನಿ' ಸರಣಿಯಲ್ಲಿ ಪಟ್ಟಿಗಿಟ್ಟಿಸಿಕೊಂಡ ಕರ್ನಾಟಕದವರಲ್ಲಿ ವಿಜಯಕುಮಾರ್ ಮೂರನೆಯವರಾಗಲಿದ್ದಾರೆ.

ಕಥೆಯ ಸಂಭಾಷಣೆಯನ್ನು ನಿರ್ದೇಶಕಿ ಉಷಾ ದೀಕ್ಷಿತ್ ಅವರೇ ರಚಿಸಿದ್ದಾರೆ. ಕಲಾಜಗತ್ತು ಸಂಸ್ಥೆಯ ಭವಾನಿಶಂಕರ್ ಶೆಟ್ಟಿ, ಮೋಹನ್ ಶೆಟ್ಟಿ, ಪ್ರಭಾಕರ್ ಶೆಟ್ಟಿ ಕು। ಪುಷ್ಪಲತಾ, ಜಗದೀಶ್ ರಾವ್, ರಮೇಶ್ ಕರ್ಕೇರಾ, ಎಚ್. ಮೋಹನ್ ಮತ್ತು ಪದ್ಮಿನಿ ರಾವ್ ಅವರು ಚಿತ್ರದಲ್ಲಿ ಪಾತ್ರ ವಹಿಸಲಿದ್ದು ಚಿತ್ರೀಕರಣ ಈ ತಿಂಗಳ 27ರಿಂದ ಮೂಡಬಿದಿರೆಯಲ್ಲಿ ಆರಂಭವಾಗಲಿದೆ.

ಮುಂಗಾರು
ರವಿವಾರ, ಫೆಬ್ರವರಿ

ಬೀಡಿ ಕಂಟ್ರಾಕ್ಟ್ ವ್ಯವಸ್ಥೆ

ಬೀಡಿ ಕೈಗಾರಿಕೆಯಲ್ಲಿರುವ ಕಂಟ್ರಾಕ್ಟ್ ಪದ್ಧತಿಯನ್ನು ರದ್ದು ಪಡಿಸಲು ಸರಕಾರ ಉದ್ದೇಶಿಸಿದೆಯೆಂದು ಕಂದಾಯ ಹಾಗೂ ಕಾರ್ಮಿಕ ಸಚಿವ ಎಸ್. ಆರ್. ಬೊಮ್ಮಾಯಿ ಅವರು ವಿಧಾನ ಸಭೆಯಲ್ಲಿ ಪ್ರಕಟಿಸಿದ್ದಾರೆ.

ಬೀಡಿ ಕೈಗಾರಿಕೆಯಲ್ಲಿ ಆರೋಗ್ಯಕರವಾದ ಮಾಲೀಕ–ಕಾರ್ಮಿಕ ಸಂಬಂಧವನ್ನು ಬೆಸೆಯಲು, ಈ ಕ್ಷೇತ್ರದಲ್ಲಿ ನಡೆಯುತ್ತಿರುವ ಕಾರ್ಮಿಕರ ಶೋಷಣೆಯನ್ನು ನಿವಾರಿಸಲು ಮಾಡಬೇಕಾದ ಮೊತ್ತ ಮೊದಲ ಕೆಲಸ ಇದಾಗಿದೆ. ಬೀಡಿ ಕಂಟ್ರಾಕ್ಟರರು ಈ ಉದ್ಯಮದಲ್ಲಿ ಮಾಲೀಕರು ಹಾಗೂ ಕಾರ್ಮಿಕರ ನಡುವಿನ ದಲ್ಲಾಳಿಗಳಾಗಿದ್ದಾರೆ. ಕಾರ್ಮಿಕರು ಸಂಘಟನೆಯ ಮೂಲಕ ಈ ತನಕ ಪಡೆದಿರುವ ಸೌಲಭ್ಯಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಕೂಡ ಈ ಕಂಟ್ರಾಕ್ಟ್ ವ್ಯವಸ್ಥೆಯ ಪರಿಣಾಮವಾಗಿ ನೀರಲ್ಲಿ ಮಾಡಿದ ಹೋಮದಂತಾಗಿದೆ.

ಕಾರ್ಮಿಕರನ್ನು ಹತ್ತು ಹಲವು ಬಗೆಯಲ್ಲಿ ಶೋಷಿಸುವ ವಿಧಾನಗಳನ್ನು ಕಂಟ್ರಾಕ್ಟರರು ಕರಗತ ಮಾಡಿಕೊಂಡಿದ್ದಾರೆ. ಎಲೆ ಹಾಗೂ ತಂಬಾಕು ಎವರೇಜಿನಲ್ಲಿ ಕಾರ್ಮಿಕರ ಶೋಷಣೆ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಬಡಪಾಯಿ ಕಾರ್ಮಿಕರು ಈ ಅನ್ಯಾಯವನ್ನು ದನಿಯೆತ್ತಿ ಪ್ರತಿಭಟಿಸಲಾರದೆ, ಕೆಲಸ ಕಳೆದುಕೊಳ್ಳುವ ಭೀತಿಯಿಂದ ತಲೆ–ಬೆನ್ನು ಬಗ್ಗಿಸಿ ಎವರೇಜಿನಲ್ಲಿ ತಮ್ಮ ಮೇಲೆ ಬೀಳುವ ಹೊರೆಯನ್ನು ಮೌನವಾಗಿ ಹೊತ್ತುಕೊಳ್ಳುತ್ತಿದ್ದಾರೆ. ಹಲವಾರು ಖೋಟಾ ಖಾತೆಗಳನ್ನು ನಮೂದಿಸಿ ಪಾಸ್ ಪುಸ್ತಕ ತಯಾರಿಸಿ ನೈಜ ಕಾರ್ಮಿಕರ ದುಡಿಮೆಯನ್ನು ಅವುಗಳಿಗೆ ವರ್ಗಾಯಿಸಿ ತುಟ್ಟಿಭತ್ತೆ, ಬೋನಸ್, ಭವಿಷ್ಯ ನಿಧಿ, ಹೆರಿಗೆ ಭತ್ಯೆ ಮೊದಲಾದುವುಗಳನ್ನು ವಂಚಿಸುವ ಜಾಲದಲ್ಲಿ ಬಹುತೇಕ ಎಲ್ಲ ಕಂಟ್ರಾಕ್ಟರರೂ ಪಾಲುದಾರರಾಗಿದ್ದಾರೆ. ಕಾರ್ಮಿಕರಿಗೆ ಸಂಬಳದ ಚೀಟಿ ವಿತರಣೆ ವ್ಯವಸ್ಥೆಯನ್ನು ಕಂಟ್ರಾಕ್ಟರರು ಸೂಕ್ತವಾಗಿ ನಿರ್ವಹಿಸುತ್ತಿಲ್ಲ. ಭವಿಷ್ಯ ನಿಧಿ ಪಾವತಿಯ ರಶೀದಿಯೂ ಕಾರ್ಮಿಕರಿಗೆ ಸಿಗುತ್ತಿಲ್ಲ, ಕಾರ್ಮಿಕರ ಪಾಲಿನ ಭವಿಷ್ಯ ನಿಧಿ ಚಂದಾ ಸಂಗ್ರಹದ ಏಜಂಟರು ಕಂಟ್ರಾಕ್ಟರರೇ ಆಗಿದ್ದು ಸಂಬಳದಿಂದ ಚಂದಾ ಕಡಿತ ಮಾಡಿ ಜೇಬಿಗಿಳಿಸುವ ಕಾರ್ಯದಲ್ಲಿ ಈ ಮಂದಿ ನಿಷ್ಣಾತರು. ಇದನ್ನು ಮಾಲೀಕರೂ ಕಂಡೂ ಕಾಣದಂತೆ ಸುಮ್ಮನಿದ್ದು ಭವಿಷ್ಯ ನಿಧಿಯ ತಮ್ಮ ಪಾಲಿನ ಚಂದಾ ಹಣವನ್ನು ಕೂಡ ಪಾವತಿಸದೆ ಸುಮ್ಮನಿದ್ದಾರೆ.

ಕಂಪೆನಿಯವರು ಪೂರೈಕೆ ಮಾಡಿದ ಒಳ್ಳೆಯ ಗುಣಮಟ್ಟದ ಎಲೆ ಮತ್ತು ತಂಬಾಕನ್ನು ಬೇರೆಡೆಗೆ ತಿರುಗಿಸಿ ಕಾರ್ಮಿಕರಿಗೆ ಕಳಪೆ ಸಾಮಗ್ರಿ ನೀಡಿ ಕಳ್ಳದಾರಿಯಿಂದ ಹಣ ಮಾಡುವ ಕಂಟ್ರಾಕ್ಟರರ ತಂತ್ರ ಇತ್ತೀಚೆಗಿನದ್ದು.

ಮಾಲೀಕರಿಗೂ ಕಾರ್ಮಿಕರಿಗೂ ನೇರ ಬಾಂಧವ್ಯ ಉಂಟಾಗದೆ ಇರುವುದರಿಂದ ಕಾರ್ಮಿಕರಿಗೆ ಆಗಿರುವ ಅನಿಷ್ಟಗಳಲ್ಲಿ ಮೇಲಿನವುಗಳು ಕೆಲವು ಮಾತ್ರ. ನೇರ ಸಂಬಂಧ ಉಂಟಾದರೆ ಕಾರ್ಮಿಕರಿಗೆ ಈಗ ಒಪ್ಪಂದದಲ್ಲಿದ್ದು ಕಾಗದದ ಮೇಲೆ ಮಾತ್ರವೇ ಉಳಿದಿರುವ ಹಲವಾರು ಸೌಲಭ್ಯಗಳು ದೊರೆಯುತ್ತವೆ. ಬೋನಸ್, ರಜಾದಿನದ ವೇತನ, ಹೆರಿಗೆ ಭತ್ಯೆ, ಕೆಲಸವಿಲ್ಲದ ದಿನಕ್ಕೂ ವೇತನ ಮೊದಲಾದುವು ಕಾರ್ಮಿಕರಿಗೆ ಲಭ್ಯವಾಗುತ್ತವೆ. ಈಗ ಇಂಥವುಗಳನ್ನು ಕಂಟ್ರಾಕ್ಟರರು ಮಾಲೀಕರಿಂದ ಕಸಿದುಕೊಂಡು ಕಾರ್ಮಿಕರಿಗೆ ಕೊಡದೆ ತಾವೇ ಜೇಬಿಗಿಳಿಸಿ ಮಹಡಿ ಮನೆ ಕಟ್ಟುತ್ತಾರೆ.

ಸರಕಾರ ಬೀಡಿಕಾರ್ಮಿಕರ ಕ್ಷೇಮಾಭ್ಯುದಯದ ನಿಟ್ಟಿನಲ್ಲಿ ಮೊದಲು ಮಾಡಬೇಕಾಗಿರುವುದು ಕಂಟ್ರಾಕ್ಟ್ ಪದ್ಧತಿಯ ನಿರ್ಮೂಲನ. ಈ ಕಂಟ್ರಾಕ್ಟ್ ವ್ಯವಸ್ಥೆಯು ದ. ಕ. ಜಿಲ್ಲೆಯಲ್ಲಿ ಬೀಡಿ ಉದ್ಯಮವು ವಿಕಾಸವಾಗ ತೊಡಗಿದ 1948ರ ವೇಳೆಯಲ್ಲಿಯೇ ಕಾಣಿಸಿಕೊಂಡಿತು. ಕಾರ್ಮಿಕರು ಮನೆಯಲ್ಲೇ ಕುಳಿತು ಕೆಲಸ ಮಾಡಬಹುದಾದ ವಿಶಿಷ್ಟ ವ್ಯವಸ್ಥೆಯ ಪರಿಣಾಮವಾಗಿ ಹುಟ್ಟಿಕೊಂಡ ವಿರ್ಪಾಡು ಇದು. ಇಂದು ದ. ಕ. ಜಿಲ್ಲೆಯಲ್ಲಿ ಸುಮಾರು ಎರಡು ಸಾವಿರದಷ್ಟು ಕಂಟ್ರಾಕ್ಟರರು ಸುಮಾರು ಮೂರು ಲಕ್ಷ ಮಂದಿ ಕಾರ್ಮಿಕರ ಉಸ್ತುವಾರಿ ವಹಿಸಿದ್ದಾರೆ. ಕಾರ್ಮಿಕರಿಗೆ ಸಿಗಬೇಕಾದ ಬಹಳಷ್ಟು ಹಣವನ್ನು ತಾವೇ ಕಬಳಿಸುತ್ತಿದ್ದಾರೆ.

ಈ ವಿಕೃತ ಪದ್ಧತಿಯನ್ನು ಕೊನೆಗೊಳಿಸುವುದರ ಜೊತೆಗೆ ಸರ್ಕಾರಕ್ಕೆ ಬೀಡಿ ಕಾರ್ಮಿಕರಿಗೆ ಸಂಬಂಧಿಸಿ ಇನ್ನಷ್ಟು ಹೊಣೆಗಾರಿಕೆಗಳಿವೆ. ಅವರಿಗೆ ದುಡಿಮೆಗೆ ಸರಿಸಾಟಿಯಾದ ಗಳಿಕೆಯನ್ನು ವಿಧಿಸುವುದು ಅವುಗಳಲ್ಲೊಂದು. ಸಾವಿರ ಬೀಡಿಗೆ ಕನಿಷ್ಠ 15 ರೂಪಾಯಿ ಕೂಲಿ ಹಾಗೂ ಅದರ ಮೇಲೆ ತುಟ್ಟಿಭತ್ತೆ ನಿಗದಿ ಮಾಡಬೇಕಾದ್ದು ಅಗತ್ಯ. ಕಳೆದ ವರ್ಷ ಸರಕಾರ ಸಾವಿರಬೀಡಿಗೆ ಕನಿಷ್ಠಕೂಲಿ ರೂ. 11.50 ನಿಗದಿಮಾಡಿ ಕಾರ್ಮಿಕರಿಗೆ ಅನ್ಯಾಯ ಮಾಡಿತು. ತುಟ್ಟಿಭತ್ತೆಯಲ್ಲಿಯೂ ಇಂತಹದ್ದೇ ಅನ್ಯಾಯ ಆಗಿದೆ, ಬೆಲೆ ಸೂಚ್ಯಂಕದ 470 ಪಾಯಿಂಟ್‌ನ ಮೇಲಿನ ಪ್ರತಿ ಸೂಚ್ಯಂಕಕ್ಕೂ ಎರಡು ಪೈಸೆ ಸಿಗಬೇಕಾದ್ದನ್ನು ತಪ್ಪಿಸಿ 690ಪಾಯಿಂಟಿನ ನಂತರದಿಂದ ಜಾರಿಗೊಳಿಸಲಾಗಿದೆ. ಅಂದರೆ ಎರಡುವರ್ಷ ಹಿಂದೆಯೇ ಸಿಗಬೇಕಾಗಿದ್ದ ತುಟ್ಟಿಭತ್ತೆ ಈ ವರ್ಷ ಉತ್ತರಾರ್ಧದಿಂದ ಮಾತ್ರವೇ ಸಿಗುವಂತಾಗಿದೆ. ಕನಿಷ್ಠ ಕೂಲಿ ಹಾಗೂ ತುಟ್ಟಿಭತ್ತೆ ಇವುಗಳಲ್ಲಿ ಅನುಕ್ರಮವಾಗಿ 180 ಕೋಟಿ ಹಾಗೂ 40 ಕೋಟಿ ರೂಪಾಯನ್ನು ವಾರ್ಷಿಕವಾಗಿ ಉಳಿಸಿಕೊಳ್ಳಲು ಮಾಲೀಕರೊಂದಿಗೆ ರಾಜ್ಯ ಸರಕಾರ ಶಾಮೀಲಾಗಿದೆ.

ಮಾಲೀಕರ ಪಕ್ಷ ವಹಿಸುವ ಈ ನೀತಿಯನ್ನು ಸರಕಾರ ಬಿಟ್ಟು ಜನಪರ ನೀತಿ ವಹಿಸಬೇಕು, ಬಡ ಬೀಡಿ ಕಾರ್ಮಿಕರಿಗೆ ಆಗುತ್ತಿರುವ ಅನ್ಯಾಯ ಹೋಗಲಾಡಿಸಬೇಕು.

ಕ್ರಿಕೆಟ್, ಇಂಗ್ಲಿಷ್ ಬಗ್ಗೆ ಲೋಹಿಯಾ ಬರೆದದ್ದು.....

ಅದು 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯ ಸಂಪಾದಕರಿಗೆ ಬರೆದದ್ದು; ಅಲ್ಲಿ ಪ್ರಕಟವಾಗಲಿಲ್ಲ [illegible] ಹಾಕಿದ್ದಾರೆ.

ನಾನು ಕ್ರಿಕೆಟನ್ನು, ಬ್ರಿಟಿಷರ ಪ್ರತಿಮೆಗಳನ್ನು, ಮತ್ತು ಇಂಗ್ಲಿಷ್ ಭಾಷೆಯನ್ನು, ಅವೆಲ್ಲ ಬ್ರಿಟಿಷರವು ಎನ್ನುವ ಕಾರಣ ದ್ವೇಷಿಸುತ್ತೇನೆಂದು ನಿಮ್ಮ ಪತ್ರಿಕೆಯಲ್ಲಿ ಅನೇಕ ಸಲ ವರದಿಯಾಗಿದೆ. ಈ ಬಗ್ಗೆ ನನ್ನ ನಿಲುವನ್ನು ನಿಮಗೆ ಸ್ಪಷ್ಟಪಡಿಸಬೇಕೆಂದು ನಾನು ಅನೇಕ [illegible] ನನ್ನ [illegible] ಭೂಮಿಯಿಂದ [illegible] ಕಾಯುತ್ತಿದ್ದೆ. ಅಂಥ ಅವಕಾಶ ಈಗ ಸಿಕ್ಕಿದೆ.

ಇಂಡಿಯಾದವರ ಕ್ರಿಕೆಟ್ ಆಟದ ಬಗ್ಗೆ ಬ್ರಿಟಿಷರು [illegible] ಯನ್ನು ಇಲ್ಲಿನ ಇಂಗ್ಲಿಷ್ ಬಲ್ಲ ಜನ ಬಹು [illegible] ಭಾವಿಸುತ್ತಾರೋ ತಿಳಿಯದು. ಅಂತೂ ಅಂಥವರಲ್ಲಿ ನಾನು ತಿಳಿದ ಹಾಗೆ ಕನಿಷ್ಠ ಒಬ್ಬನಾದರೂ ಹೀಗೆ ಭಾವಿಸುತ್ತಾನೆ: ಇಂಡಿಯಾದ ಜನಕ್ಕೆ 3 ದಿನಗಳ ಕ್ರಿಕೆಟ್ ಟೆಸ್ಟ್ ಬೇಕು; ಹೀಗೆ ಮೂರು ದಿನ ಆಟವಾದರೆ (ಅಥವಾ ಈಗಿನ ರೂಢಿಯಂತೆ ಐದು ದಿನ ಆದರೂ ಬಾದರಂತೂ ಹೇಳುವುದೇ ಬೇಡ) ಇಂಡಿಯಾದ ಕ್ರಿಕೆಟ್ ಆಟಗಾರರೆಲ್ಲ ಮಣ್ಣು ಮುಕ್ಕುವುದೇ ಸರಿ. ಸಾಧಾರಣವಾಗಿ, ಒಂದು ಪಕ್ಷದವರಿಗೆ ಉಂಟಾಗತಕ್ಕ ಅಡಚಣೆಗಳು ಅವರು ಎದುರು ಪಕ್ಷಕ್ಕೆ ತೀರ ಸುಲಭ ಸೋತು ಬಿಡುವಷ್ಟು ಹೆಚ್ಚಿನದು ಗಬಾರದು. ಕನಿಷ್ಠ ಡ್ರಾ (ಸಮ) ಆಗುವಂತಾದರೂ ಇರಬೇಕು. ಒಬ್ಬೆ ಎರಡು ದಿನಗಳ ಟೆಸ್ಟ್ ಆದುವುದಾದರೆ ಇಂಡಿಯಾದ ಆಟಗಾರರಿಗೆ ಸಮ ಮಾಡಿಕೊಳ್ಳುವುದಕ್ಕಾದರೂ ಅವಕಾಶ ಉಳಿದೀತು.

ನನ್ನ ದೇಶದಲ್ಲಿ ಕ್ರಿಕೆಟ್ ಆಟಕ್ಕೆ ಸರಕಾರದಿಂದ ಸಿಕ್ಕುವ ನೆರವನ್ನು ನಾನು ಟೀಕಿಸುತ್ತ ಬಂದಿದ್ದೇನೆ. ಅದಕ್ಕೆ ಕಾರಣ ಇವು: ಒಂದನೆಯದಾಗಿ ಅದು ಪಾಳೆಯಗಾರಿಕೆಯ ಕಾಲಕ್ಕೆ ಸೇರಿದ ಆಟ. ಎರಡನೆಯದಾಗಿ, ಒಲಿಂಪಿಕ್ಸ್ ಅಥವಾ ಅಂತರ್ರಾಷ್ಟ್ರೀಯ ಆಟವಲ್ಲ. ಮೂರನೆಯದಾಗಿ, ಅಂಗಸಾಧನೆಯ ಹಾಗೆ ಅಥವಾ ಫುಟ್‌ಬಾಲ್ ಆಟದ ಹಾಗೆ ಅದು ಜನ ಸಮೂಹದ ಶರೀರ ಸಂವರ್ಧನಕ್ಕೆ ಸಾಧಕವಾಗುವಂಥದಲ್ಲ. ಇಂಗ್ಲೆಂಡ್‌ನವರಲ್ಲಿಯಾಗಲಿ ಅಥವಾ ಇಂಗ್ಲಿಷ್ ಬಲ್ಲ ಇಂಡಿಯಾದ ಜನಗಳಲ್ಲಿಯಾಗಲಿ ಈ ತನಕವೂ ನನ್ನ ವಾದಕ್ಕೆ [illegible]. ಈ ಕ್ರಿಕೆಟ್ ಇಂಗ್ಲೆಂಡ್ ಮತ್ತು ಇಂಡಿಯಾಕ್ಕೆ ನಡುವೆ ಇರುವ ಬೆಸುಗೆ ಎಂದು ಹೇಗೋ ರೂಢಿಬಿಟ್ಟಿರುವ ಗೂಢನಂಬಿಕೆ; ನಿಜವಾಗಿ ಇದು ಬೆಸುಗೆ ಅಲ್ಲ; ಬದಲು, ತಮ್ಮನ್ನು ಆಳಿದ ಸಿರಿವಂತರ ಆಸ್ತಿಯೇ ಬರವೇ ಆದೀತು. ಇಂಗ್ಲೆಂಡಿನ ಮಟ್ಟಿಗೆ ಹೇಳುವುದಾದರೆ ಇವೊತ್ತಿಗೆ ಅಲ್ಲಿ ವಿರಾಮವುಳ್ಳ ಒಂದು ಜನವರ್ಗವಿದೆ. ಆಸ್ಟ್ರೇಲಿಯ ಹಾಗೂ ನ್ಯೂಜಿಲೆಂಡ್ ಅಥವಾ ವೆಸ್ಟ್ ಇಂಡೀಸ್ ಶ್ರೀಮಂತ ದೇಶಗಳಲ್ಲವೇ. ಅದರೂ, ಅವರ ವಿಸ್ತಾರವಾದ ಹೊಲ, ಹುಲ್ಲುಗಾವಲು, ಹಸುಕಾಲಕ ಅಥವಾ ಪ್ರವಾಹ ಆದಾಯ ಇವು ಆ ದೇಶಗಳಲ್ಲಿ ವಿರಾಮದ ಆಟವಾದ ಕ್ರಿಕೆಟನ್ನು ಆಡಲು ಅನುಕೂಲತೆಯುಳ್ಳ ಒಂದು ಜನವರ್ಗವನ್ನು ಬೆಳೆಸಿದೆ. ಇಂಡಿಯಾದ ಸ್ಥಿತಿ ಬೇರೆ. ಸದ್ಯ ಅದು, ಬ್ರಿಟಿಷರ ಕಾಲದಲ್ಲಿದ್ದ ಪ್ರದರ್ಶಕ್ಯದ ರಾಜರುಗಳ ಹಾಗೂ ಶ್ರೀಮಂತ ಭೂ ಮಾಲೀಕರ ಗೊಡವೆಯಿಂದ ಪಾರಾಗಲು ಹೆಣಗುತ್ತಿದೆ. ಭವಿಷ್ಯದಲ್ಲಿ ಕೂಡ, ಇನ್ನೂ ದೀರ್ಘಕಾಲ ಈ ದೇಶದ ಆರ್ಥಿಕ ಸ್ಥಿತಿ ಸಮೃದ್ಧವಾಗಲಾರದು. ಆದಕಾರಣ ಇಲ್ಲಿ ಇರಬೇಕಾದ ಆಟಗಳು ಹಾಕಿ, ಟೆನಿಸ್ ಫುಟ್‌ಬಾಲ್ ಮತ್ತು ಇದಕ್ಕಿಂತ ಹೆಚ್ಚಾಗಿ ಅಂಗಸಾಧನೆ, ಈಜುಗಾರಿಕೆ ಮುಂತಾದುವು. ಇವು ಗಂಡಾಗಲಿ, ಹೆಣ್ಣಾಗಲಿ, ದೇರೊಂದು ಉದ್ಯೋಗದಲ್ಲಿ ತೊಡಗಿದ್ದುಕೊಂಡೇ ಕನಿಷ್ಠ ವಿರಾಮಗಳ ಮಧ್ಯದಲ್ಲಾದರೂ ಅಭ್ಯಾಸ ಮಾಡಲು ಸಾಧ್ಯವಿರುವ ಆಟಗಳು. ಫುಟ್‌ಬಾಲ್ ಆಟಗಾರರಲ್ಲೂ, ಈಗೀಗ ವಿಲಾಸೀ ಆಟಗಾರರು ಅವರೂ ಪಾಗಿಬಿಟ್ಟಿದ್ದಾರೆ ಎಂದು ಕೇಳಿದ್ದೇನೆ. ಹಾಗಿದ್ದರೂ ಅದರಿಂದ ನನ್ನ ವಾದಕ್ಕೆ ಬಾಧಕವಿಲ್ಲ. ಕ್ರಿಕೆಟ್‌ಗಿಂತ ಹೆಚ್ಚಾಗಿ ಫುಟ್‌ಬಾಲ್ ಬ್ರಿಟಿಷರ ರಾಷ್ಟ್ರೀಯ ಕ್ರೀಡೆಯಾಗಿದೆ; ಎಂಬುದನ್ನೂ ಗಮನಿಸಬೇಕು ಫುಟ್‌ಬಾಲ್ ಜನಗಳ ಆಟ, ಕ್ರಿಕೆಟ್ ವರ್ಗಗಳ ಆಟ.

ಹೀಗೆ, ಭಾಷಾ ಸಮಸ್ಯೆಯ ಬಗ್ಗೆಯೂ ನನ್ನ ಅಭಿಪ್ರಾಯಗಳನ್ನು ತಪ್ಪಾಗಿ ವರದಿ ಮಾಡಲಾಗಿದೆ. ವಾಸ್ತವವಾಗಿಯೂ, ನಾನೇ ಇಂಗ್ಲಿಷನ್ನು ಜರ್ಮನ್ ಭಾಷೆಯಷ್ಟೇ, ಅಥವಾ ಹೆಚ್ಚು ಕಡಿಮೆ ನನ್ನ ಸ್ವಂತ ಮಾತೃ ಭಾಷೆಯಷ್ಟೇ ಪ್ರೀತಿಸುತ್ತೇನೆ. ಆದರೆ ಇಲ್ಲಿರುವುದು ಯಾವುದೇ ಭಾಷೆಯನ್ನು ಪ್ರೀತಿಸುವ ಅಥವಾ ಪ್ರೀತಿಸದಿರುವ ಪ್ರಶ್ನೆಯಲ್ಲ. ಒಂದು ಸಣ್ಣ ಅಲ್ಪಸಂಖ್ಯಾತ ವರ್ಗ ಬೃಹತ್ತಾದ ಬಹುಸಂಖ್ಯಾತ ವರ್ಗದ ಮೇಲೆ ದಬ್ಬಾಳಿಕೆ ನಡೆಸುವ ಸಾಧನವಾಗಿ ಭಾಷೆ ಬಳಕೆಯಾಗುವುದು ಸಾಧುವೆ ಸರಿಯೆ ಎಂಬುದು ಇಲ್ಲಿನ ಪ್ರಶ್ನೆ. ನಾನು ಇಂಗ್ಲಿಷ್ ವಿರೋಧಿಸುವುದು ಅದು ವಿದೇಶೀ ಭಾಷೆ ಎಂಬ ಕಾರಣದಿಂದಲ್ಲ; ಭಾರತದ ಈಗಿನ ಪರಿಸ್ಥಿತಿಯಲ್ಲಿ ಅದು ಪಾಳೆಗಾರಿಕೆಯ ಭಾಷೆಯಾಗಿಬಿಟ್ಟಿದೆ ಎಂಬ ಕಾರಣದಿಂದ. ಸಂಸ್ಕೃತದ ಬಗ್ಗೆ ಕೂಡ ನನ್ನ ವಿರೋಧ ಇಷ್ಟೇ ಬಲವತ್ತರವಾದದ್ದು. ಇಂಡಿಯಾದ ರಾಷ್ಟ್ರಭಾಷೆಯಾಗಿ ಇಂಗ್ಲಿಷ್‌ಗೆ ಬದಲು ಅದನ್ನು ಬಳಸಬೇಕು ಎಂಬ ವಾದ ಬಂದಾಗ. ಇಂಗ್ಲಿಷ್ ಜನ ಇಂಡಿಯಾದಲ್ಲಿ ತಮ್ಮ ಭಾಷೆ ಯಾವ ಪ್ರಯೋಜನಕ್ಕಾಗಿ ಬಳಕೆಯಾಗುತ್ತಿದೆ ಎಂಬುದನ್ನು ಅರಿತಿದ್ದಾರೋ ಇಲ್ಲವೋ ನನಗೆ ಸರಿಯಾಗಿ ತಿಳಿಯದು. ಈ ದೇಶದಲ್ಲಿ ಶಕ್ತಿಹೀನ ಅಲ್ಪಸಂಖ್ಯಾತ ವರ್ಗವೊಂದು ಇಂಗ್ಲಿಷನ್ನು ಮುಷ್ಟಿಯಲ್ಲಿ ಇಟ್ಟುಕೊಂಡು ಆ ಮೂಲಕ ತನ್ನ ಅಧಿಕಾರವನ್ನು ಸಶಕ್ತಗೊಳಿಸಿಕೊಳ್ಳುತ್ತ ಹೋಗುತ್ತಿದೆ. ಇವೊತ್ತಿನ ಇಂಡಿಯಾದ ಅಧಿಕಾರಗಾರ ವರ್ಗದ ಮುಖ್ಯ ಲಕ್ಷಣಗಳು ಈ ಮೂರು: ಮೇಲು ಜಾತಿ, ಶ್ರೀಮಂತಿಕೆ ಮತ್ತು ಇಂಗ್ಲಿಷ್ ಜ್ಞಾನ. ಇವುಗಳಲ್ಲಿ ಯಾವುದೇ ಎರಡು ಲಕ್ಷಣಗಳಿದ್ದರೂ ಸಾಕು. ಅಂಥವನು ದೇಶದ ಅಧಿಕಾರದ ವರ್ಗದಲ್ಲಿ ಸೇರಿಕೊಳ್ಳಲು ಅರ್ಹತೆ ಪಡೆಯುತ್ತಾನೆ. ಅಂಥ ಜನಗಳ ಸಂಖ್ಯೆ ಒಂದು ಅಂದಾಜಿನಲ್ಲಿ ಸುಮಾರು ಮೂರು ಮಿಲಿಯ ಇದ್ದೀತು. ಈ ಮೂರು ಮಿಲಿಯ ದೇಶೀಯ ಇಂಡಿಯನ್ನರು ಸುಮಾರು ನಾಲ್ಕು ನೂರು ಮಿಲಿಯ ಸ್ವದೇಶೀಯರ ಎದೆಯ ಮೇಲೆ ಗಟ್ಟಿ ಕೂತು ಅವರನ್ನು ತುಳಿಯುತ್ತಿದ್ದಾರೆ. ತಕ್ಕ ಇಷ್ಟೇ ಎಂದು ಹೇಳಲಿಕ್ಕಾಗದ ಎರಡು ಆಯುಧಗಳು ಅವರ ಕೈಯಲ್ಲಿವೆ– ಒಂದು, ಕೋವಿ; ಇನ್ನೊಂದು, ಅದಕ್ಕಿಂತ ಹೆಚ್ಚಿನದು, ಇಂಗ್ಲಿಷ್ ಭಾಷೆ.

ಪಾಳೆಗಾರಿಕೆಯು ಅಲ್ಪಸಂಖ್ಯಾತರು ತಾವು ಆಳುವ ಜನರಲ್ಲಿ ಸ್ವದೇಶೀಯ ಭಾಷೆಯನ್ನು ಕುಂಠಿ ಅವರನ್ನು ಹಿಡಿತ ತಪ್ಪದಂತೆ ಇಟ್ಟುಕೊಳ್ಳುವುದು ಯಾವಾಗಿನ ರೂಢಿ. ಅದೇ ರೀತಿಯಲ್ಲಿ ಇಂಡಿಯಾದ ಅಧಿಕಾರದ ವರ್ಗ, ಇಂಗ್ಲಿಷ್ ಮಾತನಾಡಲು ಅಥವಾ ತಿಳಿದುಕೊಳ್ಳಲು ಬಾರದಿರುವುದೇ ಒಂದು ಅಪರಾಧ ಎಂಬ ಭಾವನೆ ಮೂಡಿಸಿ ಜನ ಸಾಮಾನ್ಯರ ಮೇಲೆ ತಮ್ಮ ಅಧಿಕಾರ ಬಿಗಿದಿದ್ದಾರೆ. ಈ ದೇಶದಲ್ಲಿ ವಿದ್ಯಾರ್ಥಿಗಳ ಅನುತ್ತೀರ್ಣತೆ ಯಾವುದೇ ಪರೀಕ್ಷೆಯಲ್ಲೂ ಶೇಕಡ ಐವತ್ತಕ್ಕೆ ಕಡಿಮೆಯಾಗದಂತೆ ಮಾಡಲು ಈ ಭಾಷೆಯನ್ನು ಬಳಸಲಾಗುತ್ತಿದೆ ಎಂಬ ವಿಷಯವೂ ಇಂಗ್ಲಿಷ್ ಜನರ ಗಮನಕ್ಕೆ ಬರಬೇಕು. ಈ ವರ್ಷ ಮೆಟ್ರಿಕುಲೇಶನ್ ಪರೀಕ್ಷೆಯಲ್ಲಿ ಈ ದೇಶದ ಅರ್ಧ ಮಿಲಿಯ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. ಉತ್ತೀರ್ಣರಾಗಿರುವವರ ಸಂಖ್ಯೆ ಇದಕ್ಕಿಂತ ಕೊಂಚ ಕಡಿಮೆ. ಈ ಅನುತ್ತೀರ್ಣತೆಗೆ ಹೆಚ್ಚು ಭಾಗ ಕಾರಣ ಇಂಗ್ಲಿಷ್ ಕಡ್ಡಾಯವಾಗಿರುವುದು. ಇಂಡಿಯಾದ ಅಧಿಕಾರದ ವರ್ಗ ಇಂಗ್ಲಿಷ್‌ನ ಕಡ್ಡಾಯವನ್ನು [illegible], ಉನ್ನತ ವಿದ್ಯಾಭ್ಯಾಸ ತಮ್ಮ ಕಿರಿಸುತ್ತಿಗೇ ಸೀಮಿತವಾಗಿರಬೇಕು ಎಂಬುದು ಅವರ ಇಚ್ಛೆ. ಸಾಮಾನ್ಯ ಜನವರ್ಗ ಬಯಸಿದ ಪ್ರಶಸ್ತ ವಸ್ತುಗಳ ಕಡೆಗೆ ಚಾಚದಂತೆ ದಂಡೆ ಕಟ್ಟುವುದು ಅವರ ಆಸೆ.

ಹೀಗೆ ಮುಂದುವರಿಸಬಹುದು, ಆದರೆ ನಾನು ಈ ಪತ್ರವನ್ನು ಮುಗಿಸಬೇಕು. ಬ್ರಿಟಿಷ್ ಪ್ರತಿಮೆಗಳ ಬಗ್ಗೆ, ಅಷ್ಟು ಮಾತ್ರವಲ್ಲ ಯಾವುದೇ ಪ್ರತಿಮೆಗಳ ಬಗ್ಗೆ ನನಗಿರುವ ಅಭಿಪ್ರಾಯಗಳನ್ನು ತಿಳಿಯುವ ಕುತೂಹಲ ನಿಮಗಿದ್ದರೆ, ಅವು ಪ್ರಕಟವಾಗಿರುವ ಪತ್ರಿಕೆಗಳನ್ನು ನಿಮಗೆ ಕಳಿಸಬಲ್ಲೆ. ಯಾವ ಮಹನೀಯನಿಗೆ, ಕೆಲವು ಇಂಗ್ಲಿಷ್ ಜನರೇ ಪ್ರಾಯ: ಕ್ರೋಧದಿಂದ- ಆದರೆ ಪೂರಾ ಸತ್ಯವಾಗಿ- ಇಂಡಿಯದಲ್ಲಿನ ಕೊನೆಯ ಬ್ರಿಟಿಷ್ ವೈಸರಾಯ್ ಎಂಬ ಹೆಸರಿಟ್ಟರೋ ಅವನಿಗಿಂತ ಹೆಚ್ಚು ಬ್ರಿಟಿಷ್ ವಿರೋಧಿಯಲ್ಲ ನಾನು, ಖಂಡಿ. ಬದಲಾಗುತ್ತಿರುವ ಕಾಲದ ಜೊತೆ ಜೊತೆ ಓಡಿಕೊಳ್ಳಲು ಸ್ವಲ್ಪ ಹೆಚ್ಚು ಮುಂದಾಗಿರುವವನು ಅಷ್ಟೆ. ಬರುವ ವರ್ಷಗಳಲ್ಲಿ ಇಂಗ್ಲೆಂಡ್ ಮತ್ತು ಇಂಡಿಯಾದ ಸಂಬಂಧ ಉಳಿದು ಬೆಳೆದು ಬರುವುದು ಕ್ರಿಕೆಟ್ ಆಟದ ಆಸ್ತಿಕದ ಮೇಲಂತೂ ಅಲ್ಲವೇ ಅಲ್ಲ. ಇಂಗ್ಲಿಷ್ ಭಾಷೆಯ ಮೇಲೂ ಅಲ್ಲ; ವಾಣಿಜ್ಯ, ಸಂಘಟನೆಗಳು ಮತ್ತು ಚಿಂತನೆಗಳ ಹಾಳಿಕೆಯ ಸತ್ವದ ಮೇಲೆ. ಮುಂದಾದರೂ ಸಂಘಟನೆ ಮತ್ತು ಚಿಂತನೆಗಳ ಕೊಡು ಕೊಳೆ ಇಂಗ್ಲೆಂಡ್ ಮತ್ತು ಇಂಡಿಯಾದ ನಡುವೆ ಬೆಳೆಯುತ್ತಾ ಹೋಗಲಿ ಎಂದು ಆಶಿಸುತ್ತೇನೆ.

—ರಾಮಮನೋಹರ ಲೋಹಿಯಾ
ಹೈದರಾಬಾದು, 10 ಜುಲೈ 1959

○ ○ ○ ○ ○

ಮ್ಯಾಂಚೆಸ್ಟರ್ ಗಾರ್ಡಿಯನ್‌ನಿಂದ ಬಂದ ಉತ್ತರ:

ಪ್ರಿಯ ಡಾ. ಲೋಹಿಯಾ,

ನಿಮ್ಮ ಜುಲೈ 10ರ ಪತ್ರಕ್ಕಾಗಿ ವಂದನೆಗಳು. ಅದು ನಮ್ಮಲ್ಲಿ ಆಸಕ್ತಿ ಹುಟ್ಟಿಸಿತು. ಅದರಲ್ಲಿನ ಕೆಲವನ್ನು ನಾವೂ ಒಪ್ಪುತ್ತೇವೆ. ಕ್ರಿಕೆಟ್ ಆಡುವ ಅಥವಾ ಆಡದ ಕ್ಷೇತ್ರದಲ್ಲಿ ಬಗ್ಗೆ ವಾದಿಸುವಾಗ ಐದು– ಅವರು ಇಂಗ್ಲಿಷರಿಂದಲಿ ಇಂಡಿಯನ್ನರಿಂದಲಿ–ಇದನ್ನು ಆಡುವುದರಲ್ಲಿ, ನೋಡುವುದರಲ್ಲಿ ಸಂತೋಷಪಡೆಯುತ್ತಾರೆಯೇ ಎಂಬ [illegible], ಈ ಆಧಾರದ ಮೇಲೆ, ಕ್ರಿಕೆಟ್ ಕೇವಲ ವರ್ಗದ ಆಟ ಎಂಬ ನಿಮ್ಮ ಸೂಚನೆಯನ್ನು ಒಪ್ಪುವುದಿಲ್ಲ; ಬೇರೆ ಹೇಗಿದ್ದರೂ ಇಂಗ್ಲೆಂಡ್‌ನಲ್ಲಂತೂ ಅಲ್ಲ. ಅಲ್ಲಿಗೂ ಇಂಡಿಯಾದಲ್ಲಿ ಕ್ರಿಕೆಟ್ ಪ್ರಸಾರಕ್ಕಿರುವ ವಾಸ್ತವಿಕ ಅತಂಕಗಳನ್ನು, ನೀವು ತೋರಿಸಿದಂತೆ, ನಾವು ಅರ್ಥಮಾಡಿಕೊಳ್ಳಬಲ್ಲೆವು. ಹಾಗೇ ಸದ್ಯಕ್ಕೆ ಹೇಳುವುದಾದರೆ, ಈಗ ಇಲ್ಲಿರುವ ಇಂಡಿಯಾದ ಕ್ರಿಕೆಟ್ ತಂಡದ ಪ್ರವಾಸವನ್ನು ನ್ಯಾಯವಾಗಿ ವರದಿ ಮಾಡಲು ನಾವು ಕೈಲಾದ ಎಲ್ಲ ಏರ್ಪಾಟನ್ನೂ ಮಾಡಿದ್ದೇವೆ.

—ಮ್ಯಾಂಚೆಸ್ಟರ್ ಗಾರ್ಡಿಯನ್
20 ಜುಲೈ 1959

○ ○ ○ ○ ○ ○ ○

ಅನಂತರ ಈ ಪತ್ರವನ್ನು ಡಾ. ಲೋಹಿಯಾ ಅವರು 'ಡೇಲಿ ಮಿರರ್' ಪತ್ರಿಕೆಗೆ ಕಳಿಸಿದರು. ಅವರೂ ಅದನ್ನು ಪ್ರಕಟಿಸಲಾರೆವೆಂದು ಬರೆದರು 'ಡೇಲಿ ಮಿರರ್' ಪತ್ರಿಕೆಯಿಂದ ಬಂದ ಪತ್ರ:

ಪ್ರಿಯ ಡಾ. ಲೋಹಿಯಾ,

'ಮ್ಯಾಂಚೆಸ್ಟರ್ ಗಾರ್ಡಿಯನ್'ನಲ್ಲಿ ಪ್ರಕಟಿಸಲೆಂದು ಮೊದಲು ಬರೆದ ಪತ್ರವನ್ನು ನಮಗೆ ನೋಡಲು ದೊರಕಿಸಿದ್ದಕ್ಕೆ ವಂದನೆಗಳು. ಆದರೆ ಅದನ್ನು ನಮ್ಮ ಪತ್ರಿಕೆಯಲ್ಲಿ ಬಳಸಲು ಅದು ತೀರಾ ಉದ್ದವಾಯಿತೆಂಬುದೇ ನಮ್ಮ ಹೆದರಿಕೆ. 'ಡೇಲಿ ಮಿರರ್'ನಲ್ಲಿ ಪ್ರಕಟವಾಗುವ ಪತ್ರಗಳ ಸರಾಸರಿ ಉದ್ದವನ್ನು ನೀವು ಗಮನಿಸಿದರೆ ನಮ್ಮ ತೊಂದರೆ ನಿಮಗೆ ಅರ್ಥವಾಗಬಹುದು. ಮತ್ತು ಅದು ಕತ್ತರಿಸಿ ಒಂದೆರಡು ಸಾಲು ಗಳಿಸಿ ಪ್ರಕಟಿಸಬಹುದಾದಂಥ ರೀತಿಯ ಪತ್ರವೂ ಅಲ್ಲ.

ಹಾಗೆಯೇ ನಾವು ಅದನ್ನು ಹಿಂದಕ್ಕೆ ಕಳುಹಿಸಿದ್ದೇವೆ, ಬೇರೆ ಕಡೆ ಪ್ರಕಟಣೆಗೆ ಕಳುಹಿಸುವುದಿದ್ದರೆ ಅನುಕೂಲವಾಗಲಿ ಎಂದು.

—ಜೆ. ಎಚ್. ಗ್ರೇ
ಲೆಟರ್ ಸಂಪಾದಕ,
ಡೇಲಿ ಮಿರರ್
—ಆಗಸ್ಟ್ 6, 1959

—ಡಾ. ರಾಮಮನೋಹರ ಲೋಹಿಯಾ

ಈ ದೇಶದ ಜನತೆಯನ್ನು, ಮುಖ್ಯವಾಗಿ ಸಾಮಾನ್ಯರನ್ನು ಕಾಡಿದ ಸಮಸ್ಯೆಗಳನ್ನು ಡಾ. ರಾಮ ಮನೋಹರ ಲೋಹಿಯಾ ಅವರು ಧಾರಣೀಯ ಬದುಕಿನ ಪ್ರತಿ ಹಂತಗಳನ್ನೂ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಅವರು ಹಿಂದೆ 'ಕ್ರಿಕೆಟ್ ಆಟ ಮತ್ತು ಇಂಗ್ಲಿಷ್ ಭಾಷೆ'ಗೆ ಸಂಬಂಧಿಸಿದಂತೆ ಲಂಡನ್‌ನ ಪತ್ರಿಕೆಯೊಂದಕ್ಕೆ ಬರೆದ ಪತ್ರವು ತಿರಸ್ಕೃತಗೊಂಡಿತ್ತು. ಈ ಪತ್ರ ಈಗಲೂ ಎಂದಿಗೂ ಪ್ರಸ್ತುತವೆನಿಸುವಂತಹದ್ದು. ಇಲ್ಲಿ ಅದನ್ನು ನೀಡುತ್ತಿದ್ದೇವೆ. ಈ ಪತ್ರದಲ್ಲಿ ಲೋಹಿಯಾ ತಮ್ಮ ವಿಚಾರವನ್ನು ಎಷ್ಟೊಂದು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆಂಬುದನ್ನು ಗಮನಿಸಬಹುದಾಗಿದೆ.

ಗಾಂಧಿ ನೆನಪು ಅರ್ಥಪೂರ್ಣ

ಪ್ರಿಯರೆ,

ಜಗತ್ತಿನ ಇತಿಹಾಸದಲ್ಲಿ ಕ್ರಿಸ್ತ, ಬುದ್ಧರಷ್ಟೇ ಅಮರರಾಗಿ ಉಳಿದಿರುವ ಗಾಂಧಿಯವರನ್ನು ಅವರು ಹುತಾತ್ಮರಾದ ಜನವರಿ 30ರ ದಿನದಂದು "ಗಾಂಧಿ ಹೇಳಿದ ಸರಳತೆ ಆಗಲ್ಲಿದ" ಎಂಬ ಲೇಖನದ ಮೂಲಕ ನೆನಪಿಸಿಕೊಂಡದ್ದು ನಿಜಕ್ಕೂ ಅರ್ಥಪೂರ್ಣ ಮತ್ತು ಶ್ಲಾಘನೀಯ.

"ಸಮುದಾಯದಿಂದ ಹುಟ್ಟಿದ ಜನಾಂಗ ದ್ವೇಷ ಹಾಗೂ ಹರಿಯುವ ರಕ್ತ ದಿನ ದಿನವೂ ಒಳಿತು ಮಾಡಲಾರದ ಮಾನವೀಯ ಶಕ್ತಿಗಳನ್ನು ಬೆಳೆಸುವುದಕ್ಕಾಗಿ ಹಾದಿಯನ್ನು ತೋರಿದವರು ಗಾಂಧಿ' ಎಂಬ ಮಾತನ್ನು ನೀವು ಬಿತ್ತಿ ಬೆಳೆಸುವುದು [illegible] ಪೂರ್ಣ [illegible].

ಜಗತ್ತಿನಲ್ಲಿ ಗಾಂಧಿಯ ಜನಾಂಗ ಈ ಸತ್ಯವನ್ನು ಮನಗಂಡಿದ್ದರೆ ಇಷ್ಟೊಂದು ನರಮೇಧ, ಇರಾನ್-ಇರಾಕ್ ಕದನ, ಶ್ರೀಲಂಕಾದ ಜನಾಂಗೀಯ ಘರ್ಷಣೆ, ಪಂಜಾಬ್ ಭಯೋತ್ಪಾದಕರಿಂದಾಗಿ ಸಾವುನೋವು ಸಮಸ್ಯೆಗಳು ಇರುತ್ತಿತ್ತೆ?

ದಿನರಾಜ್ ಶೆಟ್ಟಿ
ಸೋಮವಾರ ಪೇಟೆ.

ಅಭಿನಂದನಾರ್ಹ

ಪ್ರಿಯರೆ,

ಕಳೆದ ತಿಂಗಳು ಮುಲ್ಕಿಯಲ್ಲಿ ನಡೆದ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಬಗ್ಗೆ ವಿವರವಾದ ವರದಿ ನೀಡಿ ನಮ್ಮಂಥ ಸಾಹಿತ್ಯಾಸಕ್ತರಿಗೆ ತೃಪ್ತಿ ನೀಡಿ ಉಪಕಾರ ಮಾಡಿದ್ದೀರಿ.

ಅದೇ ರೀತಿ ಇತ್ತೀಚೆಗೆ ಉಡುಪಿಯಲ್ಲಿ ನಡೆದ ಮಕ್ಕಳ ಸಮ್ಮೇಳನದ ಬಗ್ಗೆ ಕೂಡಾ ಅಷ್ಟೇ ಪ್ರಾಶಸ್ತ್ಯ ನೀಡಿರುವುದು ನಿಜಕ್ಕೂ ಅಭಿನಂದನಾರ್ಹ.

ವಿಮಲ ದಿನೇಶ್
ಮೂಡಿಗೆರೆ.

ತಾರುಣ್ಯದ ಚೆಲ್ಲಾಟಕ್ಕೆ ಕಡಿವಾಣ ಇರಲಿ

ಪ್ರಿಯರೆ,

'ಕಾಲೇಜು ವಾರ್ಷಿಕೋತ್ಸವ ಮತ್ತು ಅಶ್ಲೀಲ ಪ್ರಕರಣ' ಎಂಬ ತಲೆಬರಹದಲ್ಲಿ 'ಮುಂಗಾರು'ವಿನ (4-2-86) ಜನದನಿ ವಿಭಾಗದಲ್ಲಿ ಪ್ರಕಟಗೊಂಡ ಪತ್ರ ಓದಿದಾಗ ನಿಜಕ್ಕೂ ನನ್ನ ಮನಸ್ಸಿಗೆ ಖೇದವಾಯಿತು. ಛೇ, ಛೇ, ಹೀಗಾಗಬಾರದು. ವಿದ್ಯಾರ್ಥಿ ಜೀವನದ ಸುಂದರ ಕ್ಷಣಗಳು ಕ್ಷಣಿಕ, ನೆನಪು ಜೇನಿನಂತೆ ಸಿಹಿ ಸುಖ ಕೊಡುವಂತಿರಬೇಕು, ಕಟ್ಟ ಕನಸಾಗಿಸಿಕೊಳ್ಳಬಾರದು.

ಹೌದು, ನೆನಪಾಗುತ್ತಿದೆ... ಆ ಹರೆಯದ ದಿನಗಳು... ಅಂದಿನ ಹಳ್ಳಿಯಿಂದ ಹೊರಟ ನವ ಆಕಾಂಕ್ಷೆಗಳು, ಗೆಳತಿಯರ ಹೊಸ ಮೋಹಕ ನಗುವಿನ ಅರಳು ಎಳೆಗೆ ಪುಳಕಗೊಳ್ಳುವಿಕೆಗಳು, ಅಭಿಮಾನದ ಕಣ್ಣುಗಳನ್ನು ತನ್ನತ್ತ ಸೆಳೆದುಕೊಳ್ಳಲು ಹಾಕಿ ಮೈದಾನದಲ್ಲಿ ಆಟಯವನ್ನೂ ಲೆಕ್ಕಿಸದೆ ಗೋಲು ಹೊಡೆಯಲಿಕ್ಕಾಗಿ ಮುನ್ನುಗ್ಗುತ್ತಿದ್ದ ರೋಮಾಂಚನಕಾರಿ ಕ್ಷಣಗಳು... ಎಲ್ಲ ನೆನಪಾಗುತ್ತದೆ.

ನಂತರದ ಕಾಲೇಜು ದಿನಗಳೋ... ನಗರದಲ್ಲೇ ಬೇರಿಳಿಸಿಕೊಂಡಿರುವ ನಾಜೂಕಯ್ಯಗಳ, 'ಕಾನ್ವೆಂಟ್'ಗಳ ಎದುರು ಆರಂಭದ ಹಂತದಲ್ಲಿ ಕೀಳರಿಮೆಯುಳ್ಳಿ ಮುದುಡಿದರೂ ನಂತರ ಸಿಡಿಯುವ, ಅರಳುವ ಹಂತಗಳು... ಎಲ್ಲರನ್ನು ಮೆಟ್ಟಿನಿಂತು ಮೇಲರಿಮೆ ಸಾಧಿಸಿದ ಕ್ಷಣಗಳು...ಚುನಾವಣೆಗಳು, ಜಾತೀಯತೆಗಳ ಗಾಢ ಅನುಭವಗಳು, ವಾಸ್ತವ ರಾಜಕೀಯದ ಮೊದಲ ಪಾಠಗಳು, ಹೊಡೆದಾಟಗಳು, ಎಲ್ಲವೂ ನೆನಪಾಗುತ್ತದೆ.

ಇನ್ನೂ ಮುಂದೆ...ಯುನಿವರ್ಸಿಟಿ ಕ್ಯಾಂಪಸ್‌ಗಳ ಕೆಂಪು ಗುಲ್‌ಮೊಹರ್ ಮರದಡಿಯಲ್ಲಿ ಚೆಂದದ ಗುಡುಗಿಯರೊಡನೆ ಸುಂದರ ಕವನಗಳ ಬಗ್ಗೆ ಚರ್ಚೆ... ಮುಂದೆ ದಿನಕಳೆದಂತೆ... ಕ್ಯಾಂಟಿನ್‌ಗಳಲ್ಲಿ ಸಂಜೆಯ ಬಾರುಗಳಲ್ಲಿ ಮಾರ್ಕ್ಸ್, ಮಾವೊ ಬಗ್ಗೆ ಚರ್ಚೆ, ಕುರುಚಲು ಗಡ್ಡಗಳ ನಡುವೆ 'ಕ್ರಾಂತಿ'ಯ ನಗುಗಳ ವಿನಿಮಯ...... ಹೀಗೆ ದಿನಗಳು ಕಳೆಯುತ್ತಾ ಹೋಗುತ್ತವೆ.

ಅನಿಸಿಕೆ

ಇದು ಪ್ರತಿಯೊಬ್ಬನಲ್ಲೂ ಇರುತ್ತೆ. ಅಧಿಕವಾಗಿ, ಸಾಮಾಜಿಕವಾಗಿ ಅವನು ಯಾವುದೇ ಸ್ತರದಲ್ಲಿರಲಿ, ಆಯಾ ಸ್ತರಗಳಿಗನುಗುಣವಾಗಿ ಆ ಕ್ರಿಯೆಗಳಿರುತ್ತೆ. ಆದರೆ ತೃಪ್ತಿ ಒಂದೇ ಅಲ್ಲವೇ. 'ಇಲ್ಲ' ಎನ್ನುವ ಆತ್ಮವಂಚನೆ ಬಹುಶಃ ಯಾರೂ ಮಾಡಿಕೊಳ್ಳಲಿಕ್ಕಿಲ್ಲ.

ಒಂದು ದಿನ ಪ್ರಮೇಗಳ ಸತ್ಯ ಅರಿವಾಗುತ್ತೆ. ವಾಸ್ತವಿಕ ಬದುಕಿನೊಳಗೆ ಕಾಲಿಟ್ಟಾಗ ಹಿಂದಿನ ಪುಳಕ, ಮುಗ್ಧತೆ, ರೋಮಾಂಚನಗಳಿರೋಲ್ಲ. ವ್ಯಾವಹಾರಿಕ ವಾಸ್ತವಿಕ ಪ್ರಜ್ಞೆ ಮೂಡಿರುತ್ತೆ. ಇದು ಅನಿವಾರ್ಯ ಕೂಡ. ಈ ವ್ಯಾವಹಾರಿಕ ಬದುಕಿನ ಯಶಸ್ಸು ಆಯಾ ವ್ಯಕ್ತಿಯ ನಿಜ ಸಾಮರ್ಥ್ಯದೊಡನೆ ಆರ್ಥಿಕ ಸ್ಥಿತಿ, ಜಾತಿಗಳನ್ನು ಅವಲಂಬಿಸಿರುವ ದುರಂತ ಕೂಡಾ ಈ ಇಂಡಿಯಾದಲ್ಲಿದೆ ಎಂದರೆ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ನನಗನ್ನಿಸುತ್ತೆ, ಹರೆಯದ ದಿನಗಳಲ್ಲಿ ವಿದ್ಯಾರ್ಥಿಗಳೆಲ್ಲಾ ಅಪ್ರಬುದ್ಧರೇ. ಅಂತವರನ್ನೂ ಸರಿ ದಿಕ್ಕಿನಲ್ಲಿ ಕೊಂಡೊಯ್ಯಲು ಅಧ್ಯಾಪಕರು ಕಿಂಚಿತ್ತಾದರೂ ಯತ್ನಿಸಬಹುದು. ಪೂರ್ಣವಾಗಿ ವಿದ್ಯಾರ್ಥಿಗಳ ಅಭಿವ್ಯಕ್ತಿಸ್ವಾತಂತ್ರ್ಯದ ಮೇಲೆಯೇ ಬಲವಂತದ ಹೊರೆ ಹೇರುವುದು ತಪ್ಪು. ಆದರೆ ವಿದ್ಯಾರ್ಥಿಗಳ ಭಾವನೆಗಳ ಮುಗ್ಧತೆ ಮತ್ತು ಅಪಕ್ವತೆಗಳನ್ನೇ ಮುಲ್ಕಿ ಕಿರಿಯ ಕಾಲೇಜಿನಲ್ಲಿ ನಡೆದಂತೆ ದುರುಪಯೋಗ ಪಡಿಸಿಕೊಂಡವರ ವಿರುದ್ಧ ಸಾರ್ವಜನಿಕರೇ ಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇದೆ.

ಇನ್ನೊಂದು ವಿಷಯ:, ಹರೆಯದ ದಿನಗಳಲ್ಲಿ ಮಾನಸಿಕವಾಗಿ, ದೈಹಿಕವಾಗಿ ಆರೋಗ್ಯವಾಗಿರುವ ಪ್ರತಿ ಹೆಣ್ಣು ಮತ್ತು ಗಂಡಿಗೆ ಆಯಾ ವಯೋಧರ್ಮಕ್ಕೆ ಸರಿಯಾದ ಗುಣಗಳಿರುತ್ತೆ. ಆ ಭಾವನೆಗಳು ಮನುಷ್ಯನಾಳದಲ್ಲೂ ಇಲ್ಲ ಎನ್ನುವುದು ಸೋಗಲಾಡಿತನವಾಗುತ್ತೆ. ಅಷ್ಟೆ ಆದರೆ ಈ ತಾರುಣ್ಯದ ದೌರ್ಬಲ್ಯಗಳನ್ನು ನಿಯಂತ್ರಿಸಿಕೊಳ್ಳುವುದು ಕೂಡಾ ಅಷ್ಟೇ ಅನಿವಾರ್ಯ ಮತ್ತು ಅಗತ್ಯವಾಗಿದೆ.

ಆ ಭಾವನೆಗಳಿಗೆ ಕಡಿವಾಣವಿಲ್ಲದಿದ್ದರೆ ಅದು ಮುಲ್ಕಿ ಕಿರಿಯ ಕಾಲೇಜಿನಲ್ಲಿ ನಡೆದಂತೆ ವಿಕೃತ ಸ್ವರೂಪ ತಾಳುತ್ತದೆ. ಹಾಗಾಗಬಾರದು. ಇದರಿಂದ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಕೂಡಾ ವಿಕೃತಗೊಳ್ಳುತ್ತೆ ಎನ್ನೋದರಲ್ಲೂ ಎರಡು ಮಾತಿಲ್ಲ. ಆ 'ಕಡಿವಾಣ'ವೇ ನಿಜವಾದ ನಿರ್ಮಾಲ. ಸಂತೋಷದ ಬದುಕಿಗೆ ಪೂರಕ ಎನ್ನುವ ಸತ್ಯ ನಮ್ಮ ವಿದ್ಯಾರ್ಥಿಗಳಿಗೆ ಅಗಬೇಕಿದೆ.

—'ಪೂರ್ಣಿ'
ಹಾಲುಗುಂದ

ರೇಶ್ಮೆ ಇಲಾಖೆಯ ಹುದ್ದೆಗೆ ಈ ಸತಾಯಿಸುವಿಕೆ ಏಕೆ

ಪ್ರಿಯರೆ,

ಕರ್ನಾಟಕ ಸರಕಾರದ ರೇಷ್ಮೆ ಇಲಾಖೆ ಎರಡು ವರ್ಷಗಳ ಹಿಂದೆ ರೇಷ್ಮೆ ಕೃಷಿ ಪ್ರವರ್ತಕರ ಹುದ್ದೆಗೆ ಅರ್ಜಿ ಕರೆದಿತ್ತು. ಅರ್ಜಿ ಕರೆದ ನಂತರ ಬಹಳ ತಡವಾಗಿ ಸಂದರ್ಶನದ ವ್ಯವಸ್ಥೆ ಮಾಡಿತು. ಕಳೆದ ವರ್ಷದಲ್ಲಿ ರಾಜ್ಯದ ಕೆಲವು ಕೇಂದ್ರ ಸ್ಥಳದಲ್ಲಿ ಸಂದರ್ಶನ ನಡೆಸಲು ಆಯ್ಕೆ ಸಮಿತಿಯ ಮುಂದೆ ನಿರುದ್ಯೋಗಿ ಅಭ್ಯರ್ಥಿಗಳು ಹಾಜರಾಗುವಂತೆ ತಿಳಿಸಿತು. ಸಂದರ್ಶನವನ್ನು ನಿಗದಿತ ದಿನದಲ್ಲಿ ಮಾಡದೆ ಅನಿವಾರ್ಯ ಕಾರಣಗಳಿಂದ ಮುಂದೂಡಿತು. ಆ ಸಂದರ್ಭದಲ್ಲೆಲ್ಲಾ ಎಷ್ಟೋ ಮಂದಿ ಬಡ ಕುಟುಂಬದ ನಿರುದ್ಯೋಗಿಗಳು ರಾಜ್ಯದ ನಾನಾ ಕಡೆಗಳಿಂದ ಬಂದು ಸಂದರ್ಶನ ನಡೆಯದೆ ನಿರಾಶೆಗೊಂಡು ಹಿಂತಿರುಗಿದರು. ಈ ವೇಳೆಯಲ್ಲಿ ಬಡ ಅಭ್ಯರ್ಥಿಗಳಿಗಾದ ನೋವನ್ನು ಯಾರು ಗಮನಿಸಬೇಕಿತ್ತು.

ಸಂದರ್ಶನಕ್ಕಾಗಿಯೇ ಸಾಕಷ್ಟು ಸತಾಯಿಸಿದ ರೇಷ್ಮೆ ಇಲಾಖೆಯವರು ಆಯ್ಕೆ ಆದ ಅಭ್ಯರ್ಥಿಗಳಿಗೆಲ್ಲ ಹುದ್ದೆಗಳನ್ನು ಹಂಚುವಾಗ ಎಷ್ಟೊಂದು ರೀತಿಯಲ್ಲಿ ಸತಾಯಿಸಬಹುದು ಎಂಬ ಸಂಶಯ ಮುಂದೆ ಅವರಿಂದಾದ ಕಾರ್ಯ ವೈಖರಿಯಿಂದ ಗೊತ್ತಾಗುತ್ತಿದೆ. ಇಲಾಖೆಯ ಆಯ್ಕೆ ಸಮಿತಿಯವರು ರೇಷ್ಮೆ ಕೃಷಿ ಪ್ರವರ್ತಕರ ಹುದ್ದೆಗೆ ಆಯ್ಕೆ ಆದವರ ಪಟ್ಟಿಯನ್ನು ಕಳೆದ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಮಾಡಿತು. ಆನಂತರ ಆಯ್ಕೆಗೊಂಡವರಿಗೆ, ನವೆಂಬರ್ 26ರ ಒಳಗೆ ತರಬೇತಿಗೆ ಹಾಜರಾಗಬೇಕೆಂದು ದಿನವನ್ನು ನಿಗದಿ ಮಾಡಲಾಯಿತು. ಇಲ್ಲಿ ಇಲಾಖೆಯವರು ರೇಷ್ಮೆ ಪ್ರವರ್ತಕರ ಹುದ್ದೆಗೆ ಅರ್ಜಿ ಕರೆದು, ಸಂದರ್ಶನ ನಡೆಸಲು ಮತ್ತು ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಎರಡುವರ್ಷಕ್ಕೂ ಹೆಚ್ಚು ಕಾಲ ತೆಗೆದುಕೊಂಡರು.

ಈ ಎರಡು ವರ್ಷದ ಕಾಲದಲ್ಲಿ ಎಷ್ಟು ಮಂದಿ ನಿರುದ್ಯೋಗಿಗಳು ರೇಷ್ಮೆ ಇಲಾಖೆಯವರ ಮೇಲಿನ ಆಸೆಯನ್ನು ಬಿಟ್ಟು ಬೇರೆ ಉದ್ಯೋಗವನ್ನು ಅವಲಂಬಿಸುವ ಹಾಗಾಯಿತು. ಹಾಗಾಗಿ ಆಯ್ಕೆ ಸಮಿತಿಯವರು ಆಯ್ಕೆ ಮಾಡಿರುವ ಅಭ್ಯರ್ಥಿಗಳ ಪಟ್ಟಿಯಲ್ಲಿ ತುಂಬಾ ಮಂದಿ ಹುದ್ದೆಯನ್ನು ಪಡೆಯಲಿಲ್ಲ. ಅದರಿಂದ ತೆರವಾದ ಸಂಖ್ಯೆಯ ಹುದ್ದೆಗಳು ಖಾಲಿ ಇವೆ. ಅದನ್ನು ಭರ್ತಿ ಮಾಡುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಕಾರ್ಯೋನ್ಮುಖರಾಗುವುದಿಲ್ಲವೆಂದು ಬೆಂಗಳೂರಿನ ರೇಷ್ಮೆ ಇಲಾಖೆಯ ಬಲ್ಲ ಮೂಲಗಳಿಂದ ನಮಗೆ ತಿಳಿದಿದೆ.

ರೇಷ್ಮೆ ಇಲಾಖೆಯಲ್ಲಿ ರೇಷ್ಮೆ ಕೃಷಿ ಪ್ರವರ್ತಕರ ಹುದ್ದೆಗೆ ಆಯ್ಕೆಯಾಗಿ, ನಿಗದಿಪಡಿಸಿದ ದಿನಾಂಕ ನವೆಂಬರ್ 26,1986 ರ ಒಳಗೆ ಹುದ್ದೆಗೆ ಸೇರ್ಪಡೆಯಾಗದೇ ಇರುವವರ ಮತ್ತು ಅವರಿಂದ ತೆರವಾದ ಖಾಲಿ ಸ್ಥಾನಗಳಿಗೆ ಕೂಡಲೇ ನಿರುದ್ಯೋಗಿಗಳನ್ನು ಆಯ್ಕೆ ಮಾಡಿ ನೇಮಿಸಬೇಕೆಂದು ಪ್ರಾರ್ಥಿಸುತ್ತಿದ್ದೇನೆ. ಅರ್ಹತೆಯ ಆಧಾರದ ಮೇಲೆ ಮುಂದಿನ ಪಟ್ಟಿಯನ್ನು ತಯಾರಿಸಿ ಕೂಡಲೇ ನೊಂದ ಬಡ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟು ಉಪಕಾರ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ

ನೊಂದ ನಿರುದ್ಯೋಗಿಗಳು
ಮೈಸೂರು

ಓದುಗರ ಓಲೆ

ನೀರು ಪೂರೈಕೆ ಸರಿಯಾಗಿಲ್ಲ

ಪ್ರಿಯರೆ,

ಕುಳಾಯಿ–ಹೊನ್ನೆಕಟ್ಟೆ ಪರಿಸರದ ನಾಗರಿಕರು ಕಳೆದ ಎರಡು ತಿಂಗಳಿಂದ ಕುಡಿಯುವ ನೀರಿಗಾಗಿ ದಿನಾಲೂ ಪಡುತ್ತಿರುವ ಪಾಡು ಹೇಳತೀರದು.

ಈ ಪರಿಸರ ಎತ್ತರದಲ್ಲಿರುವುದರಿಂದ ಬಾವಿ ನೀರಿಗೂ ಕಷ್ಟವಾಗಿದೆ. ನಳ್ಳಿ ನೀರು ಪೂರೈಕೆ ವ್ಯವಸ್ಥೆಯಂತೂ ತೀರಾ ಕೆಟ್ಟುಹೋಗಿದೆ. ಸಾರ್ವಜನಿಕ ನಳ್ಳಿಗಳಲ್ಲಿ ನೀರು ಸರಾಗವಾಗಿ ಬರುತ್ತಿದ್ದರೂ ಖಾಸಗಿ ನಳ್ಳಿಗಳಿಗೆ ನೀರು ಪೂರೈಕೆ ಸರಿಯಾಗಿ ಆಗುತ್ತಿಲ್ಲ.

ಕುಳಾಯಿ —ನೊಂದ ಗ್ರಾಹಕರು

ಉತ್ಪಾದನಾ ವೆಚ್ಚ ಕಡಿಮೆ ಆಗಬೇಕು

ಪ್ರಿಯರೆ,

ಕೃಷಿ ಉತ್ಪನ್ನಗಳಿಗೆ ಬೆಲೆ ಹೆಚ್ಚು ಮಾಡುವುದೆಂದರೆ ಕೊಂಡು ಬಳಸುವ ಕೋಟ್ಯಾಂತರ ಬಡವರ ಬವಣೆಯನ್ನು ಜಾಸ್ತಿ ಮಾಡಿದ ಹಾಗೆ. ಕೆ. ವಿ. ರಾವ್ ಅವರು ಸೂಚಿಸಿರುವಂತೆ ಸರಕಾರ ಸಬ್ಸಿಡಿ ನೀಡಿ ರೈತರಿಂದ ಕೊಂಡು ಬಳಕೆದಾರರಿಗೆ ಅಗ್ಗದ ದರದಲ್ಲಿ ಮಾರುವುದರಿಂದ ಸರಕಾರಕ್ಕೆ ಇದೊಂದು ಹೊರೆಯಾಗಿ ಅಭಿವೃದ್ಧಿ ಕಾರ್ಯಗಳಿಗೆ ಅಗತ್ಯವಾದ ದುಡ್ಡು ಸಾಲದೆ ಹೋಗಬಹುದು. ಅಲ್ಲದೆ ಸಬ್ಸಿಡಿ ನೀಡುವುದರಿಂದಾಗಲೀ ಬೆಲೆಹೆಚ್ಚು ಮಾಡುವುದರಿಂದಾಗಲೀ ಸಿಗುವ ಪರಿಹಾರ ತಾತ್ಕಾಲಿಕ. ಯಾಕೆಂದರೆ ಬದುಕು ವರ್ಷ ವರ್ಷವೂ ದುಬಾರಿಯಾಗುತ್ತಾ ಹೋಗುತ್ತಿರುತ್ತದೆ. ಮತ್ತು ಇದರೊಂದಿಗೆ ಸಾಮ್ಯವಿರಿಸಿಕೊಳ್ಳಲು ರೈತರಿಗೆ ಸಬ್ಸಿಡಿ [illegible] ಉತ್ಪನ್ನಗಳ ಕೊಳ್ಳುವ ಬೆಲೆಯನ್ನು ಏರಿಸುತ್ತಾ ಹೋಗಬೇಕಾಗುತ್ತದೆ. ಮತ್ತು ಈ ಸರಪಳಿಯಿಂದ ಬಿಡುಗಡೆಯೇ ಇರುವುದಿಲ್ಲ.

ಸಬ್ಸಿಡಿ ನೀಡುವ ಅಥವಾ ಬೆಲೆ ಹೆಚ್ಚು ಮಾಡುವ ಪುನರಾವರ್ತಿತ ಕ್ರಿಯೆಗಳನ್ನು ಮಾಡುವ ಬದಲು ಸರಕಾರ ರೈತರ ಉತ್ಪಾದನಾ ವೆಚ್ಚ ಕಡಿಮೆಯಾಗುವಂತೆ ಸಹಾಯ ಮಾಡಿದರೆ, ಕ್ರಮ ಕೈಗೊಂಡರೆ ಕೃಷಿಕ ನಷ್ಟದಲ್ಲಿ ಬೀಳುವ ಭಯ ದೂರವಾಗುತ್ತದೆ ಮಾತ್ರವಲ್ಲದೆ ಬಳಕೆದಾರನ ಕಿಸೆಗೂ ಕತ್ತರಿ ಬೀಳದೆ ಸುಲಭ ದರದಲ್ಲಿ ಕೃಷಿ ಉತ್ಪನ್ನಗಳು ಲಭ್ಯವಾಗುತ್ತವೆ.

ರೈತರ ಸಮಸ್ಯೆಗೆ ಪರಿಹಾರವಿದೆಯೇ ಎನ್ನುವುದಕ್ಕಿಂತಲೂ ಪರಿಹಾರ ಕಂಡು ಹಿಡಿಯಲು ಸರಕಾರಕ್ಕೆ ಮನಸ್ಸಿದೆಯೇ ಎನ್ನುವುದು ಪ್ರಸ್ತುತ ಕಾಡುತ್ತಿರುವ ಪ್ರಶ್ನೆ...?

—ಓರ್ವ ಕೃಷಿ ಉತ್ಪನ್ನ ಗ್ರಾಹಕ
ಕಂಕನಾಡಿ.

'ನೈಜ ಕಮ್ಯುನಿಸ್ಟರ' ಬಗ್ಗೆ ಹೀಗೊಂದು ಸ್ಪಷ್ಟೀಕರಣ

ಪ್ರಿಯರೆ,

ಸಿ. ಪಿ. ಐ ಮತ್ತು ಸಿ. ಪಿ. ಎಂ ಕಾರ್ಯಕರ್ತರಲ್ಲಿ ಕೆಲವರು ಅಯ್ಯಪ್ಪ ಪೂಜೆ ನಡೆಸಿದುದರ ಬಗ್ಗೆ ಕುಂಜತ್ತೂರಿನ ಕೃಷ್ಣಪ್ಪ ಮತ್ತು ಮಂಜೇಶ್ವರದ ಬಿ. ಮಾಧವ ಅವರುಗಳು ಪರಸ್ಪರ ದೋಷಾರೋಪಗಳನ್ನು ಮುಂಗಾರು ಪತ್ರಿಕೆಯ 'ಅನಿಸಿಕೆ' ವಿಭಾಗದಲ್ಲಿ ನಡೆಸಿದ ಹಿನ್ನೆಲೆಯಲ್ಲಿ ನಾನು ಜನವರಿ 26ರ ಮುಂಗಾರುವಿನ 'ಅನಿಸಿಕೆ' ವಿಭಾಗದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ಜನವರಿ 31ರಂದು ಮಾಧವ ಅವರು ಸ್ಪಷ್ಟೀಕರಣ ನೀಡಿದ್ದಾರೆ.

"ನೈಜ ಕಮ್ಯುನಿಸ್ಟರೆಂದಾಕೊಂಡು ಬಂಡವಾಳ ಶಾಹಿಗಳೊಡನೆ ಶಾಮೀಲಾಗಿ, ಪ. ಬಂಗಾಳದಲ್ಲಿ ನೂರಾರು ಮಾರ್ಕ್ಸ್‌ವಾದಿ ಕಾರ್ಯಕರ್ತರನ್ನು ಕೊಲೆಗೈದ ಕರಾಳ ದಿನಗಳು ನಮ್ಮ ಅನುಭವಗಳಲ್ಲಿವೆ" ಎಂದಿದ್ದಾರೆ.

ಪ. ಬಂಗಾಳದ ಕಮ್ಯುನಿಸ್ಟ್ ಮುಖ್ಯಮಂತ್ರಿಗಳು ತನ್ನ ಮಗನಿಗೆ 50 ಲಕ್ಷ ರೂ. ವೆಚ್ಚದಲ್ಲಿ ಬಿಸ್ಕಟ್ ಕಾರ್ಖಾನೆಯೊಂದನ್ನು ನಿರ್ಮಿಸಿ ಕೊಡುವಲ್ಲಿ ಬಂಡವಾಳಶಾಹಿಗಳೊಡನೆ ಶಾಮೀಲಾದವರು ನೈಜ ಕಮ್ಯುನಿಸ್ಟರೆಂದು ಕರೆಯಲಾಗಿರುವ 'ನಕ್ಸಲೈಟರೇ'?

ಚುನಾವಣೆಗಳಲ್ಲಿ ಬಿ.ಜೆ.ಪಿ. ಗಳಂತಹ ಎಲಬಂಧಿಯರೊಡನೆ ಗ್ರಾಮೀಣ ಮಟ್ಟಗಳಲ್ಲೂ ಸಮಾಲೋಚನೆ ನಡೆಸುವವರು 'ನೈಜ ಕಮ್ಯುನಿಸ್ಟರೇ'?

ತಮ್ಮ ಪಕ್ಷಗಳ ಮೇಲ್ಪಟ್ಟದ ನಾಯಕತ್ವದಲ್ಲಿ ಮೇಲ್ಜಾತಿಯವರಿಗೊಪ್ಪಿಸಿ ಆರಾಮವಾಗಿ ಕುಳಿತ ಮುಗ್ಧ ಕೂಲಿಯರ ಗುಂಪು ಈ 'ನೈಜ ಕಮ್ಯುನಿಸ್ಟರದೇ'?

ಸ್ವಾಮಿ, ನೈಜ ಕಮ್ಯುನಿಸ್ಟರೆಂದು ನೀವು ಕರೆಯುವ ನಕ್ಸಲೀಯರು ಈ ಇಂಡಿಯಾದ ಧಾರ್ಮಿಕ ಮೌಢ್ಯತೆಗಳು, ಪಾಳೆಯಗಾರಿ ಸ್ಥಿತಿಗಳನ್ನು ವಿರೋಧಿಸುವಷ್ಟೇ ಸತ್ಯವಾಗಿ ರಷ್ಯಾ, ಅಮೆರಿಕಾ, ಚೀನಾಗಳ ಸಾಮ್ರಾಜ್ಯ ಶಾಹಿ ಧೋರಣೆಗಳನ್ನೂ ವಿರೋಧಿಸುತ್ತಾರೆ ಎಂಬ ಸತ್ಯವನ್ನೂ ತಿಳಿದುಕೊಳ್ಳಿ. ಸೈಬೀರಿಯಾದಲ್ಲಿ ಚಳಿ ಎಂದು ಮಂಜೇಶ್ವರದಲ್ಲಿ ಸ್ವೆಟರ್ ಧರಿಸಿ ನಡುಗುತ್ತಾ, ಕೂರುವವರಲ್ಲ ನಕ್ಸಲೀಯರು.

ತೆಲಂಗಾಣ ಸಶಸ್ತ್ರ ಹೋರಾಟದ ಪರಿಣಾಮ ಏನು ಎಂದು ಕೇಳಿದ್ದೀರಿ, ಇಂದು ನೀವು ಆಂಧ್ರ ಪ್ರದೇಶದ ಹಳ್ಳಿಗಳಿಗೆ ಹೋಗಿ ನೋಡಿದರೆ ಇದಕ್ಕೆ ಉತ್ತರ ಸಿಗಬಹುದು. ಭೂಮಾಲೀಕರ ರೌರವ ಶೋಷಣೆಗೆ ಸಿಲುಕಿ ಹಲ ತಲಾಂತರಗಳಿಂದ ನಾಯಿಗಳಂತೆ ಬದುಕುತ್ತಿದ್ದ ಜೀತದಾಳುಗಳು ಇಂದು ಅಲ್ಲಿರುವ "ರೈತ ಕೂಲಿ ಸಂಘ"ಗಳ ನೆರವಿನಿಂದ ತಲೆ ಎತ್ತಿ ನಡೆಯುತ್ತಿದ್ದಾರೆ. ಉಸಿರಾಡುತ್ತಿದ್ದಾರೆ. ಇದು ಆರಂಭ ಹಂತದ ಪರಿಣಾಮ ಅಷ್ಟೆ.

ರಷ್ಯಾ, ಚೀನಾಗಳಲ್ಲಿ ಚರ್ಚುಗಳಿವೆ, ಮಸೀದಿಗಳಿವೆ ಎನ್ನಲಾಗಿದೆ. ಆದರೆ ಅಲ್ಲಿ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಸರ್ಕಾರದ ತರದಲ್ಲಿ ಮುಜರಾಯಿ ಇಲಾಖೆ ಇಲ್ಲ. ಧರ್ಮ ವೈಯಕ್ತಿಕ ವಿಚಾರ. ತಿರುಪತಿ, ಶಬರಿ ಮಲೈಗಳ ಹರಿ ಸಾರ್ವತ್ರಿಕಗೊಳಿಸಿಲ್ಲ ಎಂಬ ಅಂಶವನ್ನು ಮಾಧವರು ನೈಜ ಕಮ್ಯುನಿಸ್ಟ'ರನ್ನು ಟೀಕಿಸುವ ಮುನ್ನ ಯೋಚಿಸುವುದು ಒಳಿತು.

ಮೂಡಬಿದರೆ

-ಶಾರದಾ ಜೋಗ್

ಪ್ರತಿಕ್ರಿಯೆ

'ಗಾಂಧೀಜಿ ಎಂದೂ ಸಣ್ಣ ಮನುಷ್ಯರಲ್ಲ'

ಪ್ರಿಯರೆ,

ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ 'ಗಾಂಧಿಗಿಂತ ಒಂದು ಪಟ್ಟು ಹೆಚ್ಚು ಬೆಳೆದು ನಿಲ್ಲುವ ಸುಭಾಷ್ ಚಂದ್ರಬೋಸ್' ಎಂಬ ಅಭಿಪ್ರಾಯವನ್ನು ನೇತಾಜಿ ಹುಟ್ಟಿದ ದಿನದಂದು (23-1-87) ಪ್ರಕಟಗೊಂಡ ಲೇಖನದಲ್ಲಿ ಅಭಿಪ್ರಾಯ ಪಡಲಾಗಿದೆ.

ನನಗನ್ನಿಸುವ ಮಟ್ಟಿಗೆ ಇದು ತೀರಾ ಅಪಕ್ವ ಚಿಂತನೆಯ ಪರಿಣಾಮ ಅಷ್ಟೆ. ನೇತಾಜಿ ಅಧಮ್ಯ ಉತ್ಸಾಹ ತುಂಬಿಕೊಂಡಿದ್ದ ಸ್ವಾತಂತ್ರ್ಯ ಹೋರಾಟಗಾರ ನಿಜ. ಆದರೆ ನೇತಾಜಿಯೊಡನೆ ಗಾಂಧಿಯಂತೆ ಸಮಗ್ರ ಭಾರತವೇ ಏನು ಜಗತ್ತಿನ ಮನುಷ್ಯರನ್ನೆಲ್ಲಾ ಒಂದು ಭಾವನೆಯ ಕೆಳಗೆ ತರುವ ಯಾವುದೇ ಚಿಂತನೆಯನ್ನು ನಮಗೆ ಕಾಣಲು ಸಾಧ್ಯವಿಲ್ಲವಲ್ಲ.

ಬಹುಶಃ ನೇತಾಜಿ ಗೆದ್ದಿದ್ದರೆ, ದಿಲ್ಲಿ ಹಿಡಿದಿದ್ದರೆ ಗಾಂಧಿಯೂ ಸೇರಿದಂತೆ ಅಸಂಖ್ಯ ಭಾರತೀಯ ಹೋರಾಟಗಾರರು ಮತ್ತೆ ಜೈಲು ಸೇರುವ ಸಂಭವವೂ ಇಲ್ಲದಿರುತ್ತಿರಲಿಲ್ಲ. ಮತ್ತೊಂದು ಅಂತಃಕಲಹವನ್ನು ನಾವು ನೋಡಬೇಕಿತ್ತೇನೋ. ಇರಲಿ ಬಿಡಿ. ಇದೆಲ್ಲಾ 'ರೆ' ಪ್ರಪಂಚ.

ಸಕಲೇಶಪುರ ದೇವರಾಜ್ ಹೆಗ್ಗಡೆ

ಚಿಂತನೆ

"ಅಂತರ್ಯದಲ್ಲಿ ಒಡಮೂಡಿರುವ ಮಾನವೀಯ ಮೌಲ್ಯಗಳು ವಾಸ್ತವಿಕ ಬದುಕಿನೊಡನೆ ಸ್ಪಂದಿಸಿ ಭಾವನಾತ್ಮಕವಾಗಿ ಬರಹದಲ್ಲಿಳಿಯಬೇಕು..."

—ಕುವೆಂಪು

ಮುಂಬೈ ಗುರುನಾರಾಯಣ ರಾತ್ರಿ ಶಾಲೆಯ ರಜತ ಮಹೋತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ದಾಮೋದರ ಆರ್. ಸುವರ್ಣ ಅವರು ಮಾತನಾಡುತ್ತಿದ್ದಾರೆ. ಚಿತ್ರದಲ್ಲಿ ಪ್ರಿನ್ಸಿಪಾಲ ಹೇಮಾವತಿ ಎನ್. ಪಾಲ್, ಡಿ. ಯು. ಕಾಲ್ಯಾನ್, ಎಸ್. ಎಲ್. ಸುವರ್ಣ, ಎಲ್. ಡಿ. ಕೋಟ್ಯಾನ್, ಡಿ. ಬಿ. ಅಮೀನ್, ಹಾಗೂ ಕೆ. ಆನಂದ ಅವರು ಇದ್ದಾರೆ.

ಮುಂಬೈ ಗುರುನಾರಾಯಣ ಶಾಲೆಯ ರಜತೋತ್ಸವ

'ಬದುಕಿನಲ್ಲಿ ನೋವುಂಡವರಿಗೆ ಮಾತ್ರ ಹಿಂದುಳಿದವರ ಚಿಂತೆ'

(ಮುಂಗಾರು ವರದಿ)

ಮುಂಬೈ, ಫೆ. 7– ಬದುಕಿನಲ್ಲಿ ನೋವುಂಡು ಮುಂದೆ ಬಂದವರಿಗೆ ಇತರರ ದುಃಖ ದುಮ್ಮಾನಗಳ ಬಗ್ಗೆ ಅರಿವಿರುವುದರಿಂದ ಇಂಥವರು ಹಿಂದುಳಿದವರನ್ನು ಮುಂದಕ್ಕೆ ತರುವ ಹರಿಕಾರರಾಗಬೇಕು" ಎಂದು ದ. ಕ. ಜಿಲ್ಲಾ ಬಿಲ್ಲವರ ಯೂನಿಯನ್ನಿನ ಅಧ್ಯಕ್ಷ ದಾಮೋದರ ಆರ್. ಸುವರ್ಣ ಅವರು ಹೇಳಿದ್ದಾರೆ.

ಇಲ್ಲಿನ ಬಿಲ್ಲವರ ಅಸೋಸಿಯೇಷನ್ ಸಂಚಾಲಿತ ಗುರುನಾರಾಯಣ ರಾತ್ರಿ ಶಾಲೆಯ ರಜತ ಮಹೋತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

'ಜನ ಮಾನಸದಲ್ಲಿ ಸೇವಾ ಕಾರ್ಯದಿಂದ ಪ್ರೀತಿ ವಿಶ್ವಾಸ ಬೆಳೆಸಿ, ನೊಂದವರಿಗೆ ನೆರವಾಗುವುದು ಸಂಘ ಸಂಸ್ಥೆಗಳ ಆದ್ಯ ಗುರಿಯಾಗಬೇಕು' ಎಂದು ನುಡಿದ ಅವರು, "ಆದರೆ ಇಂದು ಕೆಲವೆಡೆ ಅಧಿಕಾರ ಇರುವಾಗ ಕೆಲಸ ಮಾಡಿ ಇಲ್ಲದಾಗ ಸಂಸ್ಥೆಯನ್ನು ಟೀಕಿಸುವುದು ಅಷ್ಟೇ ಅಲ್ಲದೆ ಕಾರ್ಯಕ್ರಮಗಳಿಗೂ ಗೈರು ಹಾಜರಾಗುವ ಮಾಜಿ ಕಾರ್ಯಕರ್ತರ ವರ್ತನೆ ವಿಷಾದನೀಯ" ಎಂದಿದ್ದಾರೆ.

ಸಮಾರಂಭವನ್ನು ಸಂಸತ್ ಸದಸ್ಯ ಹಾಗೂ ಮುಂಬೈ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮುರ್ಲಿ ದೇವರಾ ಅವರು ಉದ್ಘಾಟಿಸಿ ಶಾಲೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದುದಲ್ಲದೆ, ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಉಚ್ಚ ಶಿಕ್ಷಣಕ್ಕಾಗಿ ಆರ್ಥಿಕ ನೆರವು, ಇತ್ಯಾದಿ ವಿಷಯಗಳ ಬಗ್ಗೆ ತನ್ನಿಂದಾದ ಸಹಾಯ ನೀಡುವ ಆಶ್ವಾಸನೆ ಇತ್ತರು.

ಶಾಲೆಯ ಯಶೋಭಿವೃದ್ಧಿಗಾಗಿ ಸುದೀರ್ಘ ಸೇವೆ ಸಲ್ಲಿಸಿದ ಪ್ರಿನ್ಸಿಪಾಲ್ ಎಸ್. ರಾಮಚಂದ್ರ ರಾವ್, ಶ್ಯಾಮರಾಯ ಬಿ. ಕೋಟ್ಯಾನ್, ಭುಜಂಗ, ಎಸ್. ಕುರ್ಕಾಲ್ ಹಾಗೂ ಇತರರನ್ನು ನೆನಪಿನ ಕಾಣಿಕೆಯೊಂದಿಗೆ ಸನ್ಮಾನಿಸಲಾಯಿತು.

ಅಸೋಸಿಯೇಷನ್ನಿನ ಪ್ರಧಾನ ಕಾರ್ಯದರ್ಶಿ ಎಸ್. ಪಿ. ಸುವರ್ಣ ಸ್ವಾಗತಿಸಿದರು, ಅಧ್ಯಕ್ಷ ಎಲ್. ಡಿ. ಕೋಟ್ಯಾನ್ ಅತಿಥಿಗಳ ಪರಿಚಯ ಮಾಡಿದರು. ಎಸ್. ಆರ್. ರಾವ್ ವಂದಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ "ಸಚಿನ್-ಶಂಕರ್" ಅವರ ನೃತ್ಯ ರೂಪಕ ಪ್ರದರ್ಶಿಸಲಾಗಿತ್ತು.

ದಿನಗೂಲಿ ನೌಕರರ ಪ್ರತಿಭಟನೆ

(ಮುಂಗಾರು ವರದಿ)

ಸಾಗರ, ಫೆ. 7– ಸಾಗರ ತಾಲೂಕಿನ ದಿನಗೂಲಿ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಪುರಸಭಾ ಸದಸ್ಯ ಲೇ. ನಾ. ಶ್ರೀನಿವಾಸ್ ಅವರ ನೇತೃತ್ವದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಿದರು.

ಸುಮಾರು 200ಕ್ಕೂ ಹೆಚ್ಚು ದಿನಗೂಲಿ ನೌಕರರು ಪ್ರಮುಖ ಬೀದಿಗಳಿಂದ ಮೆರವಣಿಗೆಯಲ್ಲಿ ಸಾಗಿ ಪುರಸಭಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಬೇಡಿಕೆಗಳ ಬಗ್ಗೆ ಮನವಿ ಅರ್ಪಿಸಿ ನಂತರ ಅನಿರ್ದಿಷ್ಟ ಕಾಲದವರೆಗೆ ಧರಣಿ ಸತ್ಯಾಗ್ರಹ ಕೈಗೊಂಡರು.

ಅಕ್ರಮ ಸ್ಪಿರಿಟ್ ವಶ

ಮಂಜೇಶ್ವರ, ಫೆ. 7–ಬಂಗ್ರ ಮಂಜೇಶ್ವರದ ಅಬಕಾರಿ ಚೆಕ್‌ಪೋಸ್ಟಿನಲ್ಲಿ ಫೆ. 3 ರಂದು ಸಂಜೆ ಲಾರಿಯೊಂದರಲ್ಲಿ ಅನಧಿಕೃತವಾಗಿ ಸಾಗಿಸಲಾಗುತ್ತಿದ್ದ 7000 ಲೀಟರಿನಷ್ಟು ಅಕ್ರಮ ಸ್ಪಿರಿಟನ್ನು ಅಬಕಾರಿ ಸರ್ಕಲ್ ಪ್ರಿವೆಂಟಿವ್ ಅಧಿಕಾರಿ ಕೆ. ರಘುರಾಮ ಹಾಗೂ ತಂಡದವರು ವಶಪಡಿಸಿಕೊಂಡಿದ್ದಾರೆ.

ಪೂನಾದ ಮೋಹನಲಾಲ್ ಎಂಬ ಕಂಪೆನಿಯಿಂದ ಅಲ್ವಾಯಿಯ ಎ. ಎಂ. ಟ್ರೇಡರ್ಸ್, ಎಂಬ ವ್ಯಾಪಾರಿ ಸಂಸ್ಥೆಗೆಂದು ಬಿಲ್ಲು ಮಾಡಿಸಿ ಸಾಗಿಸಲಾಗುತ್ತಿದ್ದ 35 ಬ್ಯಾರೆಲ್ ಸ್ಪಿರಿಟನ್ನು ಲಾರಿಯಲ್ಲಿ ನೂರು ಗೋಣಿಚೀಲ ಹಿಂಡಿಯ ಅಡಿಯಲ್ಲಿ ಬಚ್ಚಿಟ್ಟು ಸಾಗಿಸಲಾಗುತ್ತಿತ್ತು.

ಸ್ಪಿರಿಟಿನ ಬೆಲೆ ಸುಮಾರು 1 ಲಕ್ಷದ 40 ಸಾವಿರ ರೂ. ಗಳಿಗೂ ಮಿಕ್ಕಿರಬಹುದೆಂದು ಅಂದಾಜಿಸಲಾಗಿದ್ದು, ಲಾರಿ ಚಾಲಕ ತಮಿಳ್ನಾಡಿನ ಅರ್ಕೋಣಂ ನಿವಾಸಿ ಅರ್ಮುಗಂ ಹಾಗೂ ಕ್ಲೀನರ್ ಚಂದ್ರನ್ ಎಂಬವರನ್ನು ಅಧಿಕಾರಿಗಳು ಬಂಧಿಸಿದ್ದು, ಲಾರಿಯಲ್ಲಿದ್ದ ಇತರ ಇಬ್ಬರು ಪರಾರಿಯಾಗಿದ್ದಾರೆ ಎನ್ನಲಾಗಿದೆ.

ಮುಂದಿನ ತನಿಖೆಗಾಗಿ ಮಾಲುಗಳ ಸಮೇತ ಲಾರಿಯನ್ನು ಕುಂಬಳೆ ರೇಂಜಿನ ಅಬಕಾರಿ ಇನ್ಸ್‌ಪೆಕ್ಟರರಿಗೆ ಹಸ್ತಾಂತರಿಸಲಾಗಿದೆ.

ಕಳೆದ ಬುಧವಾರದಂದು ಕುಚ್ಚಿಂಬಳೆಗೆ ಸಮೀಪ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಸುಮಾರು 12 ಸಾವಿರ ಲೀಟರಿನಷ್ಟು ಸ್ಪಿರಿಟನ್ನು ವಶಪಡಿಸಿಕೊಳ್ಳಲಾಗಿದ್ದು, ಇಂದಿಗೆ ಮತ್ತೆ ವಾರದೊಳಗೆ 7 ಸಾವಿರ ಲೀಟರ್ ಸ್ಪಿರಿಟನ್ನು ವಶಪಡಿಸಿಕೊಳ್ಳಲಾಗಿದೆ.

ಸ್ವಂತ ಉದ್ದಿಮೆ ಹೊಂದಲು ಕರೆ

ಮಂಗಳೂರು, ಫೆ. 7– ವಿದ್ಯಾವಂತ ನಿರುದ್ಯೋಗಿ ಯುವಕರು ಸ್ವಯಂ ಉದ್ಯೋಗದಲ್ಲಿ ತೊಡಗಿ ತಮ್ಮ ಭಾವಿ ಭವಿಷ್ಯವನ್ನು ರೂಪಿಸಿಕೊಳ್ಳಲು ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ವಿಪುಲ ಅವಕಾಶವಿದ್ದು, ಇವುಗಳ ಉಪಯೋಗವನ್ನು ಪ್ರತಿಯೊಬ್ಬ ವಿದ್ಯಾವಂತ ಯುವಕನೂ ಪಡೆದುಕೊಳ್ಳಬೇಕೆಂದು ನಗರದ ಕೆನರಾ ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಎ. ರಾಘವೇಂದ್ರರಾವ್ ಕರೆನೀಡಿದ್ದಾರೆ.

ರಾಜ್ಯ ಸರಕಾರದ ಉದ್ಯೋಗ ಮತ್ತು ತರಬೇತಿ ಇಲಾಖೆ, ಮಂಗಳೂರು ವಿಶ್ವವಿದ್ಯಾನಿಲಯದ ಉದ್ಯೋಗ ವಾರ್ತಾ ಜತೆಗೆ ಮಾರ್ಗದರ್ಶನ ಕೇಂದ್ರ, ಹಾಗೂ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಬಿಸಿನೆಸ್ ಮ್ಯಾನೇಜ್‌ಮೆಂಟಿನ ಸಂಯುಕ್ತ ಆಶ್ರಯದಲ್ಲಿ ನಗರದ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಇತ್ತೀಚೆಗೆ ಜರಗಿದ ವೃತ್ತಿಮಾರ್ಗದರ್ಶನ ಸಮ್ಮೇಳನ ಮತ್ತು ಉದ್ಯೋಗ ಸಾಹಿತ್ಯ ಪ್ರದರ್ಶನ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನಗರದ ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ಎನ್.ವಿ.ಕೃಷ್ಣಸ್ವಾಮಿ ಅವರು ರಾಜ್ಯ ಹಾಗೂ ಕೇಂದ್ರ ಸರಕಾರಗಳು ವಿದ್ಯಾವಂತ ನಿರುದ್ಯೋಗಿಗಳಿಗೆ ಒದಗಿಸಿದ ಸ್ವಯಂ ಉದ್ಯೋಗಾವಕಾಶದ ಬಗೆಗೆ ಮತ್ತು ಇವುಗಳಿಗೆ ಸಂಬಂಧಪಟ್ಟ ಇಲಾಖೆಗಳಿಂದ ದೊರೆಯುವ ಆರ್ಥಿಕ ಸಹಾಯದ ಬಗ್ಗೆ ವಿವರಣೆ ನೀಡಿ, ಸುಶಿಕ್ಷಿತರು ಇವುಗಳ ಪ್ರಯೋಜನ ಪಡೆದುಕೊಳ್ಳುವಂತೆ ತಿಳಿಸಿದರು.

ಕೆನರಾ ಬ್ಯಾಂಕಿನ ಅಧಿಕಾರಿ ಶಿವೈಸ್ವಾಮಿ ಅವರು ಸ್ವಯಂ ಉದ್ಯೋಗ ಯೋಜನೆಗೆ ಬ್ಯಾಂಕುಗಳು ಒದಗಿಸುವ ಹಣಕಾಸಿನ ಸೌಲಭ್ಯ ಮತ್ತು ಮರುಪಾವತಿ ಕುರಿತು ವಿವರಿಸಿದರು.

ಎಸ್.ಡಿ.ಎಂ. ಕಾಲೇಜಿನ ಮ್ಯಾನೇಜ್‌ಮೆಂಟ್ ವಿಭಾಗದ ಪ್ರೊ| ವಿ.ಟಿ.ಕಾಲಕಣಿ, ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ ತಾಲೂಕು ಬಾಕಿ ಸಕ್ಕರೆ ವಿತರಣೆಗೆ ವ್ಯವಸ್ಥೆ

ಕುಂದಾಪುರ, ಫೆ. 7- ಈ ತಾಲೂಕಿಗೆ ನವೆಂಬರ್ ಮತ್ತು ಡಿಸೆಂಬರ್ ತಿಂಗಳಿಗೆ ಬಿಡುಗಡೆಯಾಗಿ ಎತ್ತುವಳಿಗೆ ಅನುಕ್ರಮವಾಗಿ ಬಾಕಿ ಇದ್ದ 339 ಕ್ವಿಂಟಾಲು ಮತ್ತು 336 ಕ್ವಿಂಟಾಲು ಸಕ್ಕರೆಯ ವಿತರಣೆಗೆ ಸೂಕ್ತ ಏರ್ಪಾಡು ಮಾಡಲಾಗಿದೆ ಎಂದು ತಾಲೂಕು ತಹಸೀಲ್ದಾರ್ ಎಂ. ಅಮರನಾಥ ಸುಮತಿ ಅವರು ತಿಳಿಸಿದ್ದಾರೆ.

ತಾಲೂಕಿನಲ್ಲಿ ಎತ್ತುವಳಿಗೆ ಬಾಕಿ ಇರುವ ನ್ಯಾಯಬೆಲೆ ಅಂಗಡಿದಾರರು ತಾಲೂಕಿನ ಸಗಟು ವಿತರಕರಿಂದ ಎತ್ತುವಳಿ ಮಾಡಿ ಕಾರ್ಡುದಾರರಿಗೆ ವಿತರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಸಿರು ಪಡಿತರ ಚೀಟಿದಾರರಲ್ಲಿನ 19 ವರ್ಷಕ್ಕೆ ಮೇಲ್ಪಟ್ಟ ಗಂಡಸರಿಗೆ ಮತ್ತು ಹೆಂಗಸರಿಗೆ ವಿತರಿಸಲು ಸೀರೆ, ಕುಬುಸದ ಬಟ್ಟೆ, ಧೋತಿ ಹಾಗೂ ಅಂಗಿ ಬಟ್ಟೆ ಕೂಡಾ ಸಗಟು ಕೇಂದ್ರಕ್ಕೆ ಸರಬರಾಜಾಗಿದ್ದು ಈ ಹಿಂದೆ ಎತ್ತುವಳಿ ಮಾಡಲು ಬಾಕಿ ಇರುವ ನ್ಯಾಯಬೆಲೆ ಅಂಗಡಿದಾರರು ತಮ್ಮ ಬಾಬ್ತು ಬಿಡುಗಡೆಯಾದ ಸೀರೆ ಮತ್ತು ಧೋತಿಯನ್ನು ಪೂರ್ಣ ಪ್ರಮಾಣದಲ್ಲಿ ಎತ್ತುವಳಿ ಮಾಡಿ ವಿತರಿಸಲು ಸೂಚಿಸಲಾಗಿದೆ" ಎಂದು ತಹಸೀಲ್ದಾರ್‌ರವರು ತಿಳಿಸಿದ್ದಾರೆ.

ಯುವಮಂಡಲಗಳು ಒಗ್ಗಟ್ಟಿಗೆ ಪ್ರೇರಕ

ಪುಣಚಾ, ಫೆ. 7– ನಾಡಿನ ನಾನಾ ಕಡೆಗಳಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಜನರನ್ನು ಒಂದುಗೂಡಿಸಿ, ಕ್ರಿಯಾಶೀಲಗೊಳಿಸುವಲ್ಲಿ ಯುವ ಮಂಡಲಗಳ ಪಾತ್ರ ಮಹತ್ವದ್ದಾಗಿದೆ ಎಂದು ಉಜಿರೆ ಎಸ್. ಡಿ. ಎಂ. ಕಾಲೇಜಿನ ಕನ್ನಡ ಉಪನ್ಯಾಸಕ ಚನ್ನಪ್ಪಗೌಡ ಅವರು ಹೇಳಿದ್ದಾರೆ.

ಮಂಗಳೂರಿನ ನೆಹರೂ ಯುವಕ ಕೇಂದ್ರ ಹಾಗೂ ಪುಣಚಾದ ಶ್ರೀದೇವಿ ಹವ್ಯಾಸಿ ಬಳಗ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾಮಟ್ಟದ ಯುವಜನ ಸಮ್ಮೇಳನದಲ್ಲಿ "ನಿಮ್ಮ ಹಳ್ಳಿಯನ್ನು ಸ್ವಚ್ಛವಿಡಿ" ಆಂದೋಲನದ ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ದೇವಿನಗರದ ಶ್ರೀ ದೇವಿ ಪ್ರೌಢಶಾಲೆಯಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪುತ್ತೂರಿನ ಹಿರಿಯ ನ್ಯಾಯವಾದಿ ಹಾಗೂ ಪುಣಚಾ ಗ್ರಾಮ ವಿಕಾಸ ಪ್ರತಿಷ್ಠಾನದ ಗೌರವ ಅಧ್ಯಕ್ಷ ಸಿ. ಪಿ. ಶಾಸ್ತ್ರಿ ಅವರು ವಹಿಸಿದ್ದರು.

ಹೇಮಲತಾ ಹಾಗೂ ಆಶಿ ಅವರು ಪ್ರಾರ್ಥಿಸಿದರು. ಶ್ರೀದೇವಿ ಪ್ರೌಢಶಾಲೆಯ ಕನ್ನಡ ಅಧ್ಯಾಪಕಿ ಗಂಗಮ್ಮ ಎಚ್. ಶಾಸ್ತ್ರಿ ಅವರು ಸ್ವಾಗತಿಸಿದರು. ನೆಹರೂ ಯುವಕ ಕೇಂದ್ರದ ಅಶೋಕ ಪಿ. ಅವರು ವಂದಿಸಿದರು.

ಕಾರ್ಯಕ್ರಮವನ್ನು ಶ್ರೀದೇವಿ ಪ್ರೌಢಶಾಲೆಯ ಪಿ. ಬಾಲಕೃಷ್ಣನಾಯಕ್ ಅವರು ನಿರೂಪಿಸಿದರು.

ವಿಜೇತರ ವಿವರ

ಜಾನಪದ ಗೀತೆ : 1. ಶಶಿಧರ ಕೆ. ಶ್ರೀದೇವಿ ಪ್ರೌಢಶಾಲೆ, ಪುಣಚಾ 2. ಪಿ. ವಿ. ಭಾರತಿ, ಮಂಚಿ ಯುವತಿ ಮಂಡಲ 3. ರತ್ನಾವತಿ ಬಿ.

ದೇಶಭಕ್ತಿ ಗೀತೆ: 1. ವಾರಿಜಾ ದೇವಿ ಎನ್. ಮಂಚಿ ಯುವತಿ ಮಂಡಲ 2. ಯಶೋಧ ವಿ. ಹೊಲಿಗೆ ತರಬೇತಿ ಕೇಂದ್ರ, ದೇವಿನಗರ, 3. ಶಶಿಧರ ಕೆ, ದೇವಿ ಪ್ರೌಢಶಾಲೆ, ಪುಣಚಾ

ಛದ್ಮವೇಷ ಸ್ಪರ್ಧೆ: ಭಾರತಿ ಪಿ. ವಿ. ಮಂಚಿ ಯುವತಿ ಮಂಡಲ 2. ದುರ್ಗಾಪ್ರಸಾದ್, ಹಾಗೂ ಪ್ರೇಮಚಂದ್ರ, ದೇವಿನಗರ ಹವ್ಯಾಸಿ ಬಳಗ, ಪುಣಚಾ

ಭಾಷಣ ಸ್ಪರ್ಧೆ: 1. ನರಸಿಂಹ ಭಟ್, ಮಾದಕಟ್ಟೆ ಮಿತ್ರ ಮಂಡಳಿ 2. ಭಾರತಿ ಪಿ. ವಿ. ಮಂಚಿ ಯುವತಿ ಮಂಡಲ 3. ವಾರಿಜ ದೇವಿ ಎನ್.

ಏಕ ಪಾತ್ರಾಭಿನಯ : 1 ಎಂ. ಶಂಕರ ಭಟ್ ಮಾದಕಟ್ಟೆ ಮಿತ್ರ ಮಂಡಳಿ, 2. ದುರ್ಗಾಪ್ರಸಾದ್ ರೈ. ಶ್ರೀದೇವಿ ಹವ್ಯಾಸಿ ಬಳಗ ಪುಣಚಾ 3. ಕರುಣಾಕರ್ ಶ್ರೀದೇವಿ ಹವ್ಯಾಸಿ ಬಳಗ ಪುಣಚ.

ಬೇಡಿಕೆ ಒತ್ತಾಯಿಸಿ ಡಿವೈಎಫ್‌ಐ ಚಳವಳಿ

ಕಾಸರಗೋಡು, ಫೆ.6- ಪ್ರಾಂತ್ಯ ಸರಕಾರವು ಘೋಷಿಸಿರುವ ನಿರುದ್ಯೋಗ ವೇತನ ನೀಡಿಕೆ ಮೊದಲಾದ ವಾಗ್ದಾನಗಳನ್ನು, ಕಾರ್ಯಕ್ರಮ ಯೋಜನೆಗಳನ್ನು ತಕ್ಷಣವೇ ಜ್ಯಾರಿಗೊಳಿಸಬೇಕೆಂದು ಒತ್ತಾಯಿಸಿ ಡಿ.ವೈ. ಎಫ್. ಐ. ಕಾರ್ಯಕರ್ತರು ರಾಜ್ಯವ್ಯಾಪಿಯಾಗಿ ಮುಖ್ಯ ಸಚಿವರ ತಡೆ ... ತೊಡಗಿದ್ದು, ಕಾಸರಗೋಡಿನಲ್ಲೂ ಫೆ. 2ರಂದು ಡಿ. ವೈ. ಎಫ್. ಐ. ಕಾರ್ಯಕರ್ತರು ಮೆರವಣಿಗೆ ನಡೆಸಿ ನಂತರ ಕಲೆಕ್ಟರೇಟಿಗೆ ಮುತ್ತಿಗೆ ಹಾಕಿದರು.

ಅಂದು ನಗರಕ್ಕೆ ಮುಖ್ಯ ಮಂತ್ರಿಗಳು ಆಗಮಿಸಿ ವಿದ್ಯಾನಗರದಲ್ಲಿ ಸ್ಥಾಪಿಸಲಾಗುವ ಸಿವಿಲ್ ಸ್ಟೇಷನಿಗೆ ಶಿಲಾನ್ಯಾಸ ಗೈಯುವ ಕಾರ್ಯಕ್ರಮವಿದ್ದು, ಮುಖ್ಯಮಂತ್ರಿಗಳ ಗಮನ ಸೆಳೆಯಲು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಆದರೆ ಮುಖ್ಯ ಮಂತ್ರಿಗಳ ಕಾರ್ಯಕ್ರಮವನ್ನು ಫೆ. 7 ಕ್ಕೆ ಮುಂದೂಡಲಾಯಿತು.

ಜಿ. ಪ. ಆಡಳಿತಕ್ಕೆ ಕಚೇರಿ ಸಿದ್ಧ

(ಮುಂಗಾರು ವರದಿ)

ಚಿಕ್ಕಮಗಳೂರು, ಫೆ. 7– ಜಿಲ್ಲಾ ಪರಿಷತ್ ಆಡಳಿತ ವ್ಯವಸ್ಥೆಗೆ ಅನುಕೂಲವಾಗುವಂತೆ ಹಾಗೂ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಮುಖ್ಯ ಕಾರ್ಯದರ್ಶಿಯವರಿಗೆ ಕಟ್ಟಡ ಸಿದ್ಧವಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ತಿಳಿಸಿದರು.

ಸುದ್ದಿಗಾರರೊಂದಿಗೆ ಇತ್ತೀಚೆಗೆ ಮಾತನಾಡುತ್ತಿದ್ದ ಅವರು ಈಗಿರುವ ತಾಲೂಕು ಅಭಿವೃದ್ಧಿ ಮಂಡಳಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಕೊಠಡಿಯ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಇದೇ ಕಚೇರಿಯಲ್ಲಿ ಯೋಜನಾ ವಿಭಾಗವಿದ್ದು ಕಟ್ಟಡ ಮೇಲ್ಭಾಗದಲ್ಲಿ ಸಭೆ ನಡೆಯುವ ಸ್ಥಳವನ್ನು ಏರ್ಪಾಡು ಮಾಡಲಾಗಿದೆ ಎಂದರು.

ಇತ್ತೀಚೆಗೆ ವಿಶೇಷ ಜಿಲ್ಲಾಧಿಕಾರಿ ಕಚೇರಿಯನ್ನು ಹೊಸದುರ್ಗದ ಕಟ್ಟಡದಲ್ಲಿ ಆಡಳಿತ ವಿಭಾಗ ಮತ್ತು ಅಭಿವೃದ್ಧಿ ಶಾಖೆಗಳು ಕೆಲಸ ಮಾಡುವುವು ಅಲ್ಲದೆ ಹಳೆಯ ವಿಶೇಷ ಜಿಲ್ಲಾಧಿಕಾರಿ ಕಚೇರಿಯಲ್ಲಿ ಲೆಕ್ಕಪತ್ರ ವಿಭಾಗಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಸಣ್ಣ ಉಳಿತಾಯದಲ್ಲಿ ಜನವರಿ ಅಂತ್ಯದವರೆಗೆ 5ಕೋಟಿ 24 ಲಕ್ಷ ರೂ. ನಿವ್ವಳ ಹಾಗೂ 9 ಕೋಟಿ 29ಲಕ್ಷ ರೂ. ಒಟ್ಟು ಸಂಗ್ರಹ ಮಾಡಲಾಗಿದೆ ಎಂದು ಅವರು ಮುಂದಿನ ಮಾರ್ಚ್ ಒಳಗೆ 6 ಕೋಟಿ 50ಲಕ್ಷ ರೂ. ನಿವ್ವಳ ಹಾಗೂ 11.50 ಕೋಟಿ ರೂ. ಒಟ್ಟು ಸಂಗ್ರಹಿಸಲಾಗುವುದೆಂದರು. ಜಿಲ್ಲೆಗೆ ಈ ವರ್ಷ 3 ಕೋಟಿ 90 ಲಕ್ಷ ರೂ.ನಿವ್ವಳ ಹಾಗೂ 7 ಕೋಟಿ ಒಟ್ಟು ಸಂಗ್ರಹಿಸಲು ಸರ್ಕಾರ ಸೂಚಿಸಿದ್ದು ಗುರಿ ಮೀರಿ ಸಂಗ್ರಹವಾಗಿದೆ.

ಕುಂಬಳೆಯಲ್ಲಿ ಮಖಾಂ ಉರೂಸ್

ಕುಂಬಳೆ, ಫೆ. 7:– ಕುಂಬಳೆ ಬದರ್ ಜುಮಾಯತ್ ಮಸೀದಿಯಲ್ಲಿ ವಲಿಯುಲ್ಲಾಹಿ ಶಾಸಿ ಮುಹಮ್ಮದ್ ಮುಸ್ಲಿಯಾರ್‌ರವರ ಮಖಾಂ ಉರೂಸ್ ಮತ್ತು ಒಂಭತ್ತು ದಿನಗಳ ಮತಪ್ರಸಂಗ ಪರಂಪರೆಯು ಈಗಾಗಲೇ ಆರಂಭವಾಗಿದ್ದು 14ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರಗುವುದು.

ಈ ಕಾರ್ಯಕ್ರಮಗಳಿಗೆ ಸುಮಾರು 60 ಸಾವಿರ ರೂ. ಗಳ ವೆಚ್ಚ ಅಂದಾಜಿಸಲಾಗಿದ್ದು, ಫೆ. 11ರಂದು ಅನ್ನದಾನವೂ ನಡೆಯಲಿದೆ. ಉರೂಸ್ ಉತ್ಸವದ ಯಶಸ್ವಿಗಾಗಿ ಎಮ್. ಎ. ಅಬ್ದುಲ್ ರಹಿಮಾನ್ ಅಧ್ಯಕ್ಷರಾಗಿಯೂ ಎಸ್. ಕೆ. ಅಬ್ದುಲ್ಲ ಹಾಜಿ ಪ್ರಧಾನ ಕಾರ್ಯದರ್ಶಿಯೂ, ಪಿ. ಕೆ. ಅಬ್ದುಲ್ ರಹಿಮಾನ್ ಕೋಶಾಧಿಕಾರಿಯಾಗಿಯೂ ಆಗಿರುವ ಸಮಿತಿಯನ್ನು ರೂಪಿಸಲಾಗಿದೆ.

ಟೈಮ್ಸ್ ಆಫ್ ಇಂಡಿಯಾ ಭಾಷಣ ಸ್ಪರ್ಧೆ

ಮಂಗಳೂರು, ಫೆ. 7–ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯವರು ಫೆ. 10 ರಂದು (ಮಂಗಳವಾರ) ನಗರದ ಎಸ್.ಡಿ. ಎಂ. ಲಾ ಕಾಲೇಜಿನಲ್ಲಿ ನಡೆಸಲಿರುವ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶವಿರುವುದು ಮಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿದ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾತ್ರ. (ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಅಲ್ಲ). ಸ್ಪರ್ಧಾಳುಗಳ ಹೆಸರುಗಳನ್ನು ಈಗಾಗಲೇ ಸಂಬಂಧಪಟ್ಟ ಕಾಲೇಜುಗಳ ಮುಖ್ಯಸ್ಥರು ಕಳುಹಿಸಿಕೊಟ್ಟಿದ್ದಾರೆ ಎಂದು ಕಾರ್ಯಕ್ರಮದ ಸಂಯೋಜಕರು ತಿಳಿಸಿದ್ದಾರೆ.

ತೆಂಗೆ ಕಚೇರಿ ಸ್ಥಳಾಂತರಕ್ಕೆ ಪ್ರತಿಭಟನೆ

ಕಾಸರಗೋಡು, ಫೆ. 7– ಕಾಸರಗೋಡು ಇನ್‌ಕಮ್‌ಟ್ಯಾಕ್ಸ್ ಕಚೇರಿಯನ್ನು ಸ್ಥಳಾಂತರಗೊಳಿಸಲು ಅಧಿಕಾರಿಗಳು ನಡೆಸುತ್ತಿರುವ ಪ್ರಯತ್ನಗಳನ್ನು ಕಾಸರಗೋಡು ಮರ್ಚೆಂಟ್ಸ್ ಹಾಲಿನಲ್ಲಿ ಇತ್ತೀಚೆಗೆ ಸೇರಿದ ವ್ಯಾಪಾರಿ ವ್ಯವಸಾಯಿಗಳ, ಇಂಡಿಯನ್ ಮೆಡಿಕಲ್ ಅಸೋಸಿಯೇಷನ್, ಚಾರ್ಟರ್ಡ್ ಅಕೌಂಟೆಂಟ್ಸ್ ಹಾಗೂ ಬಸ್ ಮಾಲೀಕರ ಪ್ರತಿನಿಧಿಗಳ ಸಭೆಯು ತೀವ್ರವಾಗಿ ಪ್ರತಿಭಟಿಸಿದೆ.

ಈ ಸ್ಥಳಾಂತರವನ್ನು ತಡೆಗಟ್ಟಲು ಕೇಂದ್ರ ವಿತ್ತಸಚಿವರೂ ಆದ ಪ್ರಧಾನಿ ಶ್ರೀ ರಾಜೀವಗಾಂಧಿಯವರನ್ನು ಭೇಟಿಯಾಗಿ ಚರ್ಚಿಸಲು ಪ್ರತಿನಿಧಿಗಳ ನಿಯೋಗವೊಂದನ್ನು ದಿಲ್ಲಿಗೆ ಕಳುಹಿಸಲು ಸಭೆಯು ತೀರ್ಮಾನಿಸಿದೆ.

ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ ಸಭೆ

ಮೂಡಬಿದಿರೆ, ಫೆ. 7– ಸಿಂಡಿಕೇಟ್ ಕೃಷಿ ಪ್ರತಿಷ್ಠಾನದ 20ನೆಯ ಸರ್ವ ಸದಸ್ಯರ ಸಭೆಯು ಇಲ್ಲಿನ ಜಾಸೆಲ್ ಮಿಷನ್ ಫಾರ್ಮ್ಸ್‌ನಲ್ಲಿ ಇತ್ತೀಚೆಗೆ ಜರುಗಿತು.

ಪ್ರತಿಷ್ಠಾನದ ಉಪಾಧ್ಯಕ್ಷ ಡಾ| ವಿಲ್. ಸಿ. ಸೋನ್ಸ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ವಲಯ ಅಧ್ಯಕ್ಷ ಕೆ. ಕೆ. ಪೈ ಹಾಗೂ ಕೃಷಿಕ ನಾರಾಯಣ ಕೆದಿಲಾಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಿಂಡಿಕೇಟ್ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ವಿಭಾಗಾಧಿಕಾರಿ ಕೆ. ಎಂ. ಉಡುಪರವರು ಪ್ರತಿಷ್ಠಾನದ ಉದ್ದೇಶ ಹಾಗೂ ಸಾಧನೆಗಳ ಪರಿಚಯ ನೀಡುತ್ತಾ, ಪ್ರತಿಷ್ಠಾನದ ಕಾರ್ಯಕ್ರಮಗಳ ಗುಣಮಟ್ಟವನ್ನು ಗಮನಿಸಿದ ಕೇಂದ್ರ ಸರಕಾರವು ತನ್ನ 'ಗ್ರಾಮೀಣಾಭಿವೃದ್ಧಿಯ ರಾಷ್ಟ್ರೀಯ ನಿಧಿ'ಯಿಂದ 56 ಲಕ್ಷ ರೂಪಾಯಿಗಳ ಕೊಡುಗೆಯನ್ನು ಪ್ರಕಟಿಸಿದ್ದು, ಇದನ್ನು ಪ್ರತಿಷ್ಠಾನವು ತನ್ನ ಮುಂದಿನ ಕಾರ್ಯಕ್ರಮಗಳಿಗೆ ವಿನಿಯೋಗಿಸಲಿದೆ. ಹೊರ ರಾಜ್ಯಗಳಲ್ಲಿ ಪ್ರತಿಷ್ಠಾನದ ಚಟುವಟಿಕೆಗಳು ಬಹಳವಾಗಿ ಬೆಳೆದಿದ್ದು ಸದ್ಯದಲ್ಲೇ ಕೇರಳ ಭಾಗದ ಚಟುವಟಿಕೆಗಳ ಮೇಲ್ವಿಚಾರಣೆಗಾಗಿ ವಿಶೇಷ ವಿಭಾಗವನ್ನು ಆರಂಭಿಸುವ ಬಗ್ಗೆ ಪ್ರತಿಷ್ಠಾನವು ... ಎಂದರು.

ಪ್ರತಿಷ್ಠಾನದ ಕಾರ್ಯದರ್ಶಿ ಬಿ. ಸುಂದರ ಶೆಟ್ಟಿಯವರು ಗತ ವರ್ಷದ ವರದಿ –ಆಯವ್ಯಯ ಮತ್ತು ಹೊಸವರ್ಷದ ಮುಂಗಡಪತ್ರವನ್ನು ಸಭೆಯ ಮುಂದಿಟ್ಟು ಅನುಮೋದನೆ ಪಡೆದರು.

ಕೃಷಿಕ ಸ್ವಾಗತ

ಪ್ರತಿಷ್ಠಾನವು ತನ್ನ ಈ ಬಾರಿಯ ವಾರ್ಷಿಕ ಕೃಷಿಕ ಸನ್ಮಾನಕ್ಕಾಗಿ ಪುತ್ತೂರು ತಾಲೂಕಿನ ಹಿರೇಬಂಡಾಡಿ ಗ್ರಾಮದ ನಾರಾಯಣ ಕೆದಿಲಾಯರನ್ನು ಆಯ್ಕೆ ಮಾಡಿದ್ದು ಅವರನ್ನು ಕೆ. ಕೆ. ಪೈಯವರು ಶಾಲು ಹೊದಿಸಿ ಫಲಪುಷ್ಪಗಳನ್ನು ನೀಡಿ ಗೌರವಿಸಿದರು.

ಉಜಿರೆಯ ಗ್ರಾಮಾಭಿವೃದ್ಧಿ ಹಾಗೂ ಸ್ವಉದ್ಯೋಗ ತರಬೇತಿ ಕೇಂದ್ರದ ನಿರ್ದೇಶಕ ಕೃಷ್ಣ ಕೊಳತ್ತಾಯರು ಸನ್ಮಾನಿತ ಕೃಷಿಕ ಕೆದಿಲಾಯರ ಪರಿಚಯ ಮಾಡಿದರು. ಕೆದಿಲಾಯರ ಸಾಧನೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿ ಮಾತನಾಡಿ ಕೆ. ಕೆ. ಪೈಯವರು ನಮ್ಮ ದೇಶದ ಮೂಲೆಮೂಲೆಗಳಲ್ಲಿ ಸದ್ದಿಲ್ಲದೆ ಸಾಧನೆ ಮಾಡುತ್ತಿರುವ ಇಂತಹ ವ್ಯಕ್ತಿಗಳನ್ನು ಹುಡುಕಿ ತೆಗೆದು ಸಾರ್ವಜನಿಕರಿಗೆ ಪರಿಚಯಿಸಬೇಕಾಗಿದೆ ಹೊರತು, ಪ್ರಚಾರ ಬೇಡವೆಂದೇ ಬದುಕುವ ಇಂತಹವರ ಸಾಧನೆಗಳಾವುದೂ ಸಾರ್ವಜನಿಕ ಉಪಯೋಗಕ್ಕೆ ದಕ್ಕದೇ ಹೋಗಬಹುದು ಎಂದರು.

ತಮ್ಮ ಸನ್ಮಾನಕ್ಕೆ ಕೃತಜ್ಞತೆ ಅರ್ಪಿಸಿದ ಕೆದಿಲಾಯರು ತಮ್ಮ ಕೆಲಸಗಳನ್ನು ನಾಲ್ಕು ಮಂದಿ ನೋಡುವಂತಾದರೆ ತಮಗದೇ ಸಂತೋಷ ಎಂದರು.

ಸಿಂಡಿಕೇಟ್ ಬ್ಯಾಂಕು ಪ್ರತಿಷ್ಠಾನದ ಸಹಕಾರದಿಂದ ನಡೆಸುವ ಬಡಜನ ... ಬಗ್ಗೆ ಡಾ.ರಿಚ್ಚರ್ಡ್ ಅವರು ವಿವರ ನೀಡಿದರು.

ಕರಾವಳಿಯನ್ನು ಸಿಂಗರಿಸಿದ ಸಭಾಧ್ಯಕ್ಷ ಡಾ.ಎಸ್.ಸಿ.ಸೋನ್ಸ್‌ರವರು ತಮ್ಮ ಹಾಗೂ ಪ್ರತಿಷ್ಠಾನದ ಸಂಬಂಧಗಳನ್ನು ಪ್ರಸ್ತಾಪಿಸಿದರೆ, ಸನ್ಮಾನಿತ ಕೆದಿಲಾಯರನ್ನು ಅಭಿನಂದಿಸಿದರು.

ಕೊಣಾಜೆಯಲ್ಲಿ ಪ್ರತಿಷ್ಠಾನದ ಜತೆ ಕಾರ್ಯದರ್ಶಿ, ಬೋಳಾರರು ಮುಖ್ಯವಾದ್ದರಿಂದ ವಂದನಾರ್ಪಣೆ ಮಾಡಿದರು.

ಪ್ರಭುತ್ವ ಹೇರುವ ಪ್ರವೃತ್ತಿಗೆ ಖಂಡನೆ

ಮೂಲ್ಕಿ, ಫೆ. 7– "ಸ್ವಾತಂತ್ರ್ಯ ಪೂರ್ವದಲ್ಲಿ ಸಾಮೂಹಿಕ ಧೋರಣೆಗಳ ಬಗ್ಗೆ ಸಾರ್ವಜನಿಕ ಚರ್ಚೆ ಆಗುತ್ತಿತ್ತು. ಈಗ ಅಂತಹ ಸಂವಾದ ಸಾಧ್ಯವಾಗುತ್ತಿಲ್ಲ. ಬದಲಾಗಿ ಒಬ್ಬರ ಪ್ರಭುತ್ವವನ್ನು ಮತ್ತೊಬ್ಬರ ಮೇಲೆ ಹೇರುವ ಪ್ರವೃತ್ತಿ ಕಾಣುತ್ತಿದೆ" ಎಂದು ಸಣ್ಣಕೈಗಾರಿಕೆಗಳ ನಿಗಮದ ಅಧ್ಯಕ್ಷ ಬಂಡೆ ಗದ್ದೆ ರಮೇಶ್ ಹೇಳಿದ್ದಾರೆ.

ವಿಜಯಾ ಕಾಲೇಜಿನ ಪ್ರಾಧ್ಯಾಪಕ ಜಯಪ್ರಕಾಶ್ ಮಾವಿನಕುಳಿಯವರ 'ಸಿಂಹಾಸನ' (ನಾಟಕ) ಹಾಗೂ 'ಬ್ಯೂರೋಕ್ರಸಿ ಎಂಡ್ ಕಾಮನ್‌ಮ್ಯಾನ್' ಎಂಬ ಎರಡು ಗ್ರಂಥಗಳನ್ನು ಇತ್ತೀಚೆಗೆ ಬಿಡುಗಡೆಗೊಳಿಸಿ ಅವರು ಮಾತನಾಡುತ್ತಿದ್ದರು.

ಪರಿಕ್ಷಿತ್ ಪುನರೂರು ಅವರು ಗ್ರಂಥದ ಲೇಖಕರಿಗೆ ಶುಭ ಹಾರೈಸಿದರು. ಎಂ. ಆರ್. ಎಚ್. ಪೂಂಜಾ ಅವರು ಮಾವಿನಕುಳಿಯವರಿಗೆ ವಿಶೇಷ ಕೊಡುಗೆ ನೀಡಿ ಗೌರವಿಸಿದರು.

ಮಾವಿನಕುಳಿಯವರು ತಮ್ಮ ಗ್ರಂಥಗಳನ್ನು ಪರಿಚಯಿಸಿದರು, ವಿಜಯಾ ಕಾಲೇಜಿನ ಪ್ರಿನ್ಸಿಪಾಲ್ ಎಸ್. ಬಿ. ನಂದಿಯಾರ್ ಸ್ವಾಗತಿಸಿದರು. ಜೆ. ವರದರಾಯ ಪೈ ಕಾರ್ಯಕ್ರಮ ನಿರ್ವಹಿಸಿದರು.

ಟಿ. ಪ್ರೇಮಾ ಹಾಗೂ ವಿನಯ ಭಟ್ ಭಾವಗೀತೆಗಳನ್ನು ಹಾಡಿದರು.

(ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಜಯಪ್ರಕಾಶ ಮಾವಿನಕುಳಿ, ರಮೇಶ ಬಂಡಗದ್ದೆ, ಪರಿಕ್ಷಿತ್ ಪುನರೂರು ಹಾಗೂ ಎಸ್. ಬಿ. ನಂದಿಯಾರ್ ಅವರನ್ನು ಕಾಣಬಹುದು).

ವಾರ್ಷಿಕ ಸಭೆ

ಕಾಟಿಪಳ್ಳ, ಫೆ. 7– ಇಲ್ಲಿನ ಬ್ರಹ್ಮಶ್ರೀ ನಾರಾಯಣಗುರು ಸಮಾಜ ಸೇವಾ ಸಂಘದ ವಾರ್ಷಿಕ ಮಹಾಸಭೆ ಇತ್ತೀಚೆಗೆ ಇಲ್ಲಿ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪಿ. ಸಾಧು ಪೂಜಾರಿ ಅವರು ವಹಿಸಿದ್ದರು.

1986–87ನೇ ಸಾಲಿನ ಸಂಘದ ಪದಾಧಿಕಾರಿಗಳಾಗಿ ಪಿ. ಸಾಧು ಪೂಜಾರಿ ಕುಳಾಯಿ (ಅಧ್ಯಕ್ಷ). ಟಿ. ಮೋನಪ್ಪ ಸಾಲ್ಯಾನ್, ಸದಾಶಿವ ಅಂಚನ್ (ಉಪಾಧ್ಯಕ್ಷರು). ಪೊನ್ನು ಅಂಚನ್ ಮದ್ಯ (ಕಾರ್ಯದರ್ಶಿ), ಮೋಹನ ಅಮೀನ್, ವಿಜಯ. ಎಸ್. ಕುಕ್ಯಾನ್ (ಸಹ ಕಾರ್ಯದರ್ಶಿಗಳು), ಸುಂದರ ಬಿ. ಕೋಟ್ಯಾನ್, ದಯಾನಂದ ಸುವರ್ಣ, ರಾಮನಾಥ ಕೆ. ಅಮೀನ್, ಮಾಧವ ಬಂಗೇರ (ಸಂಘಟನಾ ಕಾರ್ಯದರ್ಶಿಗಳು), ಪಿ. ಪುರುಷೋತ್ತಮ (ಲೆಕ್ಕ ಪರಿಶೋಧಕ).

ಮೆಡ್ಲೆ ಮಲೆಯಲ್ಲಿ ಅಪ್ಪಿಕೋ

ಮಡಿಕೇರಿ, ಫೆ. 7– ಪ್ರಕೃತಿ ಪ್ರಿಯರ ಅರಣ್ಯಗಳನ್ನು ರಕ್ಷಿಸುವ ತಮ್ಮ ಚಳವಳಿಯ ಅಂಗವಾಗಿ ಪರಿಸರ ಸಂರಕ್ಷಣಾ ಚಳವಳಿಯು ಮಹಿಳೆ ಮತ್ತು ಮಕ್ಕಳೂ ಸೇರಿದ ಸ್ವಯಂ ಸೇವಕರು ಮರಗಳನ್ನು ಅಪ್ಪಿಕೊಳ್ಳುವ ಕಾರ್ಯಕ್ರಮವನ್ನು ಆರಂಭಿಸಿದುದರಿಂದ ಇಲ್ಲಿಗೆ ಸಮೀಪದ ಮೆಡ್ಲೆಮಲೆ ರಕ್ಷಿತ ಅರಣ್ಯ ಪ್ರದೇಶದಿಂದ ಮರ ಕಡಿಯುವ ಕಾರ್ಯಾಚರಣೆ ನಿಲ್ಲಿಸಲ್ಪಟ್ಟಿತು.

ಪ್ಲೈವುಡ್ ಕಾರ್ಖಾನೆ ಬಳಸುವ ಈ ಮರದ ಕಡಿಯುವಿಕೆಯನ್ನು ತಡೆಯಲು ಕೆಲವು ಗಿರಿಜನರನ್ನು ಒಳಗೊಂಡಂತೆ ಸ್ವಯಂ ಸೇವಕರ ಪ್ರವಾಹವೇ ಅಲ್ಲಿಗೆ ಹರಿದುಬಂತು.

ವಾರ್ಷಿಕ ಕ್ರೀಡೋತ್ಸವ

ಹಿರಿಯಡಕ, ಫೆ. 7–ಹಿರಿಯಡಕ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲಾ ವಾರ್ಷಿಕ ಕ್ರೀಡೋತ್ಸವವು ಇತ್ತೀಚೆಗೆ ಹಿರಿಯಡಕದ ಗಾಂಧಿ ಮೈದಾನದಲ್ಲಿ ಜರುಗಿತು.

ಪೂರ್ವಾಹ್ನ ಜರುಗಿದ ಉದ್ಘಾಟನಾ ಸಮಾರಂಭದಲ್ಲಿ ಹಿರಿಯಡಕ ವಿಜಯಾ ಬ್ಯಾಂಕಿನ ಮ್ಯಾನೇಜರ್ ಎಂ. ರಮೇಶ ಹೆಗ್ಡೆಯವರು ಧ್ವಜಾರೋಹಣ ಮಾಡಿದರು. ಹಿರಿಯಡಕ ಸರಕಾರಿ ಪದವಿಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕ ಕೆ. ದಿನಕರ ರಾವ್‌ರವರು ಕ್ರೀಡಾಳುಗಳಿಂದ ವಂದನೆ ಸ್ವೀಕರಿಸಿ, ಜ್ಯೋತಿ ಬೆಳಗಿಸಿ ಕ್ರೀಡೋತ್ಸವವನ್ನು ಉದ್ಘಾಟಿಸಿದರು.

ಸಂಜೆ ನಡೆದ ಬಹುಮಾನ ವಿತರಣಾ ಸಮಾರಂಭದ ಅಧ್ಯಕ್ಷತೆಯನ್ನು ಅಂಜಿ ವಿದ್ಯಾ ಮಹಿಳಾ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಬಸವರ ಶೆಟ್ಟಿಯವರು ವಹಿಸಿದ್ದು, ಡಾ| ಪಿ. ವಿ. ಆಚಾರ್ಯ ಮತ್ತು ಎಂ. ರಮೇಶ ಹೆಗ್ಡೆಯವರು ಬಹುಮಾನ ವಿತರಣೆ ಮಾಡಿದರು.

ಶಾಲಾ ಪದವೀಧರ ಮುಖ್ಯೋಪಾಧ್ಯಾಯ ಸಿ. ಆನಂದ ಹೆಗ್ಡೆಯವರು ಮೊದಲು ಸ್ವಾಗತಿಸಿ, ಸಹಾಯಕ ಅಧ್ಯಾಪಕ ಜಿ. ಗುರುವಪ್ಪ ಮತ್ತು ಕೆ. ವಿಠಲ ನಾಯಕ್ ವಂದಿಸಿದರು.



"ಯುಎಲ್‌ಐಪಿ ಒಬ್ಬ ಮನುಷ್ಯ ತನ್ನ ಕುಟುಂಬಕ್ಕೆ ಒದಗಿಸಬಹುದಾದ ಅತ್ಯುತ್ತಮ ರಕ್ಷಣೋಪಾಯ."
ಶ್ರೀಮತಿ ಪುಷ್ಪಾ ಪಿಳ್ಳೈ, ಗೃಹಿಣಿ.

ಯೂನಿಟ್ ಲಿಂಕ್ಡ್ ಇನ್‌ಶೂರೆನ್ಸ್ ಪ್ಲಾನ್ ನಿಮ್ಮ ಆಯ್ಕೆಗೆ ಸಿದ್ಧವಾಗಿದೆ. ರೂ. 3,000 ದಿಂದ ರೂ 40,000 ವರೆಗಿನ ಯಾವ ಗುರಿಮೊತ್ತವನ್ನಾದರೂ ನೀವು ಆಯ್ಕೆ ಮಾಡಬಹುದು. ಅಪಘಾತ ಮತ್ತು ಜೀವ ವಿಮಾ ರಕ್ಷೆ, ವಾಯಿದೆ ತುಂಬಿದ ನಂತರ 7.5% ಬೋನಸ್ ಮತ್ತು ಐಟಿ ಆಕ್ಟ್ 80c ಪ್ರಕಾರ ಪೂರ್ಣ ಆದಾಯ ತೆರಿಗೆಯ ವಿನಾಯಿತಿ, ಆಹಾ, ನಿಜಕ್ಕೂ ಎಷ್ಟೊಂದು ಲಾಭದಾಯಕ!

10—ವರ್ಷಗಳ ಯೋಜನೆಯ ಸದಸ್ಯತ್ವಕ್ಕೆ ಅರ್ಹ ವಯಸ್ಸನ್ನು ಈಗ 50 ವರ್ಷಗಳಿಗೆ ಹೆಚ್ಚಿಸಲಾಗಿದೆ.
ರೂ 40,000 ಗುರಿಮೊತ್ತಕ್ಕೆ ಪ್ರತಿ ವರ್ಷ ರೂ 4,000 ಪಾವತಿ ಮಾಡುವುದರಿಂದ, 10 ವರ್ಷಗಳ ಕೊನೆಯಲ್ಲಿ ನಿಮಗೆ ಸುಮಾರು ರೂ 69,000 ದಿಂದ ರೂ 72,000 ವರೆಗೆ ದೊರೆಯುತ್ತದೆ.
ಯುಎಲ್ ಐಪಿ ನಿಮ್ಮ ಕುಟುಂಬದ ಯೋಗಕ್ಷೇಮವನ್ನು ನೋಡಿಕೊಂಡರೆ, ಅದು ನಿಮ್ಮ ಕರಿಯರ್ ...

ನಿಮ್ಮ ಆಯ್ಕೆ ಜಾಣತನದಿಂದ ಕೂಡಿರಲಿ. ನಿಮ್ಮ ಸಮೀಪದಲ್ಲಿರುವ ಕೆನರಾ ಬ್ಯಾಂಕ್ ಶಾಖೆಯನ್ನಾಗಲೀ, ಅಥವಾ ಯೂನಿಟ್ ಟ್ರಸ್ಟ್‌ನ ಮುಖ್ಯ ಪ್ರತಿನಿಧಿಯನ್ನು ಅಥವಾ ಏಜೆಂಟ್‌ರನ್ನು ಸಂಪರ್ಕಿಸಿ.
ಹೆಚ್ಚಿನ ವಿವರಗಳಿಗೆ, ಈ ಕೂಪನ್‌ನ್ನು ಕೆಳಕಂಡ ವಿಳಾಸಕ್ಕೆ ಕಳುಹಿಸಿ!

Unit Trust of India, Post Bag 5063, Madras - 600 001
Please send me the free ULIP brochure
Name
Address
28

ULIP: "ಯೋಜನೆ ಒಂದು, ಫಲ ಹಲವು"

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ
ಹೆಡ್ ಆಫೀಸು: ಬೊಂಬಾಯಿ 400 020
(ಸರ್ಕಾರಿ ರಂಗದ ಹಣಕಾಸು ಸಂಸ್ಥೆ)
ಪ್ರಾದೇಶಿಕ ಕಚೇರಿ: ರೆಜಿನಾ ಮ್ಯಾನ್ಷನ್
46, ಸೆಕೆಂಡ್ ಲೈನ್ ಬೀಚ್
ಮದರಾಸು-600 001
ಫೋನ್: 27433, 24146
ಬೆಂಗಳೂರು ಆಫೀಸು: "ವರ್ಲ್ಡ್ ಟ್ರೇಡ್ ಸೆಂಟರ್,"
ಚೇಂಬರ್ ಆಫ್ ಕಾಮರ್ಸ್ ಬಿಲ್ಡಿಂಗ್,
ಕೆ.ಜಿ. ರೋಡ್, ಬೆಂಗಳೂರು-560 009.
ಫೋನ್: 28739
ಕರ್ನಾಟಕದಲ್ಲಿ ನಮ್ಮ ಮುಖ್ಯ ಪ್ರತಿನಿಧಿಗಳು:
ಫೋನ್: 28357/22357, ಫೋನ್: 22504
ಫೋನ್: 64025, ಫೋನ್: 26756, ಫೋನ್: 33
ಫೋನ್: 20771

ಮುಂಗಾರು

ಬುಧವಾರ, ಏಪ್ರಿಲ್ 22, 1987

ತಕ್ಷಣ ವಿಭಜಿಸಿ

ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಣ ಇಲಾಖೆಯನ್ನು ದಕ್ಷಿಣ ಮತ್ತು ಉತ್ತರ ಎಂಬ ಎರಡು ವಲಯಗಳಾಗಿ ವಿಂಗಡಿಸಿ ಉತ್ತರ ವಲಯಕ್ಕೆ ಉಡುಪಿಯನ್ನೂ, ದಕ್ಷಿಣ ವಲಯಕ್ಕೆ ಮಂಗಳೂರನ್ನೂ ಕೇಂದ್ರಗಳನ್ನಾಗಿ ಮಾಡಬೇಕೆಂದು ದ. ಕ. ಜಿಲ್ಲಾ ಪರಿಷತ್‌ನ ಶಿಕ್ಷಣ ಸಮಿತಿ ಒತ್ತಾಯಿಸಿದೆ.

ಶಿಕ್ಷಣ–

ನಮಗೆ ಬದುಕು ಏನೆಂದು ತೋರಿಸಿಕೊಡ ಬೇಕಾದ, ಏಕೆ ಎಂದು ತಿಳಿಸಿಕೊಡಬೇಕಾದ ಸಂಪತ್ತು. ನಮ್ಮಲ್ಲಿ ಪುರೋಗತಿಯ ಬಯಕೆ ಹುಟ್ಟಿಸಿ ಬೆಂಗಾಡಲ್ಲಿ ಭರವಸೆಯ ಚಿಲುಮೆ ಹುಟ್ಟಿಸಬೇಕಾದ ಸಾಧನ. ಆತ್ಮ ವಿಶ್ವಾಸ, ಬದುಕುವ ಛಲ ಮೂಡಿಸಬಲ್ಲ ಆಯುಧ.

ಆದರೆ ಇಂದೇನಾಗಿದೆ ?

ಶಿಕ್ಷಣ ರಂಗ ನಮ್ಮ ಕುಸಿದುಬಿದ್ದ ಆಶೋತ್ತರ ಗಳ ಪ್ರತೀಕವೆನ್ನಿಸಿದೆ. ಎಲ್ಲ ಸರ್ಕಾರಿ ಇಲಾಖೆಗಳಂತೆ ಇಲ್ಲೂ ಸಮಸ್ಯೆಗಳ ಜೇಡಬಲೆ ದಟ್ಟವಾಗಿ ಹೆಣೆದು ಕೊಂಡಿದೆ. ಫೈಲುಗಳ ಸಾಲುಗಳಡಿಯಲ್ಲಿ ವಿದ್ಯಾರ್ಥಿಗಳ, ಶಿಕ್ಷಕರ ಸುಂದರ ಕನಸುಗಳು ಧೂಳು ತಿನ್ನುತ್ತಿವೆ.

ರಾಜ್ಯದ ಸಾಕ್ಷರತೆ ಶೇಕಡಾ 37ರಷ್ಟು ಎಂಬ ಅಂದಾಜಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಾಕ್ಷರತೆ ಅದರ ದುಪ್ಪಟ್ಟು. ಬೆಳೆಯುತ್ತಿರುವ ಹಳ್ಳಿಗಳು, ರೂಪುಗೊಳ್ಳುತ್ತಿರುವ ನಗರಗಳು–ದಕ್ಷಿಣ ಕನ್ನಡದ ಮೂಲೆ ಮೂಲೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಹೆಚ್ಚಿಸಿವೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ 1807 ಹಿರಿಯ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಿವೆ. 214 ಪ್ರೌಢಶಾಲೆಗಳಿವೆ. 76ರಷ್ಟು ಪ್ರೌಢ ಮತ್ತು ಪಿಯುಸಿ ತರಗತಿಗಳನ್ನೊಳಗೊಂಡ ಕಿರಿಯ ಮಹಾವಿದ್ಯಾಲಯಗಳಿವೆ. ಇವುಗಳಲ್ಲಿ ಸರಕಾರಿ ಮತ್ತು ಏಯ್ಡೆಡ್ ಶಾಲೆಗಳೂ ಒಳಗೊಂಡಿವೆ.

ಬಹುಶಃ ರಾಜ್ಯದಲ್ಲಿ ಬೆಂಗಳೂರು ಜಿಲ್ಲೆಯೊಂದನ್ನು ಬಿಟ್ಟರೆ ಅತ್ಯಂತ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಜಿಲ್ಲೆ ದಕ್ಷಿಣ ಕನ್ನಡ.

ಇಷ್ಟೆಲ್ಲ ಶಿಕ್ಷಣ ಸಂಸ್ಥೆಗಳಿದ್ದೂ ಇಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು ಅನುಭವಿಸುತ್ತಿರುವ ಬವಣೆ ಹೇಳತೀರದಷ್ಟಿದೆ. ಎಲ್ಲಕ್ಕೂ ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ದೂರುವಂತಿಲ್ಲ. ಕೆಲಸದ ಒತ್ತಡ ಹೆಚ್ಚಿದಂತೆಲ್ಲ ಸಮಸ್ಯೆಗಳು ತಾವಾಗೇ ಬೆಳೆಯುತ್ತವೆ. ಶಿಕ್ಷಕರ ಸಂಬಳ, ಶಿಕ್ಷಣ ಸಂಸ್ಥೆಗಳ ಅನುದಾನ, ಶಿಕ್ಷಕರ ನೇಮಕಾತಿ, ಶಾಲಾಕಟ್ಟಡಗಳ ದುರವಸ್ಥೆ ಹೀಗೆ ಎಲ್ಲ ಕಡೆಗಳಲ್ಲೂ ಫೈಲುಗಳು ಬೆಳೆಯತೊಡಗುತ್ತವೆ.

ಫೈಲುಗಳು ಬೆಳೆಯತೊಡಗಿದುವೆಂದರೆ ಅಲ್ಲಿ ಚಕ್ರವ್ಯೂಹ ನಿರ್ಮಾಣವಾಗತೊಡಗಿತೆಂದೇ ಅರ್ಥ. ಆಗ ವಿಶ್ವಾಲ ಬದುಕು, ದೀರ್ಘ ಆಲಸ್ಯ ಘೇರಕಟ್ಟಿಕೊಂಡಿರುತ್ತದೆ. ನಡೆಯಬೇಕಾದ ದಾರಿಯಲ್ಲಿ ಕತ್ತಲೆಯ ಮುಸುಕು ಆವರಿಸುತ್ತದೆ.

ಈಗಲೂ ನಮ್ಮಲ್ಲಿ ಕಟ್ಟಡಗಳಿಲ್ಲದ, ಇದ್ದರೂ ಕುಸಿದು ಬೀಳಲು ಸನ್ನದ್ಧವಾಗಿರುವ ಶಿಕ್ಷಣ ಸಂಸ್ಥೆಗಳಿವೆ. ಹರದಾರಿ ನಡೆದು ಶಾಲೆ ತಲುಪಬೇಕಾದ ಕುಗ್ರಾಮಗಳಿವೆ. ಕಬಡ್ಡಿಗೂ ಸಾಲದ ಅಂಗಳದಲ್ಲಿ ಕ್ರಿಕೆಟ್ ಆಡಬೇಕಾದ (ಅ)ವ್ಯವಸ್ಥೆಯಿದೆ.

ಕಾಂಟ್ರಾಕ್ಟುಗಳ ನೆವಕ್ಕೆ ಹಗಲು ಸಿಕ್ಕಿಸಿ ದಿನ ದೂಡುವ ಅಧ್ಯಾಪಕರಿದ್ದಾರೆ. ಕನಸುಗಳೇ ಬತ್ತಿಹೋಗಿರುವ ವಿದ್ಯಾರ್ಥಿಗಳಿದ್ದಾರೆ. ಬದುಕಿನ ಮಾರ್ಗಗಳಿಲ್ಲ. ಪ್ರಯೋಗದ ಉತ್ಸಾಹವಿಲ್ಲ. ಸೋರುವ ಸೂರಿಗೆ ಮಕ್ಕಳ ಅಸಹಾಯಕತೆಯ ನಿಟ್ಟುಸಿರು.

ಹಾಗಾಗುವುದಕ್ಕೆ ಮುನ್ನ ನಾವು ಕಣ್ಣುತೆರೆಯೋಣ. ಜಿಲ್ಲಾಪರಿಷತ್ತಿನ ಶಿಕ್ಷಣ ಸಮಿತಿಯ ಒತ್ತಾಯದತ್ತ ಮನಗೊಡೋಣ.

ಬೆಂಗಳೂರು ಜಿಲ್ಲೆಯಲ್ಲಿ ಈಗಾಗಲೇ ಮೂವರು ವಿದ್ಯಾಂಗ ಉಪನಿರ್ದೇಶಕ (ಡಿಡಿಪಿಐ)ರಿದ್ದಾರೆ. ಹಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯನ್ನು ಎರಡು ವಿಭಾಗ ಮಾಡಿ ಇಬ್ಬರು ವಿದ್ಯಾಂಗ ಉಪನಿರ್ದೇಶಕರನ್ನು ನೇಮಿಸಲು ಏನಡ್ಡಿ ?

ಜಿಲ್ಲೆಯ ಹೆಚ್ಚಿನ ಶಿಕ್ಷಕರು ಪಟ್ಟಣಗಳಲ್ಲಿರಲು ಹೆಚ್ಚು ಆಸಕ್ತಿ ತೋರುತ್ತಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ ಕೊರತೆ ಉಂಟಾಗಿದೆ. ಈ ಕೊರತೆಯನ್ನು ನೀಗಿಸಲೂ ವಿಕೇಂದ್ರೀಕರಣ ಉತ್ತಮದಾರಿ.

ಕಾರ್ಯ ವ್ಯವಸ್ಥೆಯೊಂದಕ್ಕೆ ಗೆದ್ದಲು ಹಿಡಿದು ಅದು ಕುಸಿದು ಬೀಳುವವರೆಗೆ ಸುಮ್ಮನಿರುವುದು, ಅನಂತರ, ಅಯ್ಯೋ ಹೀಗಾಯಿತಲ್ಲಾ ಎಂದು ಗೋಳಿಡುವುದು ನಮ್ಮ ಜಾಯಮಾನ.

ಈ ವಿಷಯದಲ್ಲಾದರೂ ಆ ಜಾಯಮಾನ ತಪ್ಪಲಿ.

ಜಾತಿ ಇಲ್ಲ–ನೀತಿ ಮೊದಲೇ ಇಲ್ಲ!

ಪ್ರಿಯರೆ,

ನಮ್ಮದು ಜಾತ್ಯಾತೀತ ರಾಷ್ಟ್ರ. ಸ್ವಾತಂತ್ರ್ಯ ಸಿಕ್ಕದ ವೇಳೆ ಜನ ಸಮೂಹದ ಮುಂದೆ ಮುಂದೆ ಹೋಗುವ ನಾಯಕಮಣಿಗಳ ಬಾಯಿಂದ ಉದುರುವ ಸುಪ್ರಭಾತ ಕೂಡ ಇದೆ. ಪ್ರಕೃತಿ ಸಹಜವಾದ ಭೌತಿಕ ಶರೀರರಚನೆ ಮತ್ತು ಅದರ ಕ್ರಿಯೆ ಜಾತಿ ವಿಂಗಡಣೆಗೆ ಯಾವುದೇ ಆಧಾರಿತ ವ್ಯತ್ಯಾಸ ಕೂಡಾ ಇರುವುದಿಲ್ಲ. ಆ ಕಾರಣ ಯಾವನೂ ಕೂಡಾ ಜಾತೀಯವಾದ ಮಂಡನೆಯಲ್ಲಿ ತಾನು ಮೂರ್ಖನಾಗಿ ಗೋಚರಿಸುವ ಭಯವಿದ್ದು ಬಹಿರಂಗವಾಗಿ ಅದಕ್ಕೆ ಒತ್ತು ಕೊಡುವುದಿಲ್ಲ.

ಪಶ್ಚಿಮ ಬಂಗಾಳ-ಕೇರಳ ಚುನಾವಣೆಯಲ್ಲಿ ಭಾರೀ ಸೋಲು ಅನುಭವಿಸಿದ ಕಾಂಗ್ರೆಸ್‌ಪಕ್ಷದ ಧೃಢಿಗ್ಧತೆಯಲ್ಲಿ ವಿಪಕ್ಷಗಳು ಏಕತೆಗಾಗಿ ಮೈ ಕೊಡವಿಕೊಂಡು ಗರಿಬಿಚ್ಚಿವೆ.

ಮೂಲಭೂತವಾಗಿರುವ ಬೇರೆ ಬೇರೆ ತತ್ವಸಿದ್ಧಾಂತ, ಧೋರಣೆಗಳನ್ನು ತಮ್ಮ ಲಾಭದ ನಿರೀಕ್ಷೆಯಲ್ಲಿ ಒಪ್ಪಿಕೊಂಡು ಉಸಿರಾಡುವ ಇಲ್ಲಿಯ ಪಕ್ಷಗಳು ಮತ್ತು ಅದರ ನೇತಾರರು ಏಕತೆಯ ಸಂಕಲ್ಪದಲ್ಲೂ ಸ್ವಂತಿಕೆಯ ಹಿತವನ್ನು ಮರೆತುಬಿಡುವುದು ತೀರಾ ಕಷ್ಟ. ಈ ಆಲೋಚನೆ ಕ್ರಿಯಾಶೀಲವಾಗುವಲ್ಲಿ ಬಿ. ಜೆ. ಪಿ. ಯ ಬಗ್ಗೆ ಒಂದಿಷ್ಟು ಸಂದೇಹವುಳ್ಳ ವಿಪಕ್ಷೀಯರೊಬ್ಬರು ಬಿ.ಜೆ.ಪಿ. ಏಕತೆಯಲ್ಲಿ ಸೇರುವುದೋ? ಹೇಗೆ? ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ನಮಗೆ ಯಾರೂ ಅಸ್ಪೃಶ್ಯರಲ್ಲ ಎಂದು ಜನತಾ ಪಕ್ಷದ ವಕ್ತಾರರೊಬ್ಬರು ಹೇಳಿದ್ದು ನೆನಪಿಡಬೇಕಾದ ವಿಚಾರ.

ಇಲ್ಲಿ ಬಹಿರಂಗವಾಗಿ ಮತ್ತು ಸಾರ್ವಜನಿಕವಾಗಿ ಜಾತಿ ಎಂಬುದು ಯಾರಿಗೂ ಇಲ್ಲ. ಆ ಸಂಬಂಧ ಭಾರೀ ಸ್ವಚ್ಛವಾಗಿ ಮತ್ತು ಉದಾರವಾಗಿ ಬಾಯಿಂದ ಮಾತು ಉದುರುತ್ತದೆ! ಮನೆಯ ವಠಾರಕ್ಕೆ ಬಂದಾಗ ಮಾತ್ರ ತನ್ನ ಜಾತಿ ಸ್ವಭಾವ ಹೆಡೆ ಬಿಚ್ಚುತ್ತದೆ! ಇದು ರಾಜಕೀಯದ ಪಕ್ಷ ಚಾತಿಯಲ್ಲೂ ಆಗಿ ಹೋದ ಘಟನೆ!

ಸಾರ್ವಜನಿಕ ಸಭೆಯಲ್ಲಿ ಜಾತ್ಯಾತೀತ ಸಂಬಂಧ ತಾನು ಭೋಗಳಿದ್ದು, ಜಾತೀಯ ವಾದವನ್ನು ವಿರೋಧಿಸಿ ಮೇಜು ಗುದ್ದಿ

ಅನಿಸಿಕೆ

ಆರ್ಭಟಿಸಿದ್ದು ಮನೆ ಸೇರಿದ್ದ ತಕ್ಷಣ ಎಲ್ಲ ಮರೆತು ಹೋಗುತ್ತದೆ!

ಜಾತಿ ಇಲ್ಲಿ ಸಾರ್ವಜನಿಕವಾದ ಪ್ರಕಟಣೆಯಲ್ಲಿ ನೀತಿ ಮೊದಲೇ ಇಲ್ಲ. ಇದು ಸ್ವಂತ ಆಚಾರದ ನಡವಳಿಕೆಯಲ್ಲ. ಇದು ಭಾರತೀಯ ಜನರ ಬದುಕಿನ ಎಲ್ಲ ಸಂದರ್ಭಗಳಲ್ಲೂ ವ್ಯಕ್ತವಾಗುವ-ಆಗುತ್ತಿರುವ ಒಂದು ದ್ವಂದ್ವ ನೀತಿ. ರಾಜಕೀಯ ಸಂದರ್ಭದಲ್ಲೂ ಇದೇ ಫೋಟೋ ಕಾಪಿ.

ಇಲ್ಲಿ ಎರಡು ತೆರನಾದ ಮೌಲ್ಯಗಳು. ಸಂಪ್ರದಾಯಕ್ಕೊಂದು-ಸ್ವಂತಿಕೆಯ ಆಚಾರಕ್ಕೊಂದು ಇದು ಡಿ. ಎ. ಜಿ. ಮಾತು. ಹೊರಗಿನ ತೋರ್ಪಡಿಕೆಗೊಂದು ರೀತಿ ಬೇರೆ. ಒಳಗಿನ ಸ್ವಭಾವಕ್ಕೊಂಬ ನೀತಿಯೇ ಬೇರೆ.

ಹೊರಗಿನ ಸಮಾಜದ ವ್ಯವಹಾರದಲ್ಲಿ ನಮಗೆ ಎಲ್ಲರೂ ಸ್ಪೃಶ್ಯರು ಸಮಾನರು. ಇದಕ್ಕೆ ಕಾನೂನಿನ ನಿರ್ಬಂಧ ಕೂಡ ಇರುವುದರಿಂದ. ಸಹಬಾಳ್ವೆಗೆ ಅರ್ಹರಾದವರು ಕೂಡಾ. ಮನೆಗೆ ಬಂದಾಗ ಮಾತ್ರ ಒಬ್ಬ ಶೂದ್ರ, ಅಸ್ಪೃಶ್ಯ ತನಗಿಂತ ಕೀಳದವ, ತನಗಿಂತ ಕೆಳಜಾತಿಯವ. ಕೆಳ ಅಂ... ಸ್ತಿನವನಾಗಿ ಗೋಚರಿಸುತ್ತಾನೆ.

ಎಂಥ ಜಾಣನಿರಿ ನೀರು ಕೇಳಿದರೆ ಆತನ ಕೈಬೊಗಸೆಗೆ ನೀರನ್ನು ಎತ್ತಿ ಹೊ... ಯ್ಯುತ್ತಾನೆ ಶ್ರೀನಿವಾಸ. ತನ್ನ ಮನೆ... ತೋಟದಲ್ಲಿ ಆತ ಎತ್ತಿ ಕೂಡಾ ನೀರು ಕುಡಿಯಬಾರದು. ಅದು ಅಶುದ್ಧವಾಗುತ್ತದೆ. ಎರಡು ತೆರನಾಗಿ ಗೋಚರಿಸುವ ಮತ್ತು ಕ್ರಿಯಾಶೀಲವಾಗುವ ಈ ಜೀವನ ಮೌಲ್ಯಗಳು-ಆದರ್ಶ ಪುರೋಗಾಮಿ ಎನಿಸುವ ತತ್ವಸಿದ್ಧಾಂತಗಳು ರಾಜಕೀಯ ರಂಗದಲ್ಲೂ ಅಷ್ಟೇ ಉಳಿದುಕೊಂಡಿದೆ. ಹಸನಾಗಿ ಬೇರುಬಿಟ್ಟ ಈ ಮೌಲ್ಯದ ಬೇರುಗಳು ಇನ್ನೂ ಸಾರವನ್ನು ಹುಡುಕಿಕೊಂಡೇ ಆಳಕ್ಕೆ ಇಳಿಯುತ್ತವೆ.

ಒಳಗಿನ ಈ ಅನಿವಾರ್ಯವಾದ ತತ್ವ, ಸಿದ್ಧಾಂತ, ಧ್ಯೇಯಧೋರಣೆಯಲ್ಲಿ ಸ್ವಂತಿಕೆಯ ಹಿತಾಕಾಂಕ್ಷೆಯಲ್ಲಿರುವ ಸ್ವಾರ್ಥ ಸಂಚಯನದಲ್ಲಿ ಸಹಜವಾಗಿ ವೈರುಧ್ಯ ತಾಳುವ ಯಾವುದೇ ಪಕ್ಷಗಳಾಗಲೀ ತಾವು ಒಂದಾಗುತ್ತೇವೆಂಬ ಸಾಧನೆ ಬರೀ ಕನಸು. ಜಾತಿನೀತಿಯ ಸಂಘರ್ಷದಲ್ಲಿ ಭಿನ್ನಾಭಿಪ್ರಾಯವೆಂಬುದು ಮಾನವ ಸಹಜಗುಣವಾಗಿರುವುದು ಅಳಿದು ಹೋಗುವಲ್ಲಿ ತನಕ ಈ ಒಮ್ಮತದ ಚಿಂತನೆ ಕೂಡಾ ಬರೀ ತಾತ್ಕಾಲಿಕವಾಗುತ್ತದೆ.

ಕೆ. ಜೆ. ಶೆಟ್ಟಿ

ಕಡಂದಲೆ

ಅಧಿಕಾರಿಯ ಪರವಾನಿಗೆ ಬೇಡ

ಪ್ರಿಯರೆ,

ಉಡುಪಿಯಲ್ಲಿ ಆಹಾರ ವಸ್ತುಗಳ ತಯಾರಕರು, ವಿತರಕರು, ದಾಸ್ತಾನುಗಾರರು ಮತ್ತು ಮಾರಾಟಗಾರರು ಈ ತಿಂಗಳ ಅಂತ್ಯದೊಳಗೆ ತಕ್ಕ ಶುಲ್ಕಗಳನ್ನು ತೆತ್ತು ಸ್ಥಳೀಯ ಆರೋಗ್ಯ ಅಧಿಕಾರಿಯಿಂದ (ಅಂದರೆ ಉಡುಪಿ ಸರಕಾರಿ ಆಸ್ಪತ್ರೆಯ ಸಿವಿಲ್ ಸರ್ಜನ್‌ರಿಂದ) ಪರವಾನಿಗೆಗಳನ್ನು ಪಡೆಯತಕ್ಕದ್ದು ಎಂದೆನ್ನುವ ತಪ್ಪು ಪ್ರಕಟಣೆಯೊಂದು ಈಚೆಗೆ ದಿನ ಪತ್ರಿಕೆಗಳಲ್ಲಿ ಕಾಣಿಸಿಕೊಂಡಿದೆ.

ಯಥಾರ್ಥವಾಗಿ ಕರ್ನಾಟಕ ಸರಕಾರದ ಹೊಸ ನಿಯಮಗಳ ಪ್ರಕಾರ ಕೇಂದ್ರ ಸರಕಾರದ 48–ಎ ನಂಬ್ರದ ಆಹಾರ ಕಲಬೆರಕೆ ನಿಯಮದಲ್ಲಿ ಹೇಳಲಾಗಿರುವಂಥ ಆಹಾರ ವಸ್ತುಗಳ (ಅಂದರೆ 'ಫುಡ್ ಕಲರ್ಸ್' ಎಂಬವುಗಳ) ವ್ಯವಹಾರಕ್ಕೆ ಮಾತ್ರ ಆರೋಗ್ಯ ಅಧಿಕಾರಿಯ ಪರವಾನಿಗೆ ಬೇಕು. ಹಾಗಾಗಿ ಉಡುಪಿ

ಓದುಗರ ಕೋರಿಕೆ

ಸಿವಿಲ್ ಸರ್ಜನ್‌ರ ಪ್ರಕಟಣೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಸದ್ಯದಲ್ಲಿಯೇ ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿಯನ್ನು ಸಲ್ಲಿಸಲಾಗುವುದು. ಅಷ್ಟೇ ಅಲ್ಲ ಸಕಲ ವರ್ಗಗಳ ವ್ಯಾಪಾರಸ್ಥರು ಪುರಸಭೆಯಿಂದ ಪರವಾನಿಗೆಗಳನ್ನು ಪಡೆದಿರತಕ್ಕದ್ದೆಂಬ ವಿಧಿಯು ಈಗಾಗಲೇ ಇರುವುದರಿಂದ ಬೇರೊಂದು ಬಗೆಯ ಪರವಾನಿಗೆಗಳನ್ನೂ ಅವರುಗಳು ಹೊಂದಿರತಕ್ಕದ್ದೆಂದು ವಿಧಿಸಲು ಬರುವುದಿಲ್ಲ ಎಂಬ ವಾದವನ್ನು ಕೂಡಾ ಉಚ್ಚ ನ್ಯಾಯಾಲಯದಲ್ಲಿ ಸದ್ಯದಲ್ಲಿಯೇ ಮಂಡಿಸಲಾಗುವುದು. ಅತನ್ಮಧ್ಯೆ ವ್ಯಾಪಾರಸ್ಥರು ಯಾರೂ ಉಡುಪಿ ಸಿವಿಲ್ ಸರ್ಜನ್‌ರ ಪ್ರಕಟಣೆಯಲ್ಲಿ ಹೇಳಿರುವಂಥ ಪರವಾನಿಗೆಗಳನ್ನು ಕೋರಬೇಕಾಗಿಲ್ಲವೆಂದು ಬಳಕೆದಾರರ ವೇದಿಕೆ, ಉಡುಪಿ ಇದರ ಸ್ಪಷ್ಟೀಕರಣವಿದೆ.

—ಕೆ. ನಾರಾಯಣ ರಾವ್

ಬಳಕೆದಾರರ ವೇದಿಕೆ

ಉಡುಪಿ

ಸಮಗ್ರ ಗ್ರಾಮೀಣ ಯೋಜನೆಯನ್ನು ಉತ್ತಮ ಕಾರ್ಯವೆಸಗಿ ಬಂಟ್ವಾಳ ತಾಲೂಕಿನಲ್ಲೇ ಮೊದಲ ಸ್ಥಾನ ಪಡೆದ ವಿಜಯಾ ಬ್ಯಾಂಕಿನ ಸಿದ್ಧಕಟ್ಟೆ ಶಾಖೆಗೆ ದೊರೆತ ಪ್ರಶಸ್ತಿಯನ್ನು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರಹೆಗ್ಗಡೆ ಅವರು ಬ್ಯಾಂಕಿನ ಮ್ಯಾನೇಜರ್ ಕೆ. ವಿಶ್ವಾಸಂದ ಅಳ್ವ ಅವರಿಗೆ ಇತ್ತೀಚೆಗೆ ನೀಡಿದಾಗ.

'ಅಂಬೇಡ್ಕರ್ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿ'

ಪುತ್ತೂರು, ಏ. 21– "ಡಾ।ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಅವರ ಚಿಂತನೆಗಳು ಜನತೆಗೆ ತಲುಪುವಂತೆ ಕರ್ನಾಟಕ ಸರಕಾರ ವ್ಯವಸ್ಥೆ ಮಾಡಬೇಕು" ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಂ.ದೇವದಾಸ್ ಒತ್ತಾಯಿಸಿದರು.

ಇಲ್ಲಿನ ಕೋರ್ಟ್ ಮೈದಾನದಲ್ಲಿ ಇತ್ತೀಚೆಗೆ ನಡೆದ ಡಾ।ಅಂಬೇಡ್ಕರ್ ಅವರ 96ನೇ ಜನ್ಮ ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಈ ದಿನಾಚರಣೆಯಿಂದ ದಲಿತರ ಸ್ವಾಭಿಮಾನ ಬೆಳೆಯಬೇಕು ಎಂದು ದ.ಸಂ.ಸ ಸಂಘಟನಾ ಸಂಚಾಲಕ ಡಿ.ಬಿ.ಸಾಲಿಯಾನ್ ಹೇಳಿದರಲ್ಲದೆ "ನಮ್ಮ ಹೆಣ್ಣುಮಕ್ಕಳನ್ನು ವಿದ್ಯಾವಂತೆಯರನ್ನಾಗಿಸಬೇಕು" ಎಂದು ಕರೆಯಿತ್ತರು.

ಶಿಕ್ಷಣ, ಸಂಘಟನೆ, ನ್ಯಾಯ ಈ ಮೂರು ಮೌಲ್ಯಗಳಿಗಾಗಿ ದಲಿತರು ಹೋರಾಟ ನಡೆಸಬೇಕು ಎಂದು ಡಿ.ಕೇಶವ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ ಜಿಲ್ಲಾ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಕಲ್ಯಾಣಾಧಿಕಾರಿ ಚಂದ್ರಶೇಖರ ಮೂರ್ತಿಯವರು ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಿಗೆ ಸರಕಾರ ನೀಡುತ್ತಿರುವ ಸೌಕರ್ಯಗಳ ಬಗ್ಗೆ ವಿವರಿಸಿದರು.

ಇದಕ್ಕೂ ಮುನ್ನ ದಲಿತರು ನೆಹರೂ ನಗರದಿಂದ ಕೋರ್ಟು ಮೈದಾನದವರೆಗೆ ಮೆರವಣಿಗೆಯಲ್ಲಿ ಸಾಗಿದರು.

ಮಂಗಳೂರು ದಲಿತ ಕಲಾಮಂಡಲದ ಸದಸ್ಯರಿಂದ ಹೋರಾಟದ ಹಾಡುಗಳ ಕಾರ್ಯಕ್ರಮ ನಡೆಯಿತು. ದಸಂಸ ಸಂಚಾಲಕ ಕೆ.ಗೋಪಾಲ ವಂದಿಸಿದರು.

ಹೆಮ್ಮಾಡಿ ಮಂ. ಪ. ಪ್ರಧಾನರಾಗಿ ಸೋಮಶೇಖರ್ ಶೆಟ್ಟಿ

ಕುಂದಾಪುರ, ಏ. 21– ಹೆಮ್ಮಾಡಿ ಮಂಡಲ ಪಂಚಾಯತ್ ಪ್ರಧಾನರಾಗಿ ಸೋಮಶೇಖರ ಶೆಟ್ಟಿ ಚುನಾಯಿತರಾಗಿ



ದ್ದಾರೆ. ವ್ಯಕ್ತಿಯಲ್ಲಿ ಕೃಷಿಕರಾಗಿರುವ ಶೆಟ್ಟಿಯವರು ದೇವಲಕುಂದ ಗ್ರಾಮ ನಿವಾಸಿ.

ಸ್ತ್ರೀ ವೇಷಧಾರಿಗೆ ಸನ್ಮಾನ

ಮಂಗಳೂರು, ಏ. 21–ಸ್ತ್ರೀವೇಷಧಾರಿ ಕಾಪು ಕೇಶವ ಅವರನ್ನು ಇಲ್ಲಿಗೆ ಸಮೀಪದ ಕಳಕ್ಕೂರು ಗ್ರಾಮಸ್ಥರು ಇತ್ತೀಚೆಗೆ ಸನ್ಮಾನಿಸಿದರು.

ಪಟೇಲ್ ನಾರಾಯಣ ಶೆಟ್ಟಿ ಅಧ್ಯಕ್ಷತೆ ವಹಿಸಿದರು. ಕಳಕ್ಕೂರು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀಕರಯ್ಯ ಮುಖ್ಯ ಅತಿಥಿಯಾಗಿದ್ದರು. ನಿವೃತ್ತ ಹಿಂದಿ ಶಿಕ್ಷಕ ಶ್ರೀನಿವಾಸ ಭಟ್ ಕೇಶವ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು.

ಕಟೀಲು ದೇವಸ್ಥಾನದ ಅರ್ಚಕ ಗೋಪಾಲಕೃಷ್ಣ ಅಸ್ರಣ್ಣ ಉಪಸ್ಥಿತರಿದ್ದು ಶುಭಕೋರಿದರು. ಶಿಕ್ಷಕ ನಾರಾಯಣ ಭಂಡಾರಿ ಸ್ವಾಗತಿಸಿದರು. ಕೆ. ಚೆಲುವಯ್ಯ ಕಾರ್ಯಕ್ರಮ ನಿರ್ವಹಿಸಿದರು. ರಾಘವೇಂದ್ರ ಭಟ್ ವಂದಿಸಿದರು.

ಕೊನೆಯಲ್ಲಿ ಕಾಡ್ಲ ಮೇಳದವರಿಂದ ತುಳು ಯಕ್ಷಗಾನ ಬಯಲಾಟ ನಡೆಯಿತು.

ಹಲ್ಲೆ ಮಾಡಿ ಸರ ಅಪಹರಣ

ಮಂಗಳೂರು, ಏ. 21— ನಗರದ ಕುದ್ರೋಳಿಯಲ್ಲಿ ನಿನ್ನೆ ಅಶ್ವಿನಿ ಪದ್ಮನಾಭ ನಾಯಕ್ ಎಂಬವರು ದಾರಿಯಲ್ಲಿ ಹೋಗುತ್ತಿದ್ದಾಗ ಗುಂಪೊಂದು ಅವರ ಮೇಲೆ ಹಲ್ಲೆ ಮಾಡಿ ಕುತ್ತಿಗೆಯಲ್ಲಿದ್ದ ಚಿನ್ನದ ಸರ ಅಪಹರಿಸಲಾಯಿತೆಂದು ಪೊಲೀಸರಿಗೆ ದೂರು ನೀಡಲಾಗಿದೆ. ಬಂದರು ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ಗಣಪತಿ ಅವರು ಕೇಸು ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಿದ್ದಾರೆ.

1-4-1987ರಿಂದ ಬದಲಾದ ರೈಲ್ವೆ ವೇಳಾಪಟ್ಟಿ

ಮಂಗಳೂರಿನಿಂದ ಹೊರಡುವ ಬಂಡಿಗಳು

ರೈಲ್ ನಂ.	ರೈಲಿನ ವಿವರ		ಹೊರಡುವ ಸಮಯ
50	ಮಂಗಳೂರು-ತ್ರಿವೆಂಡ್ರಂ ಪರಶುರಾಮ ಎಕ್ಸ್‌ಪ್ರೆಸ್	ಬೆಳಗ್ಗೆ	4-15
87	ಮಂಗಳೂರು-ಗೋರಖ್‌ಪುರ ಲಿಂಕ್ ಎಕ್ಸ್‌ಪ್ರೆಸ್ (ಗುರುವಾರ ಮಾತ್ರ)	"	5-25
131	ಮಂಗಳೂರು-ನಿಜಾಮುದ್ದೀನ್ ಮಂಗಳಾ ಎಕ್ಸ್‌ಪ್ರೆಸ್ (ಮಂಗಳವಾರ, ಗುರುವಾರ ಬಿಟ್ಟು ಇತರ ಎಲ್ಲಾ ದಿನಗಳಲ್ಲಿ)	"	6-25
84	ಮಂಗಳೂರು-ಪಾಲ್ಘಾಟ್ ಲಿಂಕ್ ಎಕ್ಸ್‌ಪ್ರೆಸ್	"	7-00
526	ಮಂಗಳೂರು-ಕಣ್ಣಾನೂರು ಪ್ಯಾಸೆಂಜರ್	"	10-05
2	ಮಂಗಳೂರು.ಮದ್ರಾಸ್ ಮೇಲ್	ಮಧ್ಯಾಹ್ನ	12-45
528	ಮಂಗಳೂರು-ಕಣ್ಣಾನೂರು ಪ್ಯಾಸೆಂಜರ್	ಸಂಜೆ	5-00
30	ಮಂಗಳೂರು-ತ್ರಿವೆಂಡ್ರಂ ಮಲಬಾರ್ ಎಕ್ಸ್‌ಪ್ರೆಸ್	"	6-00
28	ಮಂಗಳೂರು-ಮದ್ರಾಸ್ ವೆಸ್ಟ್‌ಕೋಸ್ಟ್ ಎಕ್ಸ್‌ಪ್ರೆಸ್	ರಾತ್ರಿ	8-50
530	ಮಂಗಳೂರು-ಚೆರ್ವತ್ತೂರು ಪ್ಯಾಸೆಂಜರ್	ರಾತ್ರಿ	9-30

ವಿ. ಸೂ:
1) ಬೆಳಗ್ಗೆ 4-40ಕ್ಕೆ ಮಂಗಳೂರಿನಿಂದ ಹೊರಡುವ ಮಂಗಳೂರು-ಕಣ್ಣಾನೂರು ಪ್ಯಾಸೆಂಜರ್ ರೈಲು ರದ್ದಾಗಿದೆ. ಈ ರೈಲು ಬೆಳಗ್ಗೆ 7-05ಕ್ಕೆ ಚೆರ್ವತ್ತೂರಿನಿಂದ ಹೊರಡುವುದು.
2) ನಂಬ್ರ 84ನೇ ಮಂಗಳೂರು-ಪಾಲ್ಘಾಟ್ ಲಿಂಕ್ ಎಕ್ಸ್‌ಪ್ರೆಸ್‌ನಲ್ಲಿ ಕರ್ನಾಟಕ-ಕೇರಳ ಎಕ್ಸ್‌ಪ್ರೆಸ್ (ನಂ. 125)ಗೆ 2 ಕೋಚ್‌ಗಳು ಮಂಗಳವಾರ ಮತ್ತು ಶನಿವಾರ ಇವೆ.
3) ನಂ. 530 ಮಂಗಳೂರು-ಚೆರ್ವತ್ತೂರು ಪ್ಯಾಸೆಂಜರ್ ಆದಿತ್ಯವಾರ ಓಡುವುದಿಲ್ಲ.

ಮಂಗಳೂರಿಗೆ ಬರುವ ಬಂಡಿಗಳು

			ತಲುಪುವ ವೇಳೆ
27	ಮದ್ರಾಸ್-ಮಂಗಳೂರು ವೆಸ್ಟ್‌ಕೋಸ್ಟ್ ಎಕ್ಸ್‌ಪ್ರೆಸ್	ಬೆಳಗ್ಗೆ	5-50
529	ಚೆರ್ವತ್ತೂರು-ಮಂಗಳೂರು ಪ್ಯಾಸೆಂಜರ್ (ಗುರುವಾರ ಮಾತ್ರ)	"	8-30
29	ತ್ರಿವೆಂಡ್ರಂ-ಮಂಗಳೂರು ಮಲಬಾರ್ ಎಕ್ಸ್‌ಪ್ರೆಸ್	"	9-45
523	ಕಣ್ಣಾನೂರು-ಮಂಗಳೂರು ಪ್ಯಾಸೆಂಜರ್	"	11-05
1	ಮದ್ರಾಸ್-ಮಂಗಳೂರು ಮೇಲ್	ಅಪರಾಹ್ನ	1-15
519	ಕಲ್ಲಿಕೋಟೆ-ಮಂಗಳೂರು ಪ್ಯಾಸೆಂಜರ್	"	2-45
83	ಪಾಲ್ಘಾಟ್-ಮಂಗಳೂರು ಲಿಂಕ್ ಎಕ್ಸ್‌ಪ್ರೆಸ್	ಸಂಜೆ	5-35
132	ನಿಜಾಮುದ್ದೀನ್-ಮಂಗಳೂರು ಮಂಗಳ ಎಕ್ಸ್‌ಪ್ರೆಸ್ (ಸೋಮವಾರ, ಮಂಗಳವಾರ ಹೊರತು)	ಸಂಜೆ	7-40
88	ಗೋರಖ್‌ಪುರ್-ಮಂಗಳೂರು ಲಿಂಕ್ ಎಕ್ಸ್‌ಪ್ರೆಸ್ (ಮಂಗಳವಾರ ಮಾತ್ರ)	ಸಂಜೆ	7-40
49	ತ್ರಿವೆಂಡ್ರಂ-ಮಂಗಳೂರು ಪರಶುರಾಮ ಎಕ್ಸ್‌ಪ್ರೆಸ್	ರಾತ್ರಿ	8-45

ವಿ. ಸೂ:
1) ರಾತ್ರಿ 9-25ಕ್ಕೆ ತಲುಪುತ್ತಿದ್ದ ಕಣ್ಣಾನೂರು-ಮಂಗಳೂರು ಪ್ಯಾಸೆಂಜರ್ ರದ್ದಾಗಿದೆ. ಅದು ಚೆರ್ವತ್ತೂರಿನವರೆಗೆ ಮಾತ್ರ.
2) ನಂ. 83ನೇ ಪಾಲ್ಘಾಟ್-ಮಂಗಳೂರು ಲಿಂಕ್ ಎಕ್ಸ್‌ಪ್ರೆಸ್‌ನಲ್ಲಿ ಸೋಮವಾರ ಮತ್ತು ಶುಕ್ರವಾರ ಕೇರಳ-ಕರ್ನಾಟಕ ಎಕ್ಸ್‌ಪ್ರೆಸ್ (ನಂ. 126)ಗೆ 2 ಕೋಚ್‌ಗಳಿವೆ.
3) ನಂ. 529 ಚೆರ್ವತ್ತೂರು-ಮಂಗಳೂರು ಪ್ಯಾಸೆಂಜರ್ ಆದಿತ್ಯವಾರ ಇರುವುದಿಲ್ಲ.

ಮೀಟರ್ ಗೇಜ್

ಮಂಗಳೂರಿನಿಂದ

				ಹೊರಡುವ ವೇಳೆ
971	ಮಂಗಳೂರು-ಸುಬ್ರಹ್ಮಣ್ಯ ರಸ್ತೆ	ಪ್ಯಾಸೆಂಜರ್	ಬೆಳಗ್ಗೆ	7-40
285	ಮಂಗಳೂರು-ಬೆಂಗಳೂರು	ಮಂಗಳಾ ಫಾಸ್ಟ್‌ಪ್ಯಾಸೆಂಜರ್	ಸಂಜೆ	5-00
973	ಮಂಗಳೂರು-ಸುಬ್ರಹ್ಮಣ್ಯ	ಪ್ಯಾಸೆಂಜರ್	ಸಂಜೆ	6-30

ಮಂಗಳೂರಿಗೆ

				ತಲುಪುವ ವೇಳೆ
974	ಸುಬ್ರಹ್ಮಣ್ಯ-ಮಂಗಳೂರು	ಪ್ಯಾಸೆಂಜರ್	ಬೆಳಗ್ಗೆ	9-25
286	ಬೆಂಗಳೂರು-ಮಂಗಳೂರು	ಮಂಗಳಾ ಫಾಸ್ಟ್‌ಪ್ಯಾಸೆಂಜರ್	ಸಂಜೆ	6-30
972	ಸುಬ್ರಹ್ಮಣ್ಯ-ಮಂಗಳೂರು	ಪ್ಯಾಸೆಂಜರ್	ಸಂಜೆ	8-20

ಮುಂಗಾರು

ಮಂಗಳವಾರ, ಏಪ್ರಿಲ್ 14, 1987

ಅಸಾಮಾನ್ಯ ಸನ್ನಿವೇಶಕ್ಕೆ ಸಲ್ಲುವ ಮಾತು

ಈ ದೇಶದ ಹೊಸ ರಾಷ್ಟ್ರಪತಿಯ ಸ್ಥಾನಕ್ಕೆ ಸರ್ವಸಮ್ಮತ ಅಭ್ಯರ್ಥಿಯ ಆಯ್ಕೆ ಮಾಡುವ ವಿಚಾರದಲ್ಲಿ ತಾವು ವಿರೋಧ ಪಕ್ಷಗಳ ಜತೆ ಮಾತುಕತೆ ನಡೆಸಲು ಸಿದ್ಧರಿರುವುದಾಗಿ ಪ್ರಧಾನಿ ರಾಜೀವ್‌ಗಾಂಧಿ ಶುಕ್ರವಾರ ಸುಲ್ತಾನಪುರದಲ್ಲಿ ಹೇಳಿದರೆಂದು ವರದಿಯಾಗಿದೆ. ಇದೊಂದು ಅನಿರೀಕ್ಷಿತವೂ ಅರ್ಥಗರ್ಭಿತವೂ ಆದ ಹೇಳಿಕೆ.

ಲೋಕಸಭೆಯಲ್ಲಿ ಮೂರನೆಯ ಎರಡರಷ್ಟು ಸಂಖ್ಯಾಬಲ ಹೊಂದಿದ್ದು ಪ್ರಮುಖ ರಾಜ್ಯಗಳ ವಿಧಾನಸಭೆಗಳಲ್ಲಿ ಇಂದಿಗೂ ತಮಗೆ ಬೇಕಾದವರನ್ನು ರಾಷ್ಟ್ರಪತಿಯಾಗಿ ಆಯ್ಕೆ ಮಾಡುವ ಬಲ ಇರುವ ಪ್ರಧಾನಿ ರಾಜೀವ್‌ಗಾಂಧಿ ಸರ್ವಸಮ್ಮತ ಅಭ್ಯರ್ಥಿಯ ಆಯ್ಕೆಯ [illegible]

[illegible]

ರಾಷ್ಟ್ರದ ರಾಜಕೀಯ ಪ್ರಭುತ್ವ [illegible]

[illegible]

ಇದರಿಂದ ಅಪಾಯಗಳಿಂದ ಮುಕ್ತವಾಗಿ ರಾಜ್ಯಾಂಗವು ಸೂಕ್ಷ್ಮವಾಗಿ [illegible] ರಾಷ್ಟ್ರಪತಿಯ ಆಯ್ಕೆ [illegible] ರಾಜಕೀಯ ಹಿರಿಯರ ಮೇಲಾಗಬೇಕು. ರಾಜಕೀಯ ಗಣನೆ ಅಲ್ಲಿರಬಾರದು.

ದೇಶದ ಬಹುಮಂದಿ ಬುದ್ಧಿಜೀವಿಗಳು ಮತ್ತು ವಿಚಾರವೇತ್ತರು ಈ ಮಾತನ್ನು ಪದೇ ಪದೇ ಹೇಳಿದ್ದಾರೆ. ಇದರ ಬಗ್ಗೆ ಸಾಕಷ್ಟು ಜಿಜ್ಞಾಸೆಯೂ ನಡೆದಿದೆ. ಆದರೆ ದುರ್ದೈವವಶಾತ್ ಇದುವರೆಗೆ ಈ ತತ್ವವನ್ನು ಒಂದು ಸಮ್ಮತ ಸೂತ್ರವಾಗಿ ಅಂಗೀಕರಿಸಲು ಸಾಧ್ಯವಾಗಲಿಲ್ಲ. ರಾಜಕೀಯ ಪ್ರಭುತ್ವದ ಏಕಸ್ವಾಮ್ಯವೇ ಇದಕ್ಕೆ ಅಡ್ಡಿಯಾಯಿತು.

[illegible]

ಜನವಾಣಿಯ ವೈಚಿತ್ರ್ಯ?

ಸ್ವಾಮಿ,

[illegible] ಕಾರ್ಯಕ್ರಮಗಳಲ್ಲೊಂದಾದ [illegible] ಕಾರ್ಯಕ್ರಮವು 30-12-85ರಂದು ಮಂಗಳೂರಿನಲ್ಲಿ ನಡೆಯಿತು. ಸಾರ್ವಜನಿಕರೊಂದಿಗೆ ಸಚಿವರು ಎಂದು ಹೇಳಿಕೊಳ್ಳುವ ಈ ಕಾರ್ಯಕ್ರಮಕ್ಕೆ ಆಗಿನ ಸಚಿವರಾಗಿದ್ದ ಪಿ. ಜಿ. ಆರ್. [illegible] ಭಾಗವಹಿಸಿ, ಸಾರ್ವಜನಿಕರು ಅನೇಕ ಪ್ರಶ್ನೆಗಳನ್ನು ಮುಂಚಿತವಾಗಿಯೇ ತರಿಸಿ ಸಿದ್ಧಪಡಿಸಿಕೊಂಡ ಉತ್ತರಗಳೊಂದಿಗೆ ತಾವು ಸಾರ್ವಜನಿಕರ ಸಮಸ್ಯೆಗಳಿಗೆ ತೀರಾ ಪ್ರೀತಿಯಿಂದ ಸ್ಪಂದಿಸುತ್ತೇವೆ [illegible] ಆಯಿತು.

ಈ ಕಾರ್ಯಕ್ರಮಕ್ಕೆ ಜಿಲ್ಲೆಯಾದ್ಯಂತ ಸುಮಾರು 30 ಜನರು ಬಂದಿದ್ದರು. ಅವರೆಲ್ಲರಿಗೂ ತಾವು ಮೊದಲೇ ವಾರ್ತಾ ಇಲಾಖೆಗೆ ಕಳುಹಿಸಿದ್ದ ಪ್ರಶ್ನೆಗಳಲ್ಲಿ ಆಯ್ಕೆಯಾದ 2 ಪ್ರಶ್ನೆಗಳನ್ನು ಮಾತ್ರ ಕೇಳಲು ಅವಕಾಶವಿದ್ದಿತ್ತು. ಸಾರ್ವಜನಿಕರು ಬೇರೆ ಪ್ರಶ್ನೆಗಳನ್ನು ಕೇಳುವ [illegible] ಜನವಾಣಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲರಿಗೂ ಕಾಫಿ, ಊಟ ಮತ್ತು ಪ್ರಯಾಣ ಭತ್ಯೆಯನ್ನೂ ಕೊಡಲಾಗಿತ್ತು.

ಜನದನಿ

ಇಂತಹ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ [illegible] ಆ ಸಂದರ್ಭದಲ್ಲಿ [illegible] ಒಂದು ರೀತಿಯಲ್ಲಿ [illegible] ನಮ್ಮ ಪ್ರಶ್ನೆಗಳಿಗೆ ಉತ್ತರಕೊಟ್ಟು ಅವರಂತೆ ಮುಂದೆ ನಮ್ಮ ಸಲಹೆ ಮೇರೆಗೆ ತಕ್ಕ ಕ್ರಮ ಕೈಗೊಂಡು ತಿಳಿಸುವುದಾಗಿ ಸಚಿವರು ತಿಳಿಸಿದ್ದರು. ಆದರೆ ಈಗ ಜನವಾಣಿ ಕಾರ್ಯಕ್ರಮ ಮುಗಿದು ಒಂದು ವರ್ಷವೇ ಮೇಲಾದರೂ ಆ ಬಗ್ಗೆ ಯಾವ [illegible]

[illegible]

—ಎಸ್. ಅರುಣ್ ಪ್ರಕಾಶ್ [illegible]

[illegible]

...ಭಿವೃದ್ಧಿ ...ಗೆ ಸಮ್ಮತಿ

... ಕುರಿತಾದ ಹೆಚ್ಚಿನ ವಿವರಗಳಿಗೆ ಮತ್ತು ಅರ್ಹತೆಯುಳ್ಳವರು ಸಹಾಯಧನ ಪಡೆಯಲು ಮಂಗಳೂರಿನಲ್ಲಿರುವ ರಬ್ಬರ್ ಬೋರ್ಡ್‌ನ ವಲಯ ಕಚೇರಿಗೆ ಡೆಪ್ಯುಟಿ ಡೆವಲಪ್‌ಮೆಂಟ್ ಆಫೀಸರ್, ರಬ್ಬರ್ ಬೋರ್ಡ್ ರೀಜನಲ್ ಆಫೀಸು, ಕುದ್ಮುಲ್ ಲೇನ್ ಮಣ್ಣಗುಡ್ಡೆ, ಮಂಗಳೂರು 575003 (ದೂರವಾಣಿ 21229) ಈ ವಿಳಾಸವನ್ನು ಸಂಪರ್ಕಿಸಬಹುದೆಂದು ರಬ್ಬರ್ ಸಂಘದವರ್ಮಾರರೋರ್ವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಕಳ ತಾಲೂಕಿಗೆ ಪಡಿತರ ಬಿಡುಗಡೆ

ಕಾರ್ಕಳ, ಎ.13-1987ನೇ ಏಪ್ರಿಲ್ ತಿಂಗಳ ಬಾಬ್ತು ಕಾರ್ಕಳ ತಾಲೂಕಿನ ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಲಾಗಿದೆ.

ಅಕ್ಕಿ ಪಟ್ಟಣ ಪ್ರದೇಶಕ್ಕೆ ಕಾರ್ಡಿಗೆ 10 ಕೆ. ಜಿ. ಗ್ರಾಮಾಂತರ ಪ್ರದೇಶದ ಹಸಿರು ಕಾರ್ಡಿಗೆ 10ಕೆಜಿ, ಗ್ರಾಮಾಂತರ ಪ್ರದೇಶದ ಕೇಸರಿ ಕಾರ್ಡಿಗೆ 5ಕೆಜಿ, ಸಕ್ಕರೆ ಪಟ್ಟಣ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಕ್ಕೆ ಯೂನಿಟಿಗೆ 200 ಗ್ರಾಮ್ಸ್, ಗರಿಷ್ಠ 5ಕೆಜಿ. ಗೋಧಿ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಕ್ಕೆ 10ಕೆಜಿ ಮಿತಿ ದಂತೆ, ತಾಳೆಎಣ್ಣೆ ಪಟ್ಟಣ ಪ್ರದೇಶಕ್ಕೆ ಕಾರ್ಡಿಗೆ ಒಂದುಕೆಜಿ. ಗ್ರಾಮಾಂತರ ಪ್ರದೇಶಕ್ಕೆ 0.500ಗ್ರಾಂ. ಸೀಮೆಎಣ್ಣೆ ಪಟ್ಟಣ ಪ್ರದೇಶಕ್ಕೆ 15ಲೀಟರ್ ಮತ್ತು ಗ್ರಾಮಾಂತರ ಪ್ರದೇಶಕ್ಕೆ 5ಲೀಟರ್, ಬಿಡುಗಡೆಗೊಳಿಸಲಾದ ಆಹಾರ ಸಾಮಗ್ರಿಗಳನ್ನು ದಿನಾಂಕ 30-4-1987ರೊಳಗಾಗಿ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಯಿಂದ ಪಡಿತರ ಕಾರ್ಡುದಾರರು ಪಡೆದುಕೊಳ್ಳಬೇಕಾಗಿ ಕಾರ್ಕಳ ತಾಲೂಕು ತಹಸೀಲ್ದಾರರು ತಿಳಿಸಿರುತ್ತಾರೆ.

ಮುಂಬಯಿಯಲ್ಲಿ ಶನಿಮಹಾತ್ಮೆ ಪೂಜಾ ಉತ್ಸವ

ಮುಂಬಯಿ, ಎ. 13– ಇಲ್ಲಿನ ಜೋಗೇಶ್ವರಿಯ ಮೇಘವಾಡಿಯಲ್ಲಿರುವ ಓಂ ಶ್ರೀ ಶನಿಮಹಾತ್ಮ ಪೂಜಾ ಸಮಿತಿಯ ವಾರ್ಷಿಕೋತ್ಸವ ಹಾಗೂ ಶನಿ ಮಹಾತ್ಮೆ ಗ್ರಂಥ ಪಾರಾಯಣ ಮಂಗಲೋತ್ಸವವು ಇತ್ತೀಚೆಗೆ ನಡೆಯಿತು.

ಸಭಾರಂಭದ ಅಧ್ಯಕ್ಷತೆಯನ್ನು ಲಕ್ಷ್ಮಣ ಬಿ. ಕೋಟ್ಯಾನ್ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಭಾಸ್ಕರ ಶೆಟ್ಟಿ ಅವರು ಆಗಮಿಸಿದ್ದರು. ಡಾ। ಶಾಮು ಎಸ್. ಶೆಟ್ಟಿ, ಡಾ। ವಸಂತ ಕೆ. ಶೆಟ್ಟಿ, ಎ. ಬಿ. ಶೆಟ್ಟಿ, ಎಂ. ವಿ. ಕಿಣಿ, ಮಹಾಬಲ ಪೂಜಾರಿ ಹಾಗೂ ಆರ್. ವಿ ಮೂಡಬಿದ್ರಿ ಅವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಮಿತಿಯ ಮಾಜಿ ಅಧ್ಯಕ್ಷ ಲಕ್ಷ್ಮಣ ಪೂಜಾರಿ ಸ್ವಾಗತಿಸಿದರು. ಅಧ್ಯಕ್ಷ ಬಿ. ಸಿ. ಕೋಟ್ಯಾನ್ ಅತಿಥಿಗಳಿಗೆ ಹಾರಾರ್ಪಣೆ ಮಾಡಿದರು. ಖಜಾಂಚಿ ಎಸ್ ಬಿ. ಭವನ್ ಸಂದೇಶ ಓದಿದರು. ಕಾರ್ಯದರ್ಶಿ ವಿ. ಎಸ್. ಸುವರ್ಣ ವರದಿ ಓದಿದರು. ಎಸ್. ಎಸ್. ಶೆಟ್ಟಿ ವಂದಿಸಿದರು.

ಕಾರ್ಕಳದ ಎಂಟು ಬೀದಿಗೆ ಡಾಮರು

ಕಾರ್ಕಳ, ಎ. 13– ಕಾರ್ಕಳ ನಗರದ 8 ಪ್ರಮುಖ ಬೀದಿಗಳಿಗೆ 86-87ನೇ ಸಾಲಿನಲ್ಲಿ ಡಾಮರ್ ಹೊದಿಸುವ ಕೆಲಸವನ್ನು ಕೈಗೆತ್ತಿಕೊಂಡಿದ್ದು, ಇತ್ತರಲ್ಲಿಯೇ ಕೆಲವು ಬೀದಿಗಳಲ್ಲಿ ಡಾಮರ್ ಹಾಕುವ ಕಾಮಗಾರಿ ಮುಕ್ತಾಯ ಹಂತದಲ್ಲಿದೆ.

ಇನ್ನುಳಿದ ರಸ್ತೆಗಳಿಗೆ ಕೆಲವೇ ದಿನಗಳೊಳಗಾಗಿ, ಡಾಮರ್ ಹೊದಿಸಿ ಮುಕ್ತಾಯಗೊಳಿಸಲಾಗುವುದೆಂದು ಪುರಸಭಾ ಮುಖ್ಯಾಧಿಕಾರಿ, ಜಯಣ್ಣ ತಿಳಿಸಿದ್ದಾರೆ.

87-88ನೇ ಸಾಲಿಗೆ ಇನ್ನೂ ಹೆಚ್ಚಿನ ರಸ್ತೆಗಳಿಗೆ ಡಾಮರ್ ಹಾಕಿಸುವ ಬಗ್ಗೆ ನಿರ್ಧರಿಸಲಾಗಿದೆ, ಎಂದು ಜಯಣ್ಣ ತಿಳಿಸಿರುತ್ತಾರೆ.

21ಕ್ಕೆ ಅಡುಮರೋಳಿ ವಾರ್ಷಿಕ ಜಾತ್ರೆ

ಮಂಗಳೂರು, ಎ. 13- ಕಳೆದ ವರ್ಷ ಪುನಃಪ್ರತಿಷ್ಠೆಗೊಂಡು, ನೂತನ ಗರ್ಭಗುಡಿ ಹೊಂದಿರುವ ಅಡುಮರೋಳಿ ಶ್ರೀ ಮಹಾಕಾಳಿ ದೇವಸ್ಥಾನದ ವಾರ್ಷಿಕ ಜಾತ್ರೆ, 21ರಂದು [illegible]

[illegible]

ಕುಂದಾಪುರದಲ್ಲಿ ಸುಂದರ ನಾಯ್ಕರಿಗೆ ವಿದಾಯ

ಕುಂದಾಪುರ, ಎ. 13–ವಿಶೇಷ ಜಿಲ್ಲಾಧಿಕಾರಿಯಾಗಿದ್ದು ದ. ಕ. ಜಿಲ್ಲೆಯ ಅಭಿವೃದ್ಧಿಯಲ್ಲಿ ಎರಡು ವರ್ಷಗಳ ಕಾಲ ಮಹತ್ವದ ಪಾತ್ರ ವಹಿಸಿದ್ದ ಸುಂದರ್ ನಾಯ್ಕ ಅವರನ್ನು ಕುಂದಾಪುರದಲ್ಲಿ ಇತ್ತೀಚೆಗೆ ಹಾರ್ದಿಕವಾಗಿ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರದ ಉಪವಿಭಾಗಾಧಿಕಾರಿ ಅಶ್ವತ್ಥ ನಾರಾಯಣ ಗೌಡ ವಹಿಸಿದ್ದರು.

ಪತ್ನಿಸಮೇತರಾಗಿ ಬಂದಿದ್ದ ಸುಂದರ ನಾಯ್ಕ, ತಹಶಿಲ್ದಾರ ಅಮರನಾಥ ಸುಮತಿ, ಕ್ಷೇತ್ರಾಭಿವೃದ್ಧಿ ಅಧಿಕಾರಿ ವಿಠಲ ಶೆಟ್ಟಿ, ಪ್ರೊಬೇಷನರಿ ಎ. ಸಿ. ಯೋಗೇಂದ್ರ ತ್ರಿಪಾಠಿ, ವಕೀಲ ಕುಶಲ ಹೆಗ್ಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರಂಭದಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ವಿಠಲ ಶೆಟ್ಟಿ ಸ್ವಾಗತಿಸಿದರು.

ವಕೀಲ ಕುಶಲ ಹೆಗ್ಡೆ, ಪತ್ರಕರ್ತ ಯು. ಎಸ್ ಶೆಣೈ, ಪಂಚಾಯತ್ ಕಾರ್ಯದರ್ಶಿ ಶಿವಾನಂದ ಹೆಬ್ಬಾರ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಸ್. ಸಿ. ನಾಯಕ ಅಭಿವೃದ್ಧಿ ವಿಭಾಗದ ಎಸ್. ವಿ. ಮಯ್ಯ ಮುಂತಾದವರು ವೇದಿಕೆಯಲ್ಲಿ ಮಾತನಾಡಿದರು.

ತಹಶಿಲ್ದಾರ ಅಮರನಾಥ ಸುಮತಿ ಅವರು ಸುಂದರ ನಾಯ್ಕರ ಮಾರ್ಗದರ್ಶನ ಪ್ರಾಮಾಣಿಕತೆ, ನಿಷ್ಠೆ-ಕಾರ್ಯತತ್ಪರತೆಯನ್ನು ಅನುಸರಿಸಿ ಕೆಲಸ ಮಾಡುವುದೇ ಅವರಿಗೆ ನಾವು ನೀಡಬೇಕಾದ ಕೃತಜ್ಞತೆ ಎಂದರು.

ಸುಂದರ ನಾಯ್ಕ ದಂಪತಿಗಳಿಗೆ ಫಲ ಪುಷ್ಪ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ಸನ್ಮಾನ ಹಾಗೂ ವಿದಾಯಕ್ಕೆ ಉತ್ತರಿಸಿ ಮಾತನಾಡಿದ ಸುಂದರ ನಾಯ್ಕರು "ದ.ಕ. ... ಹುಟ್ಟು ಜಿಲ್ಲೆಯಾದರೂ ಆರಂಭದಲ್ಲಿ ಇಲ್ಲಿ ಜಿಲ್ಲಾಧಿಕಾರಿಯಾಗಿ ಬರಲು ಮುಜುಗರವಾಗಿತ್ತು. ಆದರೆ ಒಮ್ಮೆ ಇಲ್ಲಿ ಸೇರಿದ ನಂತರ ಇಲ್ಲಿಯ ಅಧಿಕಾರಿಗಳ, ರಾಜಕಾರಣಿಗಳ, ಜನರ ಸಹಕಾರ ಕಂಡು ಸಂತೋಷವೇ ಆಯಿತು. ನಾನು ಇಲ್ಲಿ ನಡೆಸಿದ ಸಾಧನೆಗೆ ಇವರೆಲ್ಲರ ಸಹಕಾರವೇ ಕಾರಣ ಎಂದರು.

ಅಧ್ಯಕ್ಷತೆ ವಹಿಸಿದ್ದ ಉಪ ವಿಭಾಗಾಧಿಕಾರಿ ಅಶ್ವತ್ಥ ನಾರಾಯಣ ಗೌಡರು ಜಿಲ್ಲಾಧಿಕಾರಿ ಸುಂದರ ನಾಯ್ಕರನ್ನು ಕಳುಹಿಸಿಕೊಡುತ್ತಿರುವುದು ದ. ಕ ಜಿಲ್ಲೆಗೆ ಸಂದ ಹೆಮ್ಮೆಯ ವಿಷಯ ಎನಿಸಬೇಕು' ಎಂದರು.

ಹಿಂದುಳಿದ ವರ್ಗಗಳ ಅಭಿವೃದ್ಧಿ ವಿಭಾಗದ ಅಧಿಕಾರಿ ಮುಕುಂದ ವಂದಿಸಿದರು.

ಉಚಿತ ವೈದ್ಯಕೀಯ ಶಿಬಿರ

ಸಾಲಿಗ್ರಾಮ, ಎ. 13–ಸಾಲಿಗ್ರಾಮ ಜೇಸಿಸ್ ಹಾಗೂ ಮಣಿಪಾಲ ಜೇಸಿಸ್ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ನೇತ್ರ ಪರೀಕ್ಷೆ, ಸಿಹಿಮೂತ್ರ ಹಾಗೂ ರಕ್ತದ ಒತ್ತಡ ತಪಾಸಣಾ ಶಿಬಿರವನ್ನು ಇತ್ತೀಚೆಗೆ ಇಲ್ಲಿ ಏರ್ಪಡಿಸಲಾಗಿತ್ತು.

ಶಿಬಿರವನ್ನು ಸಾಲಿಗ್ರಾಮ ಪುರಸಭಾ ಅಧ್ಯಕ್ಷ [illegible] ಅವರು ಉದ್ಘಾಟಿಸಿದರು.

ಸಾಲಿಗ್ರಾಮ ಜೇಸಿಸ್ ಅಧ್ಯಕ್ಷ ಸಿ. ರಮಾನಂದ ಭಟ್ ಸ್ವಾಗತಿಸಿದರು. ಮಣಿಪಾಲ ಜೇಸಿಸ್ ನಿರ್ದೇಶಕ [illegible] ವಂದಿಸಿದರು.

[illegible] ನಾಯಕ್ ಅವರು ಶಿಬಿರದ ವ್ಯವಸ್ಥಾಪಕರಾಗಿದ್ದರು.

...ಜನತಾ ಪಕ್ಷದಿಂದ ...ಪ್ರಜಾಸತ್ತೆ ಬುಡಮೇಲು'

ಮೂಲ್ಕಿ, ಎ. 13– ಮತದಾನದ ಮೂಲಕ ಜನರು ಆರಿಸಿ ಆಯ್ಕೆ ಮಾಡಿದ ಮಂಡಲ ಪಂಚಾಯತ್‌ಗಳಿಗೆ ಜನತಾ ಸರಕಾರ ತನ್ನ ಪಕ್ಷದವರನ್ನು ನೇಮಕ ಮಾಡುವ ಮೂಲಕ ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುತ್ತಿದೆ. ಇದು ಜನರ ಕೈಗೆ ಅಧಿಕಾರವಲ್ಲ, ಜನತಾ ಪಕ್ಷದ ... ಕೈಗೆ ಅಧಿಕಾರ ಎಂದು ಕೆ. ಪಿ. ಸಿ. ... ಅಧ್ಯಕ್ಷರಾದ ಆಸ್ಕರ್ ಫೆರ್ನಾಂಡಿಸ್ ಅವರು ಟೀಕಿಸಿದರು.

ಅವರು ಮಂಗಳವಾರ ಮೂಲ್ಕಿ ಕ್ಷೇತ್ರದ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಸದಸ್ಯರು ಮತ್ತು ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಜನತಾ ಸರಕಾರ ಅಧಿಕಾರವನ್ನು ವಿಕೇಂದ್ರೀಕರಣಗೊಳಿಸಿರುವುದಾಗಿ ಹಾಗೂ ಜನತೆಯ ಕೈಗೇ ಅಧಿಕಾರ ನೀಡಿರುವುದಾಗಿಯೂ ಬಡಾಯಿ ಕೊಚ್ಚಿಕೊಳ್ಳುತ್ತಿದೆಯೇ ಹೊರತು ವಾಸ್ತವವಾಗಿ ಅದರಲ್ಲಿ ಯಾವುದೇ ಹುರುಳಿಲ್ಲ ಎಂದು ಆಸ್ಕರ್ ಫೆರ್ನಾಂಡಿಸ್ [illegible]

ಇತ್ತರಲ್ಲೇ ಮಂಡಲ ಪಂಚಾಯತ್‌ಗಳಿಗೆ ಪ್ರಧಾನ, ಉಪಪ್ರಧಾನರ ಆಯ್ಕೆ ಆಗಬೇಕಾಗಿತ್ತು. ಇನ್ನೂ ವಿಳಂಬಿಸುತ್ತಿರುವುದರ ಔಚಿತ್ಯವಾದರೂ ಏನು ಎಂಬುದಾಗಿ ಪ್ರಶ್ನಿಸಿದ ಅವರು, ತಮ್ಮ ಪಕ್ಷದವರೇ ಎಲ್ಲೆಡೆ ಆರಿಸಿ ಬಂದಿದ್ದರೆ ಆಗ ಮಾತ್ರ ಅಧಿಕಾರ ಹಸ್ತಾಂತರಿಸುತ್ತಿದ್ದರೇನೋ ಎಂದರು.

ಕಾಂಗ್ರೆಸ್ ಸರಕಾರ ರಚಿಸಿದ ಭೂ ಸುಧಾರಣೆ ಕಾನೂನಿನ ಮೂಲಭೂತ ತತ್ವವನ್ನೇ ಬದಲಾಯಿಸಲು ಜನತಾ ಸರಕಾರ ಯೋಜಿಸಿತ್ತು ಎಂದ ಆಸ್ಕರ್ ಫೆರ್ನಾಂಡಿಸ್ ಅಪೆಲೆಟ್ ಟ್ರಿಬ್ಯುನಲ್ ರಚಿಸುವ ಮೂಲಕ ಕೊಡಗು ಜಿಲ್ಲೆಯಲ್ಲಿ 100 ಕೇಸುಗಳ ಪೈಕಿ 80 ಕೇಸುಗಳು ಒಕ್ಕಲುಗಳ ವಿರೋಧವಾಗಿ ತೀರ್ಮಾನಿಸಲ್ಪಟ್ಟಿರುವುದು ಒಂದು ಉದಾಹರಣೆ ಎಂದರು.

ಜನತಾ ಸರಕಾರದ ಅನ್ಯಾಯದ ವಿರುದ್ಧ ಜನತೆ ಹೋರಾಡಲು ಸಜ್ಜಾಗಬೇಕು ಎಂದೂ ಆಸ್ಕರ್ ಫೆರ್ನಾಂಡಿಸ್ ಕರೆ ನೀಡಿದರು.

ವಿವಾಹ ವೇದಿಕೆ ಸ್ಥಾಪನೆ

[illegible] ಎ 13- ವಿವಾಹ [illegible]

[illegible]

[illegible]

ಉದ್ಯೋಗ ಮಾರ್ಗದರ್ಶನ ಶಿಬಿರ

[illegible], ಎ 13- [illegible]

[illegible]

ಶಂಕರಾಚಾರ್ಯ ಪ್ರಬಂಧ ಸ್ಪರ್ಧೆ

ಕುಂದಾಪುರ, ಎ. 13– ಮೇ ಮೂರರಂದು ಇಲ್ಲಿ ಆಚರಿಸಲಾಗುವ ಶ್ರೀ ಶಂಕರ ಜಯಂತ್ಯುತ್ಸವದ ಅಂಗವಾಗಿ ಸಾರ್ವಜನಿಕರಿಗೆ 'ಜಗದ್ಗುರುಗಳಾಗಿ ಆಚಾರ್ಯ ಶಂಕರರು' ಎಂಬ ಕುರಿತು ಪ್ರಬಂಧಸ್ಪರ್ಧೆಯೊಂದನ್ನು ಏರ್ಪಡಿಸಲಾಗಿದೆ.

ಸುಮಾರು ಐದು ಪುಟಗಳಿಗೆ ಮೀರದಂತೆ ಸಂಸ್ಕೃತ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ರಚಿಸಿ ಏಪ್ರಿಲ್ 30ರ ಒಳಗೆ 'ವಿದ್ವಾನ್ ಗಣಪತಿ ಶರ್ಮ, ಶ್ರೀಪೇಟೆ ಆಂಜನೇಯ ದೇವಸ್ಥಾನ, ಕುಂದಾಪುರ'–ಇವರಿಗೆ ಕಳುಹಿಸಬೇಕೆಂದೂ ಸ್ಪರ್ಧಾವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದೆಂದೂ ಶ್ರೀ ವಾಮದೇವ ಶೃಂಗಾಪಾಣಿ ಟ್ರಸ್ಟಿನ ಪ್ರಕಟಣೆಯೊಂದು ತಿಳಿಸಿದೆ.

ಕೊಲ್ಲೂರು ದೇವಳದಲ್ಲಿ ಸಾಮೂಹಿಕ ವಿವಾಹ

ಕುಂದಾಪುರ, ಮಾ. 31- ಸರಕಾರ ಬಡವರ ಹಿತಾಸಕ್ತಿ ಗಮನಿಸಿ ಹಮ್ಮಿಕೊಂಡ ತಾಳಿಯ ಭಾಗ್ಯ ಯೋಜನೆಯ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಬಡವರು ಮುಂದಾಗಬೇಕೆಂದು ದ. ಕ. ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷ ಬಿ. ಅಪ್ಪಣ್ಣ ಹೆಗ್ಡೆ ಅವರು ಹೇಳಿದ್ದಾರೆ.

ರಾಜ್ಯ ಸರಕಾರದ ತಾಳಿಯ ಭಾಗ್ಯ ಯೋಜನೆಯ ಅಂಗವಾಗಿ ಕೊಲ್ಲೂರಿನ ಮೂಕಾಂಬಿಕಾ ದೇವಾಲಯದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಸಾಲವಸಿಡಿ, ಆಡಂಬರ ಮಾಡಿ ಮುಂದೆ ತೊಂದರೆ ಅನುಭವಿಸುವುದ ಕ್ಕಿಂತ ಇಂತಹ ವಿವಾಹ ಕೌಟುಂಬಿಕ ಜೀವನದಲ್ಲಿ ತೃಪ್ತಿ ನೀಡುತ್ತದೆ ಎಂದು ಅವರು ನುಡಿದರು.

ಕುಂದಾಪುರ ತಹಸೀಲ್ದಾರ್ ಅಮರ ನಾಥ್ ಸಮಿತಿ, ಕೊಲ್ಲೂರು ಮೂಕಾಂಬಿಕಾ ದೇವಾಲಯದ ಧರ್ಮದರ್ಶಿಗಳೂ ಆದ ಅಪ್ಪಣ್ಣ ಹೆಗ್ಡೆ ಹಾಗೂ ಕಾರ್ಯ ನಿರ್ವಹಣಾಧಿಕಾರಿ ಗೋವಿಂದ ಮೊಗ್ರಾಲ್ ಅವರ ನೆರವಿನೊಂದಿಗೆ ಈ ಸಮಾರಂಭ ಏರ್ಪಡಿಸಲಾಗಿತ್ತು.

ಪ್ರೊಬೇಷನರಿ ತಹಸೀಲ್ದಾರ್ ಭೀಮಪ್ಪ ಹಾಗೂ ಕೊಲ್ಲೂರಿನ ವೈದ್ಯಾಧಿಕಾರಿ ಡಾ। ಮೋಹನದಾಸ ಹೆಗ್ಡೆ ಅವರೂ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ತಾಲೂಕಿನ ವಿವಿಧ ಕಡೆಗಳಿಂದ ಮದುವೆ ದಿಬ್ಬಣ ಆಗಮಿಸಿದ್ದು, ಸಾರ್ವಜನಿಕರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಒಟ್ಟು 13 ಜೋಡಿಗಳು ಈ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ದಂಪತಿಗಳಾದರು.

'ತಾಳಿಯ ಭಾಗ್ಯ' ಯೋಜನೆಯಡಿಯಲ್ಲಿ ಎಪ್ರಿಲ್ ತಿಂಗಳಲ್ಲಿ 20 ಜೋಡಿ ಸಾಮೂಹಿಕ ವಿವಾಹಗಳನ್ನು ನಡೆಸಲು ನಿರ್ಧರಿಸಲಾಗಿದ್ದು, ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ಎಪ್ರಿಲ್ ಹತ್ತರೊಳಗೆ ತಿಳಿಸಬೇಕೆಂದು ಕುಂದಾಪುರ ತಹಸೀಲ್ದಾರ್ ಅಮರ್‌ನಾಥ್ ಸುಮತಿ ಅವರು ತಿಳಿಸಿದ್ದಾರೆ.

ಕಿರು ಪುಸ್ತಕಗಳ ಉದ್ಘಾಟನೆ

ಉಡುಪಿ, ಮಾ. 31- ಹಿರೇಬೆಟ್ಟು ಶಾಲಾ ಮುಖ್ಯೋಪಾಧ್ಯಾಯ ಎಂ. ಆರ್. ಶೆಟ್ಟಿ ವಿರಚಿತ 'ಬಾಲ ಮಂದಾರ (ಮಕ್ಕಳ ಗೀತೆ) ಹಾಗೂ 'ಓಂ ನಮೋ ರಾಘವೇಂದ್ರಾಯ' (ಭಕ್ತಿಗೀತೆ) ಎಂಬ ಎರಡು ಪುಸ್ತಕಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಲಾಯಿತು.

ಇಲ್ಲಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಠಾರದಲ್ಲಿ ನಡೆದ ಸಮಾರಂಭದಲ್ಲಿ ಉಡುಪಿ ದಕ್ಷಿಣ ವಲಯ ಶಾಲಾ ಪರಿವೀಕ್ಷಣಾಧಿಕಾರಿ ಎಚ್. ಜನಾರ್ದನ ನಾಯಕ್ ಹಾಗೂ ಮಹಾಬಲ ಶೆಟ್ಟಿ ಅವರು ಈ ಎರಡು ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಪೆರ್ಡೂರು ಹೈಸ್ಕೂಲ್ ಮುಖ್ಯೋಪಾಧ್ಯಾಯ ಪಿ. ನಾರಾಯಣ ನಾಯಕ್ ಅಧ್ಯಕ್ಷತೆ ವಹಿಸಿದರು. ಉಡುಪಿ ಉತ್ತರ ವಲಯ ಪರಿವೀಕ್ಷಣಾಧಿಕಾರಿ ವಾಸು ಶೆಟ್ಟಿ ಉಪಸ್ಥಿತರಿದ್ದು ಮಾತನಾಡಿದರು.

ಪುಸ್ತಕಗಳ ಲೇಖಕರು ತಮ್ಮ ಕೃತಿಗಳ ಪರಿಚಯ ಮಾಡಿಕೊಟ್ಟರು. ಮಂಡಲ ಪಂಚಾಯತ್ ಸದಸ್ಯ ವಿಠಲ್ ಕುಮಾರ ಹೆಗ್ಡೆ ಮತ್ತು ಡಾ। ಅರವಿಂದ ಶೆಟ್ಟಿ ಮುಖ್ಯ ಅತಿಥಿಗಳಾಗಿದ್ದರು. ಕಾರ್ಯಕ್ರಮ ನಿಯೋಜಕ ಶೇಖರ ಶೆಟ್ಟಿ ವಂದಿಸಿದರು.

ಪ್ರಯಾಣಿಕರ ತಂಗುದಾಣ ಉದ್ಘಾಟನೆ

ಕಾರ್ಕಳ, ಮಾ. 31- ಕುಕ್ಕುಂದೂರು ಗ್ರಾಮ ಪಂಚಾಯತ್ ವತಿಯಿಂದ ಜಯಂತಿ ನಗರ ಎಂಬಲ್ಲಿ ನೂತನವಾಗಿ ಕಟ್ಟಿಸಲಾದ ಪ್ರಯಾಣಿಕರ ವಿಶ್ರಾಂತಿ ಗೃಹ ಹಾಗೂ ಕಾರ್ಕಳ ತಾಲೂಕು ಅಬಕಾರಿ ಕಚೇರಿ ಮುಂಭಾಗದ ರಸ್ತೆಯ ನಡುವೆ ರಚಿಸಲಾದ ಶ್ರೀರಾಮ ವೃತ್ತದ ಆರಂಭೋತ್ಸವವನ್ನು ಅನುಕ್ರಮವಾಗಿ ಹೆಬ್ರಿ ವಿಭಾಗದ ಕ್ಷೇತ್ರದ ಜಿಲ್ಲಾ ಪರಿಷತ್ ಸದಸ್ಯ ದೇಜಪ್ಪ ನಾಯ್ಕ್ ಹಾಗೂ ಬೈಲೂರು ಜಿಲ್ಲಾ ಪರಿಷತ್ ಸದಸ್ಯ ಹೆಬ್ರಿ ಗೋಪಾಲ ಭಂಡಾರಿ ಅವರು ಇತ್ತೀಚೆಗೆ ನೆರವೇರಿಸಿದರು.

ಎರಡೂ ಸಮಾರಂಭಗಳ ಅಧ್ಯಕ್ಷತೆಯನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿ ಭಾಸ್ಕರ ರಾವ್ ವಹಿಸಿದ್ದರು. ಹೊಸಕೋಟೆಯ ನಿವೃತ್ತ ತಹಸೀಲ್ದಾರ್ ಪ್ರಭಾಕರ ರಾವ್ ಮುಖ್ಯ ಅತಿಥಿಯಾಗಿದ್ದರು. ಪಂಚಾಯತ್ ಆಡಳಿತಾಧಿಕಾರಿಯಾಗಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಣೆ ಗೈಯುತ್ತಿರುವ ಕುಕ್ಕಾಳು ವಿಠಲ್ ಟಿ. ಶೆಟ್ಟಿ ಇವರ ಸೇವಾ ತತ್ಪರತೆಯನ್ನು ಗುರುತಿಸಿ ಗ್ರಾಮಸ್ಥರ ಪರವಾಗಿ ಹಿರಿಯ ಸ್ವಾತಂತ್ರ್ಯ ಯೋಧ ಶ್ಯಾಮ ಶೆಟ್ಟಿ ಅವರು ಸನ್ಮಾನ ನೀಡಿದರು.

ಕುಕ್ಕುಂದೂರು ಗ್ರಾಮ ಪಂಚಾಯತ್ ಕಾರ್ಯದರ್ಶಿ ರುಕ್ಮಾಂಗದ ಇವರು ಕಾಮಗಾರಿಗಳ ಖರ್ಚು ವೆಚ್ಚಗಳ ವಿವರ ನೀಡಿದರು. ಪಂಚಾಯತ್ ವಿಸ್ತರಣಾಧಿಕಾರಿ ವಿಠಲ್ ಶೆಟ್ಟಿ ಆರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ವಂದನಾರ್ಪಣೆ ಗೈದರು.

ಬಳ್ಳಾರಿಯಲ್ಲಿ ವಿದ್ಯುತ್ ಕ್ಷಾಮ!

ಬಳ್ಳಾರಿ, ಮಾ.31- ತೀವ್ರ ವಿದ್ಯುತ್ ಪೂರೈಕೆ ಅಭಾವದಿಂದ ಬಳ್ಳಾರಿ ನಗರದ ಜನತೆ ಕಳವಳಗೊಂಡಿದ್ದಾರೆ.

ಇದ್ದಕ್ಕಿದ್ದಂತೆ ವಿದ್ಯುತ್ ಮಾಯವಾಯಿತೆಂದರೆ ಮತ್ತೆ ಬರುವುದು ಎರಡು ಮೂರು ತಾಸುಗಳ ನಂತರವೇ.

ಮುನಿರಾಬಾದ್ ಟಿ. ಬಿ. ಡ್ಯಾಂ ವಿದ್ಯುಚ್ಛಕ್ತಿ ಘಟಕದ ಕಾರ್ಯ ಸ್ಥಗಿತಗೊಂಡಿರುವುದು ಹಾಗೂ ಹಂಪೆ ವಿದ್ಯುಚ್ಛಕ್ತಿ ಘಟಕದ ಕಾರ್ಯ ಇಳಿಮುಖಗೊಂಡಿರುವುದೇ ಈ ವಿದ್ಯುಚ್ಛಕ್ತಿ ಅಭಾವಕ್ಕೆ ಕಾರಣವಾಗಿದೆ.

ತುಂಗಭದ್ರಾ ಜಲಾಶಯದ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದಿಂದ ಹಂಪೆ ವಿದ್ಯುಚ್ಛಕ್ತಿ ಉತ್ಪಾದನಾ ಘಟಕಕ್ಕೆ ಪೂರ್ಣ ಪ್ರಮಾಣದ ವಿದ್ಯುತ್ ಪೂರೈಕೆ ಹಾಲು ಬಾರದಿರುವುದೇ ಇದಕ್ಕೆ ಕಾರಣವೆಂದು ವಿದ್ಯುಚ್ಛಕ್ತಿ ಮಂಡಳಿಯ ಮೂಲಗಳು ತಿಳಿಸಿವೆ.

ತಿಪ್ಪೋನ್' ಇಂಡಸ್ಟ್ರೀಸ್'ನಲ್ಲಿ ಕಳ್ಳತನ

ಮಂಗಳೂರು, ಮಾ. 31- ಬೈಕಂಪಾಡಿಯ ಕೈಗಾರಿಕಾ ಕೇಂದ್ರದಲ್ಲಿರುವ ಹಿಂದ್ ತಿಪ್ಪೋನ್ ರೂರಲ್ ಇಂಡಸ್ಟ್ರೀಸ್‌ಗೆ ಮಾರ್ಚ್ 26ರ ರಾತ್ರಿ ನಾಲ್ಕು ಅಪರಿಚಿತರು ನುಗ್ಗಿ ರೂ 75.850 ಮೌಲ್ಯದ ವಸ್ತುಗಳನ್ನು ಅಪಹರಿಸಿದ್ದಾರೆ.

ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಟೆಂಪೊ-ಸ್ಕೂಟರ್ ಡಿಕ್ಕಿ

ಕಂಕನಾಡಿಯ ಪಂಪ್‌ವೆಲ್‌ನಲ್ಲಿ ನಿನ್ನೆ ಬೆಳಗ್ಗೆ ಸ್ಕೂಟರೊಂದು ಟೆಂಪೊಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಸ್ಕೂಟರ್ ಹಿಂಬದಿಯಲ್ಲಿ ಪ್ರಯಾಣಿಸುತ್ತಿದ್ದ ರಹಿಮಂಡ್ ಡೇಗೋ ಎಂಬವರು ಗಾಯಗೊಂಡರು.

ಕಂಕನಾಡಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಪಾಂಡುರಂಗ ತನಿಖೆ ನಡೆಸುತ್ತಿದ್ದಾರೆ.

ದ. ಕ. ಯೋಜನೆಗಳ ನಿರ್ಲಕ್ಷ್ಯ: ಅಸಮಾಧಾನ

ಬೆಂಗಳೂರು, ಮಾ. 31- "ಸರಕಾರದ ಹಲವಾರು ಯೋಜಿತ ಕಾರ್ಯಕ್ರಮಗಳು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಹಾಗೂ ಸರಕಾರ ಸಾಕಷ್ಟು ಹಣ ಬಿಡುಗಡೆ ಮಾಡದೆ ಇರುವುದರಿಂದ ಸಾರ್ವಜನಿಕರಿಗೆ ನಿಷ್ಪ್ರಯೋಜಕವಾಗಿದೆ" ಎಂದು ಬ್ರಹ್ಮಾವರ ಶಾಸಕ ಬಸವರಾಜ್ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಯ ಮೇಲೆ ಇತ್ತೀಚೆಗೆ ನಡೆದ ಚರ್ಚೆಯಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಬ್ರಹ್ಮಾವರ ಕ್ಷೇತ್ರದ ವಾರಂಬಳ್ಳಿಯಲ್ಲಿ ಜನತಾ ನಿವೇಶನಗಳಿಗಾಗಿ ಹಲವರು ಅರ್ಜಿ ಸಲ್ಲಿಸಿದ್ದರು. ಅರ್ಹರಾದವರಿಗೆ ನಿವೇಶನ ನೀಡದೆ ಅಲ್ಲಿನ ಪಂಚಾಯತ್ ಕಾರ್ಯದರ್ಶಿಯವರು ತಮಗೊಂದು ಜನತಾ ನಿವೇಶನವನ್ನು ಮಂಜೂರು ಮಾಡಿಸಿಕೊಂಡಿರುವ ಬಗ್ಗೆ ಗಮನ ಸೆಳೆದರು. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮ ತೆಗೆದುಕೊಂಡು ಅರ್ಹರಿಗೆ ನಿವೇಶನ ದೊರಕಿಸಿಕೊಡಬೇಕೆಂದು ಅವರು ಗ್ರಾಮೀಣಾಭಿವೃದ್ಧಿ ಸಚಿವ ಅಬ್ದುಲ್ ನಜೀರ್ ಸಾಬ್ ಅವರನ್ನು ಒತ್ತಾಯಿಸಿದರು.

1986-87ನೇ ಸಾಲಿನಲ್ಲಿ ಹುಡ್ಕೋ ಯೋಜನೆಗೆ ಹಣ ಪಾವತಿಯಾಗದೆ ಇರುವುದರಿಂದ ಮಂಜೂರಾದ ಮನೆಗಳು ಅರ್ಧದಲ್ಲೇ ನಿಂತಿವೆ. ಈ ಹಣವನ್ನು ಪೂರೈಸುವ ಬಗ್ಗೆ ಸಚಿವರು ಗಮನ ಹರಿಸಬೇಕೆಂದು ಅವರು ಆಗ್ರಹಪಡಿಸಿದರು.

ಬ್ರಹ್ಮಾವರ ಕ್ಷೇತ್ರದ ಕುಂದಾಲವೇಟಿಗೆ ಸಣ್ಣ ನೀರಿನ ಯೋಜನೆ 1986-87ರಲ್ಲಿ ಮಂಜೂರಾಗಿದ್ದರೂ, ಇನ್ನೂ ಕಾರ್ಯಾರಂಭವಾಗಿಲ್ಲದಿರುವುದು ದುರದೃಷ್ಟಕರ ಎಂದು ನುಡಿದ ಅವರು, ಜಿಲ್ಲೆಯ ಕೆಲವು ಕಡೆಗಳಲ್ಲಿ ಕೊಳವೆ ಬಾವಿಗಳಿಗೆ 'ಸಿ' ಕ್ಲಾಸ್ ಪೈಪುಗಳನ್ನು ಹಾಕುತ್ತಿದ್ದಾರೆಂದು ಗಮನ ಸೆಳೆದರು.

ನೇಗಿಲ ಭಾಗ್ಯ ಯೋಜನೆಯಿಂದ ದ. ಕ. ಜಿಲ್ಲೆಯಲ್ಲಿ ಬಹಳಷ್ಟು ಜನ ವಂಚಿತರಾಗಿದ್ದು ಇದೀಗ ನಿಗದಿ ಪಡಿಸಿರುವ 40 ಲಕ್ಷ ರೂಪಾಯಿ ತುಂಬಾ ಕಡಿಮೆಯಾಗಿದೆ. ಈ ನಿಟ್ಟಿನಲ್ಲಿ ಸಾಕಷ್ಟು ಜನ ಈ ಯೋಜನೆಯಿಂದ ಪ್ರಯೋಜನ ಪಡೆಯುವಂತಾಗಲು ಇನ್ನೂ ಹೆಚ್ಚಿನ ಹಣ ಮಂಜೂರು ಮಾಡಬೇಕೆಂದು ಅವರು ಒತ್ತಾಯಿಸಿದರು.

ಪಶ್ಚಿಮಘಟ್ಟ ಯೋಜನೆಯಡಿಯಲ್ಲಿ ಬರುವ ರಸ್ತೆ ಮತ್ತು ಕಾಲು ಸಂಕದ ಅವಶ್ಯಕತೆ ದ. ಕ. ಜಿಲ್ಲೆಯಲ್ಲಿ ಹೆಚ್ಚಾಗಿದ್ದು, ಈ ಬಗ್ಗೆ ತಕ್ಷಣ ಕಾರ್ಯಾರಂಭ ಮಾಡುವಂತೆ ಸಂಬಂಧಪಟ್ಟವರಿಗೆ ಸೂಚನೆ ನೀಡಬೇಕೆಂದು ಅವರು ಸಚಿವರನ್ನು ವಿನಂತಿಸಿದರು.

ವಾರಂಬಳ್ಳಿಯ ಉಪ್ಪಿನಕೋಟೆ ಮಸೀದಿ ಹಾಗೂ ಪೆಂಡೂರಿನ ಇಲಂಗಾರು ಮಸೀದಿಗೆ 10ಸಾವಿರ ರೂಪಾಯಿ ಕೊಡುವುದಾಗಿ ಆಶ್ವಾಸನೆ ನೀಡಿದ್ದರೂ ಇನ್ನೂ ಹಣ ಬಿಡುಗಡೆ ಆಗಿಲ್ಲ ಎಂದ ಅವರು, ಈ ಹಣವನ್ನು ಕೂಡಲೇ ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಅವರು ಸಚಿವರನ್ನು ಒತ್ತಾಯಿಸಿದರು.

ಪದಾಧಿಕಾರಿಗಳು

ಡಿ ವೈ ಎಫ್ ಐ ಗ್ರಾಮ ಸಮಿತಿ, ಬಸ್ರೂರು

ಶಿವರಾಮ ಮೊಗೇರ (ಅಧ್ಯಕ್ಷ), ಕೆ. ಉದಯ ಹಾಗೂ ಗೋಪಾಲ ಶೆಟ್ಟಿಗಾರ್ (ಉಪಾಧ್ಯಕ್ಷರು), ಎಂ ಗೋವಿಂದ (ಕಾರ್ಯದರ್ಶಿ), ಬಿ. ಬೋಜ ಹಾಗೂ ಕೆ. ಸಂಜೀವ ಪೂಜಾರಿ (ಜತೆಕಾರ್ಯದರ್ಶಿಗಳು), ಎಂ. ರಘು ಪೂಜಾರಿ (ಕೋಶಾಧಿಕಾರಿ) ಹಾಗೂ 29 ಮಂದಿ ಸದಸ್ಯರು.

ಕಾವೇರಿ ಯುವಕ ಮಂಡಲ ಬೇಡಾಡಿ-ಗೋಳಾಡಿ

ಬಿ. ಶೇಖರ ಬಾಳ್ರಬೆಟ್ಟು (ಅಧ್ಯಕ್ಷ), ಬಿ.ಸಂಜೀವ ಬಾಳ್ರಬೆಟ್ಟು (ಉಪಾಧ್ಯಕ್ಷ), ಬಾಬಣ್ಣ ಪೂಜಾರಿ ಹೆಬ್ರಮನೆ (ಕಾರ್ಯದರ್ಶಿ), ಗೋಪಾಲ ಕಾಂಚನ್ (ಜತೆಕಾರ್ಯದರ್ಶಿ), ರಾಮ ಪೂಜಾರಿ ಹಾವಳಿಮನೆ (ಕೋಶಾಧಿಕಾರಿ), ಬಿ. ಹರಿಯಣ್ಣ ಬಾಳ್ರಬೆಟ್ಟು (ಲೆಕ್ಕ ಪರಿಶೋಧಕ), ಅಶೋಕ ಕುಮಾರ್ (ಕ್ರೀಡಾ ಕಾರ್ಯದರ್ಶಿ), ಮಂಜುನಾಥ ಎನ್.ಕುಂದರ್ (ಜತೆಕ್ರೀಡಾ ಕಾರ್ಯದರ್ಶಿ) ಹಾಗೂ ಏಳು ಮಂದಿ ಸದಸ್ಯರು.

ಮುಂಗಾರು
ಬುಧವಾರ, ಎಪ್ರಿಲ್ 1, 1987

ಜಿಂದಾ ಪಲಾಯನದ ಪಾಠ

ಪಂಜಾಬಿನಲ್ಲಿ ಹರ್ಜಿಂದರ್ ಸಿಂಗ್ ಯಾನೆ ಜಿಂದಾ ಎಂಬ ಕುಖ್ಯಾತ ಭಯೋತ್ಪಾದಕನು ಪೊಲೀಸ್ ಬಂಧನದಿಂದ ತಪ್ಪಿಸಿಕೊಂಡು ಹೋದ ವಾರ್ತೆ ಬಂದಿದೆ. ಈ ವ್ಯಕ್ತಿಯನ್ನು ಫರೀದ್ ಕೋಟೆ ಜೈಲಿನಿಂದ ಹೆಚ್ಚು ಭದ್ರತೆಯುಳ್ಳ ನಾಭಾ ಜೈಲಿಗೆ ಸ್ಥಳಾಂತರಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ವರದಿಗಳು ಹೇಳುವ ಈ ಘಟನೆಯ ವಿವರಗಳು ಕೆಲವು ಸಂಶಯಗಳಿಗೆ ಎಡೆ ಮಾಡುತ್ತವೆ. ಜೀಪಿನಲ್ಲಿ ಜಿಂದಾನನ್ನು ಸಾಗಿಸಲಾಗುತ್ತಿತ್ತು. ಅದರಲ್ಲಿ ಸಶಸ್ತ್ರ ಪೊಲೀಸರೂ ಇದ್ದರು. ಅಲ್ಲದೆ ಬೆಂಗಾವಲಿಗೆ ಪ್ರತ್ಯೇಕ ಪೊಲೀಸ್ ವಾಹನವಿತ್ತು. ಅದರಲ್ಲಿ ಸಾಕಷ್ಟು ಮಂದಿ ಸಶಸ್ತ್ರ ಪೊಲೀಸರಿದ್ದರು. ಈ ವಾಹನ ಕೆಟ್ಟು ನಿಂತ ವೇಳೆ ಜೀಪ್ ಮುಂದುವರಿಯಿತು. ಇದೇ ವೇಳೆ ಮೂರು ವಾಹನಗಳಲ್ಲಿ ಬಂದ ಹತ್ತಾರು ಭಯೋತ್ಪಾದಕರು ಗುಂಡಿನ ಬೆದರಿಕೆ ಹಾಕಿ ಪೊಲೀಸರನ್ನು ನಿಷ್ಕ್ರಿಯಗೊಳಿಸಿ ಜಿಂದಾನನ್ನು ಬಿಡಿಸಿಕೊಂಡು ಪಲಾಯನ ಗೈದರು.

ಈ ಘಟನೆಯಲ್ಲಿ ಪೊಲೀಸರು ಶಾಮೀಲಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಫರೀದ್ ಕೋಟೆ ಸೆರೆಮನೆಯಿಂದ ಜಿಂದಾನನ್ನು ನಾಭಾಕ್ಕೆ ಒಯ್ಯಲಾಗುತ್ತಿದೆ ಎಂಬ ವಿಚಾರ ಹೊರಗಿನವರಿಗೆ ತಿಳಿದದ್ದೇ ಈ ಶಾಮೀಲಾತಿಯನ್ನು ಸಾಬೀತುಗೊಳಿಸುತ್ತದೆ. ಪೊಲೀಸ್ ಬೆಂಗಾವಲಿನ ವಾಹನ ಕೆಟ್ಟು ನಿಂತದ್ದು ಕೂಡ ಇದನ್ನೇ ಸೂಚಿಸುತ್ತದೆ. ಜಿಂದಾನಂತಹ ಕುಖ್ಯಾತನನ್ನು ಕೊಂಡೊಯ್ಯುವ ವೇಳೆ ಪೊಲೀಸ್ ವಾಹನವು ಕೆಟ್ಟಿತೆಂದರೆ ಅದಕ್ಕೆ ಬೇರೆ ಅರ್ಥ ಹುಟ್ಟುವುದು ಸಾಧ್ಯವೇ ಇಲ್ಲ. ಬೆಂಗಾವಲಿನ ವಾಹನ ಕೆಟ್ಟರೂ ಜಿಂದಾನಿರುವ ಜೀಪು ಪ್ರಯಾಣ ಮುಂದುವರಿಸಿತು ಎಂಬ ವಿಚಾರವೂ ಈ ಶಾಮೀಲಾತಿಯ ಸಂದೇಹವನ್ನು ಪುಷ್ಟೀಕರಿಸುತ್ತದೆ.

ಪಂಜಾಬಿನಲ್ಲಿ ಸಿಖ್ ಧರ್ಮದರ್ಶಿಗಳನ್ನು ಮುಂಚೂಣಿಗಿಟ್ಟುಕೊಂಡು ಬರ್ನಾಲಾ ಸರಕಾರವನ್ನು ಕೆಳಗೆಳೆದು ಹಾಕಿ ತಮ್ಮ ಗುರಿಯತ್ತ ಸಾಗುವ ಸಿಖ್ ಭಯೋತ್ಪಾದಕರ, ಖಾಲಿಸ್ತಾನಿವಾದಿಗಳ ಷಡ್ಯಂತ್ರ ವಿಫಲವಾದ ಪರಿಣಾಮವಾಗಿ ಈ ದೇಶದ ಜನರಿಗೂ ಸರಕಾರಕ್ಕೂ ರಾಜಕೀಯ ಪಕ್ಷಗಳಿಗೂ ಸಂತೋಷವಾಗಿತ್ತು. ಇದರ ಪರಿಣಾಮವಾಗಿ ಪಂಜಾಬನ್ನು ಮರೆತುಬಿಟ್ಟು ಸುಮ್ಮನೆ ಕೂರುವ ಪ್ರವೃತ್ತಿ ಕಾಣಿಸಿಕೊಂಡದ್ದರಲ್ಲಿಯೂ ಆಶ್ಚರ್ಯವಿಲ್ಲ. ಹಾಗೆ ಉಪೇಕ್ಷೆಯಿಂದ ಕೂತವರೆಲ್ಲ ಮೈ ಮನಸ್ಸುಗಳನ್ನು ಜಾಡಿಸಿಕೊಳ್ಳಬೇಕಾದ ಪ್ರಸಂಗ ಇದಾಗಿದೆ. ಪಂಜಾಬಿನ ಭಯೋತ್ಪಾದಕರ ಕತೆ ಮುಗಿಯಿತು. ಖಾಲಿಸ್ತಾನದ ಸುದ್ದಿಯೂ ಸತ್ತುಹೋಯಿತು. ಕ್ಷೋಭೆ ಶಮನವಾಯಿತು ಎಂದು ಮನಸ್ಸಿನಲ್ಲಿ ಮಂಡಿಗೆ ಮೆಲ್ಲ ತೊಡಗಿರುವವರೆಲ್ಲ ಮತ್ತೆ ವಿಚಾರ ಮಾಡಬೇಕಾದ ಘಟನೆ ಇದಾಗಿದೆ.

ಪಂಜಾಬಿನಲ್ಲಿ ಭಯೋತ್ಪಾದಕರಿಗೆ ಇನ್ನೂ ನೆರವು ದೊರೆಯುತ್ತಿದೆ. ಆಡಳಿತ ಸಿಬ್ಬಂದಿಯೇ ಅವರಿಗೆ ನೆರವಾಗುತ್ತಿದ್ದಾರೆ; ಪೊಲೀಸರೂ ಅವರಿಗೆ ಶಾಮೀಲಾಗುತ್ತಿದ್ದಾರೆ. ಅಂದರೆ ಇದರರ್ಥ ಪಂಜಾಬಿನ ಕ್ಷೋಭೆಯ ಕಾರಣವು ಸತ್ತುಹೋಗಿಲ್ಲ ಎಂಬುದನ್ನು ತೋರಿಸುತ್ತದೆ. ಧರ್ಮದರ್ಶಿಗಳು ಖಾಲಿಸ್ತಾನದ ಪರ ಕೆಲಸ ಮಾಡುವುದು ಬೇಡ; ಸಿಕ್ಖರ ಸ್ವಂತ ನೆಲ ನಿರ್ಮಿಸಲು ದಾರಿತಪ್ಪಿ ಹೋಗುವುದು ಬೇಡ ಎಂಬ ತೀರ್ಮಾನಕ್ಕೆ ಸಿಖ್ ಸಮುದಾಯ ಬಂದಿದೆ ಎಂಬುದರ ಅರ್ಥ ಸಿಕ್ಖರ ಬೇಡಿಕೆಗಳಿಲ್ಲವೂ ಸತ್ತು ಹೋಗಿದೆ ಎಂಬುದಲ್ಲ ಎಂದೇ ಮತ್ತೆ ಮತ್ತೆ ಪಂಜಾಬಿನಲ್ಲಿ ನಡೆಯುತ್ತಿರುವ ಪ್ರಕರಣಗಳು ಹೇಳುತ್ತಿವೆ.

ಆದ್ದರಿಂದ ಈ ಬೇಡಿಕೆಗಳೇನು ಎಂದು ಪರಿಶೀಲಿಸಬೇಕು. ಖಾಲಿಸ್ತಾನವಾದವನ್ನು ಸಂಪೂರ್ಣವಾಗಿ ಅಪ್ರಸ್ತುತಗೊಳಿಸುವಂತಹ ಸಂದರ್ಭವನ್ನು ಸೃಷ್ಟಿಸಬೇಕು. ಇದನ್ನು ಮಾಡಬೇಕಾದ್ದು ಬೇರಾರೂ ಅಲ್ಲ; ನಮ್ಮ ಕೇಂದ್ರ ಸರಕಾರವೇ. ಆ ದಾರಿಯ ಮೂಲಕ ಸಾಗಿದರೆ ಮಾತ್ರವೇ ಪಂಜಾಬಿನ ಕ್ಷೋಭೆಗೆ ಸೂಕ್ತ ಪರಿಹಾರ ದೊರೆತೀತು. ಕೇಂದ್ರದ ವಿಳಂಬ ಧೋರಣೆ ಬೆಳೆಯುತ್ತಲೇ ಹೋದರೆ ಪಂಜಾಬಿನ ಸಿಕ್ಖರು ಹೆಚ್ಚು ಹೆಚ್ಚಾಗಿ ಉಗ್ರವಾದಿಗಳೊಂದಿಗೆ ಶಾಮೀಲಾಗುವ, ಅವರಿಗೆ ನೆರವಾಗುವ ಹಾಗೂ ಅವರಿಗೆ ಸಹಾನುಭೂತಿ ವ್ಯಕ್ತಪಡಿಸುವ ವಿದ್ಯಮಾನಗಳು ನಡೆಯುತ್ತಲೇ ಇರುತ್ತವೆ. ಪಂಜಾಬಿನ ಸಮಸ್ಯೆಯನ್ನು ಅನುಕೂಲಕ್ರಮವಾಗಿ ಬಗೆಹರಿಸಬೇಕು; ಅದಕ್ಕೆ ರಾಜಕೀಯ ಮುತುವರ್ಜಿ ಬೇಕು. ಅಂಥ ಪರಿಹಾರ ಆಗದ ಹೊರತು ಈ ಕ್ಷೋಭೆ ನಿಲ್ಲದು. ಅದನ್ನೇ ಪಂಜಾಬಿನಲ್ಲಿ ದಿನ ದಿನವೂ ನಡೆಯುತ್ತಿರುವ ಘಟನೆಗಳು ಹೇಳುತ್ತಿವೆ.

ಆದಾಯಕರ ಹಾಗೂ ವೇತನದಾರರು

ಪ್ರಿಯರೆ,

ಇತ್ತೀಚಿನ ವರ್ಷಗಳಲ್ಲಿ ಬೆಲೆಏರಿಕೆಯಿಂದಾಗಿ ಅತೀ ಹೆಚ್ಚು ತೊಂದರೆಗೊಳಗಾದ ವರ್ಗವೆಂದರೆ ವೇತನದಾರರು. ಹಾಗೆ ಪಾವತಿಯಲ್ಲೂ ಪ್ರಾಮಾಣಿಕರಾಗಿರುವ ಈ ನೌಕರರ ಮೇಲೆ ಬೀಳುವ ತೆರಿಗೆಯ ಹೊರೆಯು ದುರ್ಭರ.

1987-88ರ ಮುಂಗಡ ಪತ್ರವನ್ನು ಫೆಬ್ರವರಿ 28ರಂದು ಪಾರ್ಲಿಮೆಂಟಿನಲ್ಲಿ ಮಂಡಿಸುವಾಗ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಆದಾಯ ಕರದ ವಿನಾಯತಿಯ ಮಿತಿಯನ್ನು ಕಳೆದ ವರ್ಷದ ರೂ. 18,000ದಷ್ಟೇ ಇಟ್ಟದ್ದರಿಂದ ವೇತನದಾರರಿಗೆ ಅನ್ಯಾಯವಾಗಿದೆ. ಕಳೆದ ವರ್ಷದ ಕೊರತೆ ಹಣದ ಮೊತ್ತವೇ ರೂ. 8,285 ಕೋಟಿ ಇರುವಾಗ ಈ ವರ್ಷ ರೂ. 5,688 ಕೋಟಿಯಷ್ಟು ಕೊರತೆಯು ಪ್ರಸ್ತಾಪ ನೌಕರರನ್ನು ಇನ್ನಷ್ಟು ಗಾಬರಿಗೊಳಿಸಿದೆ. ಏಕೆಂದರೆ ಕೊರತೆ ಹಣದ ಸೃಷ್ಟಿಯಿಂದಾಗಿ ಬೆಲೆಗಳು ಇನ್ನಷ್ಟು ಮೇಲಕ್ಕೇರುವುದು ಖಂಡಿತ. ಒಂದೆಡೆ ಕೊಳ್ಳುವ ಶಕ್ತಿ ಕುಸಿದು ಕಷ್ಟಕೋಟಲೆಗೊಳಗಾಗಿರುವ ವೇತನದಾರರು ಇನ್ನೊಂದೆಡೆ ಆದಾಯಕರದ ಆಘಾತಕ್ಕೆ ಒಳಗಾಗುತ್ತಿದ್ದಾರೆ. ಆದುದರಿಂದ ಆದಾಯಕರದ ವಿನಾಯತಿಯ ಮಿತಿಯನ್ನು ಕನಿಷ್ಠ ರೂ. 25000ಕ್ಕಾದರೂ ಏರಿಸುವುದು ಅತ್ಯಗತ್ಯ.

ಕಳೆದ ಕೆಲವು ವರ್ಷಗಳಲ್ಲಿ ಶ್ರೀಮಂತ ವರ್ಗಕ್ಕೆ ಕೇಂದ್ರ ಸರಕಾರ ಹಲವಾರು ರಿಯಾಯತಿಗಳನ್ನು ತೋರಿಸಿದೆ. ಎಸ್ಟೇಟ್ ಡ್ಯೂಟಿಯನ್ನು ರದ್ದುಗೊಳಿಸಿದ್ದಾರೆ. ಎಮ್ ಆರ್ ಟಿ ಪಿ ಕಾಯ್ದೆಯ ಮಿತಿಯನ್ನು ರೂ. 20 ಕೋಟಿಯಿಂದ ರೂ. 100 ಕೋಟಿಗೇರಿಸಿ ಗುತ್ತೇದಾರಿ ಬಂಡವಾಳಶಾಹಿಗಳಿಗೆ ಐದು ಪಟ್ಟು ಹೆಚ್ಚು ರಿಯಾಯತಿ ತೋರಿಸಿರುವ ಸರಕಾರ ಆದಾಯ ಕರದ ಮಿತಿಯನ್ನು ರೂ. 25,000ಕ್ಕಾದರೂ ಏರಿಸಬೇಕಿತ್ತಲ್ಲವೆ?

ಕೆಲವು ತಿಂಗಳ ಹಿಂದೆ ಸಂಸತ್ತಿನಲ್ಲಿ ಮಾತನಾಡುತ್ತಾ ಹಣಕಾಸು ಖಾತೆಯ ರಾಜ್ಯ ಸಚಿವ ಜನಾರ್ಧನ ಪೂಜಾರಿಯವರು ನೌಕರರಿಗೆ ಕೊಡುವ ತುಟ್ಟಿ ಭತ್ಯೆಯು ಬೆಲೆಯೇರಿಕೆಗಾಗಿ ಕೊಡುತ್ತಿರುವುದರಿಂದ ತುಟ್ಟಿಭತ್ಯೆಯನ್ನೇ ಆದಾಯಕರದಿಂದ ಹೊರತುಪಡಿಸಬೇಕೆಂದು ಹೇಳಿದಾಗ ನೌಕರರಲ್ಲಿ ಆಶಾಭಾವನೆ ಅಂಕುರಿಸಿತ್ತು. ಮುಂಗಡ ಪತ್ರದಲ್ಲಿ ಅದರ ಪ್ರಸ್ತಾಪವೇ ಇಲ್ಲದಿರುವುದು ತೀವ್ರ ಭ್ರಮನಿರಸನಕ್ಕೆ ಎಡೆಮಾಡಿದೆ. ಆದುದರಿಂದ ಕೇಂದ್ರ ವಿತ್ತ ಖಾತೆ ತಮ್ಮ ಹೇಳಿಕೆಗಳನ್ನು ಪ್ರಾಮಾಣಿಕವಾಗಿ ಕೃತಿಗಿಳಿಸುವ ಅವಶ್ಯಕತೆ ತೀವ್ರವಾಗಿ ಇದೆ.

ಆದಾಯಕರ ಕಾನೂನಿನ ಪ್ರಕಾರ ಜೀವವಿಮಾ ಪ್ರೀಮಿಯಂ, ಪ್ರಾವಿಡೆಂಟ್ ಫಂಡ್ ಮುಂತಾದ ಉಳಿತಾಯಗಳಿಗೆ ರೂ. 6,000ದ ವರೆಗೆ ಮಾತ್ರ ಪೂರ್ತಿ ವಿನಾಯತಿ ಇದೆ. ದೇಶಕ್ಕೆ ಮತ್ತು ಅರ್ಥಿಕತೆಗೆ ಉಳಿತಾಯದ ಅವಶ್ಯಕತೆ ತುಂಬಾ ಇರುವುದರಿಂದ ಉಳಿತಾಯ ಎಷ್ಟಿದ್ದರೂ ಸ್ವಾಗತಾರ್ಹ. ಅದಕ್ಕೆ ಮಿತಿಯನ್ನು ಹಾಕದೆ ಪೂರ್ತಿ ಉಳಿತಾಯದ ಮೊತ್ತಕ್ಕೆ ಪೂರ್ಣ ಆದಾಯಕರ ವಿನಾಯತಿ ದೊರೆಯುವಂತೆ ಕೇಂದ್ರ ಸರಕಾರ ಮಾಡಬೇಕು.

ಮನೆ ಕಟ್ಟುವುದಕ್ಕೆ ಪ್ರೋತ್ಸಾಹರೂಪವಾಗಿ ಕೇಂದ್ರ ಸರಕಾರ ತಡವಾಗಿಯಾದರೂ ಕೆಲವು ರಿಯಾಯತಿಗಳನ್ನು ತೋರಿಸಿರುವುದು ಸ್ವಾಗತಾರ್ಹ. ಆದರೆ ಈ ರಿಯಾಯತಿಗಳು 1987ರ ಮಾರ್ಚ್ 31ರ ನಂತರದ ಹೊಸ ಮನೆಗಳಿಗೆ ಮಾತ್ರ ಅನ್ವಯಿಸಿರುವುದು ಸರಿಯಲ್ಲ. ಸ್ವಂತ ಮನೆ ಕಟ್ಟಲು ಹಿಂದೆ ತೆಗೆದುಕೊಂಡ ಸಾಲದ ಮರುಪಾವತಿ ಹಾಗೂ ಸಾಲದ ಬಡ್ಡಿಯ ಪಾವತಿಗಳಿಗೂ ಆದಾಯ ಕರ ವಿನಾಯತಿಯನ್ನು ಸರಕಾರ ನೀಡಬೇಕು.

ರಾಜೀವ ಗಾಂಧಿಯವರು ನೌಕರರಾಗಿದ್ದಾಗ ವೇತನದಾರರಿಗೆ ಆದಾಯ ಕರವೇ ಇರಬಾರದೆಂದು ಹೇಳಿಕೆ ನೀಡಿದ್ದುಂಟು. ಸ್ವತಃ ತಾವೇ ಹಣಕಾಸು ಖಾತೆಯನ್ನು ನೋಡಿಕೊಳ್ಳುತ್ತಿರುವುದರಿಂದ ರಾಜೀವ ಗಾಂಧಿಯವರು ವೇತನದಾರರಿಗೆ ಈ ರಿಯಾಯತಿಗಳನ್ನು ಈಗಲಾದರೂ ನೀಡುವುದು ಸರಿಯಾದ ಕ್ರಮ.

ಈ ದಿಸೆಯಲ್ಲಿ ಕೇಂದ್ರ ಸರಕಾರವು ಕಾರ್ಯಪ್ರವೃತ್ತವಾಗುವುದೆಂದು ಆಶಿಸಲೆ?

-ಜಿ. ಸುಧಾಕರ ರಾವ್

ವಿಮಾ ನೌಕರರ ಸಂಘ ಉಡುಪಿ ವಿಭಾಗ

ಉಡುಪಿ

ಜನದನಿ

ಎಡಮಂಗಲದಲ್ಲಿ ರೈಲು ನಿಲ್ಲಲಿ

ಪ್ರಿಯರೆ,

1-4-87ರಿಂದ ಮಂಗಳೂರು ಬೆಂಗಳೂರು ನಡುವೆ 'ಮಂಗಳಾ ಎಕ್ಸ್‌ಪ್ರೆಸ್' ರೈಲು ಸಂಚಾರ ಆರಂಭವಾಗಲಿರುವುದಾಗಿ ತಿಳಿದುಬರುತ್ತದೆ. ಈ ರೈಲು ಸಂಜೆ 7 ಗಂಟೆಗೆ ಮಂಗಳೂರು ಬಿಟ್ಟು ಬೆಳಗ್ಗೆ 6 ಗಂಟೆಗೆ ಬೆಂಗಳೂರು ಮುಟ್ಟುತ್ತದೆ. ಅದೇ ರೀತಿ ಆ ಕಡೆಯಿಂದಲೂ ಮಂಗಳೂರಿಗೆ ಅದೇ ರಾತ್ರಿಯಲ್ಲಿ ಪ್ರಯಾಣಿಸುವ ವ್ಯವಸ್ಥೆ ಆರಂಭವಾಗುತ್ತದೆ.

ಆದರೆ ಈ ರೈಲು ಮಂಗಳೂರು, ಬಂಟ್ವಾಳ ಪುತ್ತೂರು ಮತ್ತು ಸುಬ್ರಹ್ಮಣ್ಯ ರೋಡ್‌ನಂತಹ ಮುಖ್ಯ ಸ್ಟೇಶನ್‌ಗಳಲ್ಲಿ ನಿಲ್ಲುವುದೆಂದು ಗೊತ್ತಾಗಿದೆ. ಈ ಸ್ಟೇಶನ್‌ಗಳ ಮಧ್ಯೆ ಒಂದೆರಡು ಮುಖ್ಯ ಹಾಲ್ಟ್ ಸ್ಟೇಶನ್‌ಗಳಿವೆ. ಅವುಗಳಲ್ಲಿ 'ಎಡಮಂಗಲ' ಒಂದಾಗಿದೆ. ದ.ಕ. ಜಿಲ್ಲೆಯ ಹಿಂದುಳಿದ ತಾಲೂಕಾದ ಸುಳ್ಯದಲ್ಲಿರುವ ಗ್ರಾಮ ಇದಾಗಿದ್ದು ಹಿಂದುಳಿದಿದ್ದು ಇದೀಗ ಅಭಿವೃದ್ಧಿ ಹೊಂದುತ್ತಾ ಇದೆ. ಸುಳ್ಯ ತಾಲೂಕಿನ ಈ ಮಾತ್ರ ಗ್ರಾಮದ ಮೂಲಕ ಈ ರೈಲು ಮಾರ್ಗ ಹಾದು ಹೋಗುತ್ತದೆ. ಈ ಊರು ಮತ್ತು ಆಸುಪಾಸಿನ ಗ್ರಾಮಸ್ಥರು ಅನೇಕ ಮಂದಿ ಉದ್ಯೋಗದ ನಿಮಿತ್ತ ದೂರದ ಬೆಂಗಳೂರಿನಲ್ಲಿದ್ದಾರೆ. ವ್ಯವಹಾರಿಕವಾಗಿ ಅನೇಕ ಜನರು ರಾಜ್ಯದ ರಾಜಧಾನಿಗೆ ಹೋಗುತ್ತಿರುತ್ತಾರೆ. ಆದುದರಿಂದ ಅವರಿಗೆ ರೈಲು ಯಾನ ಒಂದು ವರದಾನವಾಗಿದೆ.

ಆದುದರಿಂದ ರೈಲ್ವೇ ಇಲಾಖೆಯ ಹಿರಿಯ ಅಧಿಕಾರಿಗಳು ದಯವಿಟ್ಟು ಎಡಮಂಗಲದಲ್ಲಿ ಎಕ್ಸ್‌ಪ್ರೆಸ್ ರೈಲು ಕೇವಲ 2-3 ನಿಮಿಷ ನಿಲ್ಲುವಂತೆ ಮಾಡಿಸಬೇಕಾಗಿ ಅಪೇಕ್ಷಿಸುತ್ತೇವೆ. ನಮ್ಮ ಊರು ಬಹಳ ಹಿಂದುಳಿದಿದ್ದು ಬಸ್ ಸಂಚಾರ ಅಥವಾ ಇನ್ನಿತರ ಸಾರಿಗೆ ಸೌಲಭ್ಯಗಳಿಂದ ವಂಚಿತವಾಗಿದೆ. ಸರಿಯಾದ ಮಾರ್ಗದ ಸೌಲಭ್ಯ ಕೂಡಾ ಇರುವುದಿಲ್ಲ. ಇದು ಒಂದು ದ್ವೀಪದಂತಿದೆ. ಆದುದರಿಂದ ಇದ್ದ ಒಂದೇ ಒಂದು ಸೌಲಭ್ಯವಾದ ರೈಲು ಯಾನಕ್ಕೆ ಕತ್ತರಿ ಹಾಕದಂತೆ ಗ್ರಾಮಸ್ಥರ ಪರವಾಗಿ ಬೇಡಿಕೊಳ್ಳುವುದಾಗಿದೆ.

ಕೆ. ಆರ್. ಪ್ರಕಾಶ್

ಎಡಮಂಗಲ



ಮುಖ್ಯಪ್ರಾಣ ದೇವಳದ ಬ್ರಹ್ಮಕಲಶೋತ್ಸವ

ಗ್ನಿಯ್ಯ ಅಭಯ ಹಸ್ತ, ಎಡ ದಿಕ್ಕಿಗೆ ಮುಖ ತಿರುಗಿಸಿ ನಿಂತ ನಿಲುವು ಆಕರ್ಷಕವಾಗಿದೆ.

ಕಾಲನ ತುಳಿತಕ್ಕೆ ಸಿಕ್ಕ ದೇವಸ್ಥಾನ ಈಗ ಜೀರ್ಣಾವಸ್ಥೆಯಲ್ಲಿದೆ. ಅದಕ್ಕಾಗಿ ಊರ ಮಹನೀಯರು ಸೇರಿ ದೇವರ ಪುನರ್‌ಪ್ರತಿಷ್ಠೆ ಬ್ರಹ್ಮಕಲಶೋತ್ಸವ ನವೀನ ಗರ್ಭಗುಡಿಯ ರಚನೆಯ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಸುಂದರವಾದ ಗರ್ಭಗುಡಿಯ ರಚನೆ ಈಗಾಗಲೇ ಆಗಿದೆ. ಇನ್ನು ಅನೇಕ ಧಾರ್ಮಿಕ ಕಾರ್ಯಗಳು ಆಗಬೇಕಾಗಿವೆ.

ಬೆಳ್ಳಿಬ್ಬ ಮಧ್ವರಾಯ ಭಟ್ಟರ ನೇತೃತ್ವದಲ್ಲಿ ಎಡನೀರು ಮಠಾಧೀಶರಾದ ಕೇಶವಾನಂದ ಭಾರತಿ ಶ್ರೀಪಾದಂಗಳವರ ದಿವ್ಯ ಹಸ್ತದಿಂದ ಬ್ರಹ್ಮಕಲಶಾಭಿಷೇಕ ಮತ್ತು ದೇವರ ಪುನರ್‌ಪ್ರತಿಷ್ಠೆ ಕಾರ್ಯಕ್ರಮ ಜರಗುವುದು.

ಎಪ್ರಿಲ್ 12 ರಂದು ಬಿಂಬ ಪ್ರತಿಷ್ಠೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಪರ್ಯಾಯಲಕ್ಷ್ಮೀನಾರಾಯಣ ಅಳ್ವ, ಡಾ। ಬಿ.ಎಂ. ಹೆಗ್ಡೆ, ಡಾ। ಬಿ. ಮಾಧವ ಭಂಡಾರಿ ಅವರು ಆಗಮಿಸುವರು.

13 ರಂದು ಬ್ರಹ್ಮಕಲಶಾಭಿಷೇಕ ಕಾರ್ಯಕ್ರಮ ನಡೆಯುವುದು, 14 ರಂದು ಹನುಮಜ್ಜಯಂತಿ ಉತ್ಸವ ಜರಗುವುದು. (ಚಿತ್ರದಲ್ಲಿ ಮುಖ್ಯಪ್ರಾಣ ಮೂರ್ತಿ ಮತ್ತು ದೇವಸ್ಥಾನವನ್ನು ನೋಡಬಹುದು).

ಮರೋಡಿ ಹಲ್ಲೆ ಪ್ರಕರಣ

ವೇಣೂರು ಪೊಲೀಸರ ಮೇಲೆ ಕ್ರಮಕ್ಕೆ ಆಗ್ರಹ

ಬೆಂಗಳೂರು, ಏ. 3–ಬೆಳ್ತಂಗಡಿ ತಾಲೂಕಿನ ಮರೋಡಿ ಗ್ರಾಮದ ಸುಟರೊಟ್ಟು ನಿವಾಸಿ ವೆಂಕ್ರ ಪೂಜಾರಿಯವರ ಪುತ್ರ ಅಣ್ಣಿಪೂಜಾರಿ ಎಂಬವರನ್ನು ವಿನಾ ಕಾರಣ ವೇಣೂರು ಪೊಲೀಸರು ಥಳಿಸಿದ ಪ್ರಕರಣದ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಬೆಳ್ತಂಗಡಿ ಶಾಸಕ ವಸಂತ ಬಂಗೇರ ಅವರು ಸರಕಾರವನ್ನು ಒತ್ತಾಯಿಸಿದರು.

ಇತ್ತೀಚೆಗೆ ವಿಧಾನಸಭೆಯಲ್ಲಿ ಬೇಡಿಕೆ ಮೇಲಿನ ಚರ್ಚೆ ವೇಳೆ ಅವರು ಮಾತನಾಡುತ್ತಿದ್ದರು. ದಿನಾಂಕ 26-1-87ರಂದು ರಾತ್ರಿ ವೇಣೂರು ಪೊಲೀಸ್ ಠಾಣೆಯ ಓರ್ವ ಪೊಲೀಸ್, ಲೋಕೇಶ್ ಎಂಬ [illegible] ಆದ ಪೊಲೀಸ್, ಹಾಗೂ ದೂಜ ಪೂಜಾರಿ ಎಂಬವರ ಮಗ ತಿಮ್ಮ ಪೂಜಾರಿ ಎಂಬುವವರು ಸೇರಿ ಅಣ್ಣಿ ಪೂಜಾರಿಯವರ ಮನೆ ಹೊಕ್ಕು ಥಳಿಸಿದ್ದಲ್ಲದೆ ಅಣ್ಣಿ ಪೂಜಾರಿಯವರ ಪತ್ನಿಯ ಮೇಲೂ ಕೈಮಾಡಿದರೆಂದೂ ಬಂಗೇರ ಲಿಖಿತ ಹೇಳಿಕೆಯಲ್ಲಿ ತಿಳಿಸಿದರು.

ಈ ಪ್ರಕರಣದಲ್ಲಿ ಅಣ್ಣಿ ಪೂಜಾರಿ ಸ್ಮೃತಿ ತಪ್ಪಿಬಿದ್ದರು. ಮಂಗಳೂರು ವೆನ್‌ಲಾಕ್ ಆಸ್ಪತ್ರೆಗೆ ಅವರನ್ನು ಸೇರಿಸಲಾಯಿತು. ಅಣ್ಣಿಪೂಜಾರಿಯವರ ಹೊಟ್ಟೆಯ ಮೂರು ಭಾಗಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡಲಾಗಿದ್ದು ಅವರು ಚಿಂತಾಜನಕ ಸ್ಥಿತಿಯಲ್ಲಿದ್ದಾರೆಂದು ಬಂಗೇರ ವಿವರಿಸಿದರು.

ಈ ಪ್ರಕರಣದಲ್ಲಿ ವೇಣೂರು ಎಸ್.ಐಯವರು ಭಾಗಿಗಳಾಗಿದ್ದು ಅಂದು ರಾತ್ರಿ ಸ್ಟೇಶನ್‌ನಲ್ಲಿ ಕುಡಿದು ವರ್ತಿಸಿದರೆಂದೂ ಅವರ ಬಗ್ಗೆ ಪರಿಸರದಲ್ಲಿ ಹಲವಾರು ದೂರುಗಳಿವೆಯೆಂದೂ ಬಂಗೇರ ತಿಳಿಸಿದರಲ್ಲದೆ ಸರಕಾರ ಕೂಡಲೇ ಈ ಅಧಿಕಾರಿಯನ್ನು ಅಮಾನತಿನಲ್ಲಿರಿಸಿ ಪ್ರಕರಣದ ಬಗ್ಗೆ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದೂ ಒತ್ತಾಯಿಸಿದರು.

ಸದ್ರಿ ಪ್ರಕರಣದ ಬಗ್ಗೆ ಪರಿಶೀಲಿಸಿ ತಕ್ಷಣ ಕ್ರಮಕೈಗೊಳ್ಳುವಂತೆ ಒಳಾಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ಸೂಚಿಸಿರುವುದಾಗಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಬಂಗೇರ ಅವರಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

● ಉಡುಪಿ, ಏ. 3– ಮಲ್ಪೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಚರಿಸುವ ಬಸ್ಸುಗಳಲ್ಲಿ ಟೇಪ್ ರೆಕಾರ್ಡರ್ ಹಾಕಿದ ಬಸ್ಸುಗಳ ಮೇಲೆ ಮಲ್ಪೆ ಠಾಣಾಧಿಕಾರಿ ಮಂಜುನಾಥಯ್ಯ ಮೊಕದ್ದಮೆ ಹೂಡಿದ್ದಾರೆ.

ಏ.6: ಮಂಗ್ಳೂರು ವಿ.ವಿ ಪರೀಕ್ಷೆ ಆರಂಭ

ಮಂಗಳೂರು, ಏ. 3–ಮಂಗಳೂರು ವಿಶ್ವವಿದ್ಯಾಲಯ ಜರಗಿಸುವ ಆರ್ಟ್ಸ್, ವಿಜ್ಞಾನ ಮತ್ತು ವಾಣಿಜ್ಯ ಪದವಿ ಪರೀಕ್ಷೆಗಳು ಈ ಹಿಂದೆ ನಿಗದಿ ಪಡಿಸಲಾದಂತೆ ಎಪ್ರಿಲ್ ತಿಂಗಳ 6ರಂದು ಆರಂಭಗೊಳ್ಳುವುದೆಂದು ವಿಶ್ವವಿದ್ಯಾಲಯದ ಪ್ರಕಟಣೆಯೊಂದು ತಿಳಿಸಿದೆ.

ಚುಡಾಯಿಸಿದವರ ದಸ್ತಗಿರಿ

ಉಡುಪಿ, ಏ. 3 –ಮಾ. 31ರಂದು ನಗರದ ತೆಂಕಪೇಟೆಯಲ್ಲಿ ತರುಣಿಯರನ್ನು ಚುಡಾಯಿಸಿ, ಅಸಭ್ಯವಾಗಿ ವರ್ತಿಸುತ್ತಿದ್ದರೆನ್ನಲಾದ ಅಣ್ಣಯ್ಯ, ಕೃಷ್ಣ ಪೂಜಾರಿ, ಆನಂದ, ರಾಮ ನಾಯ್ಕ, [illegible], ಸುಂದರ ಎಂಬ ಆರು ಜನ ತರುಣರನ್ನು ಕ್ರೈಮ್ ಎಸ್‌ಐ ಕೆ. ಶಿವಯ್ಯನವರು ದಸ್ತಗಿರಿ ಮಾಡಿ ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ.

ಕುಡಿದು ಗಲಾಟೆ ಮಾಡಿದವನ ಬಂಧನ

ಉಡುಪಿ, ಏ. 3–ನಗರದ ಒಳಕಾಡಿನಲ್ಲಿ ಮಾ. 29ರ ರಾತ್ರಿ ಅಮಲು ಪದಾರ್ಥ ಸೇವಿಸಿ, ಅಸಭ್ಯವಾಗಿ ವರ್ತಿಸಿ ಸಾರ್ವಜನಿಕರ ಶಾಂತಿ ಭಂಗ ಮಾಡುತ್ತಿದ್ದ ಸಂತೋಷ್ ಕುಮಾರ್ ಎಂಬಾತನನ್ನು ಟೌನ್ ಎಸ್‌ಐ ಕೆ. ರಮಾನಂದ ರೈ ದಸ್ತಗಿರಿ ಮಾಡಿ, ಆತನ ಮೇಲೆ ಮೊಕದ್ದಮೆ ದಾಖಲುಮಾಡಿಕೊಂಡಿದ್ದಾರೆ.

ಲೈಫ್‌ಬಾಯ್ ಎಲ್ಲಿದೆಯೋ, ಅಲ್ಲಿದೆ ಆರೋಗ್ಯ!

ಲೈಫ್‌ಬಾಯ್
ಕೊಳೆಯಲ್ಲಿರುವ ಕ್ರಿಮಿಗಳನ್ನು ತೆಗೆದುಬಿಡುತ್ತದೆ.

ಹಿಂದುಸ್ತಾನ್ ಲೀವರ್ ಅವರ ಉತ್ಕೃಷ್ಟ ಉತ್ಪಾದನೆ

LINTAS L 98 203 KN

ಮುಂಗಾರು

ಶನಿವಾರ, ಏಪ್ರಿಲ್ 4, 1987

ಅರಣ್ಯ ಹೋಮದ ಹವಿರ್ಭಾಗ ಯಾರ್ಯಾರಿಗೆ ?

ದಕ್ಷಿಣ ಕನ್ನಡ ಜಿಲ್ಲೆಯ ಕಾಡುಗಳು ಹೊತ್ತಿ ಉರಿಯುತ್ತಿವೆ. ಪಶ್ಚಿಮ ಘಟ್ಟದ ಸೆರಗಿನುದ್ದಕ್ಕೂ ಕಾಳ್ಗಿಚ್ಚು ಹಬ್ಬಿದೆ. ಅಮೂಲ್ಯವಾದ ಮರಮಟ್ಟುಗಳನ್ನೂ ಸಸ್ಯರಾಶಿಯನ್ನೂ ನುಂಗಿನೊಣೆಯುತ್ತಿದೆ. ಇದು ಮಾಮೂಲಿ ವಿದ್ಯಮಾನವಲ್ಲ; ವಿಶೇಷವಾದದ್ದು. ಹಿಂದೆಂದೂ ಹೀಗಾಗಿದ್ದಿಲ್ಲ. ಪ್ರತಿವರ್ಷ ಎಲ್ಲೋ ಹತ್ತಾರು ಎಕ್ರೆ ಕಾಡು ಕಿಚ್ಚಿಗೆ ಆಹುತಿಯಾಗುತ್ತಿದ್ದರೆ ಈ ಬಾರಿ ಸಾವಿರಾರು ಎಕ್ರೆಗಳು ದಾವಾನಲದಲ್ಲಿ ಬೆಂದು ಬೂದಿಯಾಗುತ್ತಿವೆ. ಸುಬ್ರಹ್ಮಣ್ಯ, ಪಂಜ, ಬೆಳ್ತಂಗಡಿ, ಉಪ್ಪಿನಂಗಡಿ ಹಾಗೂ ಪುತ್ತೂರು ವಲಯಗಳಲ್ಲಿ ಹೆಚ್ಚಿನೆಲ್ಲಾ ಕಾದಿಟ್ಟ ಅರಣ್ಯಗಳು ಹೊತ್ತಿ ನಾಶವಾಗುತ್ತಿವೆ.

ಕಾಡು, ನಾಡಿನ ಅಮೂಲ್ಯ ಸಂಪತ್ತು. ಅರಣ್ಯವು ಮನುಷ್ಯನ ಬಾಳ್ವೆಗೆ ಹೇಗೆ ಆಶ್ರಯ ಕೊಡುತ್ತದೆ ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ. ಭೂಮಿಯ ಮಣ್ಣನ್ನು ಸತ್ವಶಾಲಿಯನ್ನಾಗಿ ಮಾಡುವುದಲ್ಲದೆ, ಈ ಸತ್ವವುಳ್ಳ ಮಣ್ಣನ್ನು ಉಳಿಸಿಕೊಳ್ಳುವುದಕ್ಕೆ ಕಾಡಿನ ಕವಚವು ಸಹಾಯ ಮಾಡುತ್ತದೆ. ಈ ಶತಮಾನದ ಆದಿಯಲ್ಲಿ ದೇಶದ ಸುಮಾರು ಮೂರನೇ ಒಂದಂಶದಷ್ಟಿದ್ದ ಅರಣ್ಯವು ಸದ್ಯ ಸುಮಾರು ಹತ್ತನೇ ಒಂದಂಶಕ್ಕೆ ಇಳಿದಿದೆ. ಕಾದಿಟ್ಟ ಅರಣ್ಯಗಳು ಮಾತ್ರ ದೇಶದ ಕೆಲವೇ ತಾಣಗಳಲ್ಲಿ ಬಾಕಿ ಉಳಿದಿವೆ. ಉಳಿದುವೆಲ್ಲಾ ನಾಶವಾಗಿವೆ. ಹಿಮಾಲಯದ ತಪ್ಪಲಲ್ಲಿ ದಟ್ಟವಾಗಿ ಹರಡಿದ್ದ ಸಸ್ಯರಾಶಿ ನಾಶವಾಗಿ ಬೆಂಗಾಡಿನಂತಾಗಿದೆ.

ದೇಶದಲ್ಲಿ ಅರಣ್ಯವು ಉಳಿದಿರುವ ಕೆಲವೇ ಕೆಲವು ತಾಣಗಳಲ್ಲಿ ದಕ್ಷಿಣ ಹಾಗೂ ಉತ್ತರ ಕನ್ನಡ ಪ್ರಮುಖವಾದವುಗಳು. ಪಶ್ಚಿಮಘಟ್ಟದ ಶ್ರೇಣಿಯಲ್ಲಿರುವ ದಟ್ಟವಾದ ಹರಿದ್ವರ್ಣದ ಕಾಡು ಅತ್ಯಂತ ಹೆಸರುವಾಸಿಯಾದದ್ದು. ಸಸ್ಯರಾಶಿ, ಮೃಗಪಕ್ಷಿ ಸಂಕುಲ ಹಾಗೂ ಅತ್ಯುತ್ತಮ ಮರಮಟ್ಟುಗಳ ಗಣಿಯೇ ಆಗಿದೆ. ಈ ಸಂಪತ್ತನ್ನು ಉಳಿಸಿಕೊಂಡು ಬೆಳೆಸಬೇಕು. ಅದು ಜೀವನಕ್ಕೆ ಇಂದು ಇಂಬುಕೊಡುತ್ತದೆ. ಜಲಸಂಪತ್ತನ್ನು ರಕ್ಷಿಸುತ್ತದೆ ಎಂದು ವಿಚಾರಶೀಲರಾದವರು ಹೇಳುತ್ತಲೇ ಬಂದಿದ್ದಾರೆ. ಜನಸಾಮಾನ್ಯರೂ ಕೂಡ ಈ ವಿಚಾರವನ್ನು ಮೈಗೂಡಿಸಿಕೊಳ್ಳುತ್ತಿದ್ದಾರೆ. ಅರಣ್ಯ ಸಂರಕ್ಷಣೆಯು ಅನೇಕ ಕಡೆಗಳಲ್ಲಿ ಜನಪರ ಚಳವಳಿಯೇ ಆಗಿದೆ. ಕೊಡಗಿನ ಜನತೆ ತಮ್ಮ ಪ್ರಾಕೃತಿಕ ಸಂಪತ್ತನ್ನು ಉಳಿಸಿಕೊಳ್ಳಲು ಬರಾಪೊಳೆ ಯೋಜನೆಯ ವಿರುದ್ಧ ಕೆಚ್ಚಿನಿಂದ ಎತ್ತಿದ ವಿದ್ಯಮಾನವೇ ನಡೆಯಿತು.

ಆದರೆ ಕಾಡನ್ನು ನುಂಗಿ ಕುಬೇರರಾಗಬಯಸುವ ಜನರ ಒಂದು ಕೂಟವಿದೆ. ಕಾಡುಗಳ್ಳರ ಈ ಕೂಟಕ್ಕೆ ಕಾಡನ್ನು ಕಾಯುವ ಮಂದಿಯ ಕೃಪಾಶ್ರಯವಿದೆ. ಕಾಡನ್ನು ಕಬಳಿಸುವ ಈ ಕಾಯಕ ಗುಟ್ಟಿನಲ್ಲಿಯೂ ಬಹಿರಂಗವಾಗಿಯೂ ನಡೆಯುತ್ತದೆ.

ಕಾನೂನಿನ ರಕ್ಷಣೆಯಡಿಯಲ್ಲಿಯೇ ಸಾವಿರಾರು ಎಕ್ರೆ ಕಾಡನ್ನು ಕಡಿದವರಿದ್ದಾರೆ. ಕಳೆದ ದಶಕದಲ್ಲಿ ಕೊಡಗಿನಲ್ಲಿ ಹೀಗೆ ಕಾಡಿಗೆ ಕಾಡೇ ಮಾಯವಾದದ್ದಿದೆ. ಸರಕಾರವೇ ಜುಜುಬಿ ಕಾಸಿಗೆ ಅರಣ್ಯ ಸಂಪತ್ತನ್ನು ಉದ್ಯಮಪತಿಗಳಿಗೆ ಸೂರೆಕೊಟ್ಟು ಸಮಾಜದ ತಲೆಗೆ ಬೆಂಕಿಯ ಟೊಪ್ಪಿ ಏರಿಸಿದ್ದಿದೆ. ಮೊನ್ನೆ ಮೊನ್ನೆ ಸುಬ್ರಹ್ಮಣ್ಯಕ್ಕೆ ತಂಪು ಕೊಡುವ ಕುಮಾರ ಧಾರೆಯ ದಟ್ಟ ಕಾಡನ್ನು ಕೈಗಾರಿಕೋದ್ಯಮಿಯೋರ್ವರಿಗೆ ಚಿಕ್ಕಾಸಿಗೆ ಗುತ್ತಿಗೆ ಕೊಡುವ ಹುನ್ನಾರು ನಡೆದಿತ್ತು. ಸುಬ್ರಹ್ಮಣ್ಯದ ನಿವಾಸಿಗಳು ಹಾಗೂ ಹಿತಾಕಾಂಕ್ಷಿಗಳು ಮತ್ತು ಪರಿಸರ ಪ್ರೇಮಿಗಳು ಹುಯಿಲೆಬ್ಬಿಸಿದ ಬಳಿಕವೇ ಈ ಪ್ರಯತ್ನವನ್ನು ಅರಣ್ಯ ಇಲಾಖೆಯು ಕೈಬಿಟ್ಟಿತು. ಇಲ್ಲವಾಗಿದ್ದರೆ ಒಂದೆರಡು ವರ್ಷಗಳಲ್ಲೇ ಸುಬ್ರಹ್ಮಣ್ಯದ ಶಿಖರವಾದ ಕುಮಾರಧಾರಾ ಪರ್ವತವು ಹಸಿರು ಕವಚವನ್ನು ಕಳೆದುಕೊಂಡು ಬೋಳುಗುಡ್ಡವಾಗಲಿತ್ತು.

ಕೊಡಲಿಯೇಟನ್ನು ಒಮ್ಮೆ ತಪ್ಪಿಸಿಕೊಂಡ ಈ ವೃಕ್ಷ ರಾಶಿಗೆ ಅದು ಮತ್ತೆ ಮತ್ತೆ ಬೇರೆ ರೂಪದಲ್ಲಾದರೂ ಬೀಳುತ್ತಲೇ ಇದೆ. ಇದೀಗ ಕಿಚ್ಚಿನ ರೂಪದಲ್ಲಿ ಅದು ಬಂದಿದೆ. ಇಲ್ಲಿ ಕಾಳ್ಗಿಚ್ಚು ಹೊತ್ತಿ ಉರಿಯುತ್ತಿರುವಾಗ ಅರಣ್ಯ ಇಲಾಖೆ ಅಧಿಕಾರಿಗಳು ಅಲ್ಲಿ ಬೆಂಗಳೂರಲ್ಲಿ ಮರ್ಗಾಮರ್ಗ ಪ್ರಯತ್ನದಲ್ಲಿ ಮೇಲಧಿಕಾರಿಗಳ ಮುಂದೆಯೋ ಮಂತ್ರಿಗಳ ಮುಂದೆಯೋ ಪಿಟೀಲು ಬಾರಿಸುತ್ತಿದ್ದಾರೆಂಬ ವರದಿಯು ನಮ್ಮ ಅಧಿಕಾರಿಗಳ ಕರ್ತವ್ಯ ಭ್ರಷ್ಟತೆಗೆ ಜ್ವಲಂತ ನಿದರ್ಶನವಾಗಿದೆ. ಇಲ್ಲಿ ಕಾಡಿಗೆ ಬಿದ್ದ ಬೆಂಕಿಯನ್ನು ನಂದಿಸುವುದಕ್ಕೆ ಕಾರ್ಯಾಚರಣೆ ಕೈಗೊಳ್ಳದೆ ಬೇರೆಲ್ಲೋ ಬೇರೇನನ್ನೋ ಮಾಡುತ್ತಾ ಕೂತಿರುವುದು ಕಾಡುಗಳ್ಳರೊಡನೆ ಈ ಮಂದಿಯೂ ಶಾಮೀಲಾಗಿ ಈ ಅರಣ್ಯ ಹೋಮದ ಹವಿರ್ಭಾಗವನ್ನು ಮೆಲ್ಲುವವರೆಂಬುದನ್ನು ಸಾಬೀತುಪಡಿಸುತ್ತದೆ.

ಗಡಿವಿವಾದ ಪರಿಹಾರಕ್ಕೆ ಕೇಂದ್ರದ ಪ್ರಯತ್ನ?

ಪ್ರಿಯರೆ,

ಭಾಷಾವಾರು ರಾಜ್ಯಗಳ ವಿಂಗಡಣೆ ಮುಗಿದ ನಂತರ ಕರ್ನಾಟಕ ಸರಕಾರದೊಡನೆ ನಿರಂತರವಾಗಿ ಗಡಿ ಸಮಸ್ಯೆ ಬೆಳೆದು ಬಂದಿದೆ. ಈ ಬಗ್ಗೆ ಚರ್ಚಿಸಲು ಇತ್ತೀಚೆಗೆ ಪ್ರಧಾನ ಮಂತ್ರಿಗಳು ಆಸಕ್ತರಾಗಿದ್ದಾರೆನ್ನಲಾಗಿದೆ. ಈ ಹಿನ್ನೆಲೆಯಲ್ಲಿ ನಾನು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಪತ್ರ ಒಂದನ್ನು ಬರೆದಿರುತ್ತೇನೆ. ಅದರ ವಿವರಗಳು ಈ ಕೆಳಗಿನಂತಿದೆ—

ಮಹಾರಾಷ್ಟ್ರ–ಕರ್ನಾಟಕ ಗಡಿವಿವಾದ ಪರಿಹಾರಕ್ಕೆ ಕೇಂದ್ರ ಸರ್ಕಾರ ಕೈಹಾಕುವುದೆಂದೂ ಆ ಕುರಿತು ಮಾತುಕತೆ ನಡೆಸಲು ಮಹಾರಾಷ್ಟ್ರದ ಮುಖ್ಯಮಂತ್ರಿಗಳನ್ನು ದೆಹಲಿಗೆ ಕರೆಯಲಾಗಿದೆಯೆಂದೂ ಇತ್ತೀಚಿನ ದಿನ ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ. ಮೂವತ್ತು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಈ ವಿವಾದವನ್ನು ಕೇಂದ್ರ ಸರ್ಕಾರ ಕೈಹಾಕಿ ಪರಿಹರಿಸುವುದು ಅತ್ಯಂತ ಸ್ವಾಗತಾರ್ಹವೇ ಆಗಿದೆ.

ಕೇಂದ್ರ ಸರ್ಕಾರದಿಂದ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಗೆ ಬಂದಂತೆ, ತಮಗೂ ಪತ್ರ ಬರಲೇ ಬೇಕಾಗಿದೆ. ಹಾಗೆ ಬರುವ ಸಂದರ್ಭದಲ್ಲಿ ಕರ್ನಾಟಕಕ್ಕೆ ಕೇರಳದೊಂದಿಗೆ ಇರುವ ಗಡಿ ವಿವಾದವನ್ನು ತಾವು ಕೇಂದ್ರ ಸರ್ಕಾರದ ಮುಂದಿಟ್ಟು, ಕಾಸರಗೋಡು ಪ್ರಶ್ನೆಯನ್ನು ನ್ಯಾಯವಾದ ರೀತಿಯಲ್ಲಿ ಪರಿಹರಿಸಬೇಕಾಗಿಯೂ, ಪರಿಹರಿಸುವುದಾಗಿಯೂ ವಿನಂತಿಸುತ್ತೇನೆ. ಹಾಗೂ ಭರವಸೆಗೊಂಡಿದ್ದೇನೆ.

ಈ ಸಂದರ್ಭದಲ್ಲಿ, ಕೇಂದ್ರ ಸರಕಾರವೇ ನೇಮಿಸಿದ ಮಹಾಜನ ಆಯೋಗ, ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಶಿಫಾರಸು ಮಾಡಿರುವ ವಿಷಯವನ್ನು ಪುನಃ ತಮ್ಮ ಗಮನಕ್ಕೆ ತರಲು ಆಶಿಸುತ್ತೇನೆ.

ಕೇರಳದಲ್ಲಿ ವಾಮ ಪಂಥೀಯ ಪ್ರಜಾಪ್ರಭುತ್ವ ಸರ್ಕಾರ ಸದ್ಯ ಅಧಿಕಾರದಲ್ಲಿರುವುದರಿಂದ, ಆ ಸರ್ಕಾರದೊಡನೆ ಮಾತುಕತೆಗೆ ತಮಗೂ ಪರಿಸ್ಥಿತಿ ಅನುಕೂಲಕರವಾಗಬಹುದೆಂದು ಭಾವಿಸುತ್ತೇನೆ. ಆ ಸರ್ಕಾರದ ಪ್ರಮುಖ ಘಟಕವಾದ ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಇ.ಎಂ.ಎಸ್. ನಂಬೂದಿರಿಪಾದರು, ರಾಜ್ಯ ಪುನರ್ ರಚನೆಗಿಂತ ಮೊದಲೂ, ಆಮೇಲೆಯೂ ಹಲವಾರು ಸಲ ಕಾಸರಗೋಡು ಕರ್ನಾಟಕದ್ದೆಂದು ಅಭಿಪ್ರಾಯ ಪಟ್ಟಿರುವುದನ್ನು ನೆನಪಿಸಲು ಬಯಸುತ್ತೇನೆ.

ತಮ್ಮ ಮುಂದಾಳುತನದಲ್ಲಿ ಕಾಸರಗೋಡು ಪ್ರಶ್ನೆ ಪರಿಹಾರವಾಗಲಿ ಎಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ.

—ಕಯ್ಯಾರ ಕಿಞ್ಞಣ್ಣ ರೈ

ಸದಸ್ಯ: ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ

ಕಾಸರಗೋಡು

ಜನಧ್ವನಿ

ತುಳುಕೂಟದ ಔದಾಸೀನ್ಯವೇ?

ಪ್ರಿಯರೆ,

ತುಳು ನಾಡಿನಲ್ಲಿ ಈಗಾಗಲೇ ತುಳು ಭಾಷೆಯ ಬಗ್ಗೆ ಬೇಕಾದಷ್ಟು ಚರ್ಚೆಗಳು ನಡೆಯುತ್ತಾ ಬಂದಿದ್ದು ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ಜಿಲ್ಲೆಯಾಗಿ ನಾಮಕರಣ ಮಾಡಬೇಕೆಂದು ಈಗಾಗಲೇ ಹಲವು ವ್ಯಕ್ತಿಗಳು ವೃತ್ತ ಪತ್ರಿಕೆಯಲ್ಲಿ ಬೇಕಾದಷ್ಟು ಲೇಖನಿಯನ್ನು ಓಡಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ತುಳು ಭಾಷೆಯ ಬಗ್ಗೆ ರೂವಾರಿಯಾಗಿದ್ದು ತುಳು ಭಾಷೆಯನ್ನು ಮುಂದುವರಿಸಿ ಅಭಿವೃದ್ಧಿ ಸಾಧಿಸುವಲ್ಲಿ "ತುಳು ಕೂಟ" ಜಿಲ್ಲಾ ಸಂಸ್ಥೆ ಏಕ ಮೇವಾ ದ್ವಿತೀಯವಾಗಿದೆ. ಆದರೆ ಇತ್ತೀಚೆಗೆ ತುಳುಕೂಟಕ್ಕೆ ಕುಂಭಕರ್ಣ ನಿದ್ರಾವಸ್ಥೆಯೇ ? ಇತ್ತೀಚೆಗೆ ಕೆಲವು ವರ್ಷಗಳಲ್ಲಿ ಈ ಸಂಸ್ಥೆಯು ಜಿಲ್ಲಾ ಮಟ್ಟದ ತುಳು ನಾಟಕ ಸ್ಪರ್ಧೆಯನ್ನು ಜಿಲ್ಲಾ ಕೇಂದ್ರದಲ್ಲಿ ನಡೆಸುತ್ತಿದ್ದು, ಜಿಲ್ಲೆಯ ವಿವಿಧ ಭಾಗಗಳಿಂದ ನಾಟಕ ತಂಡಗಳು ಬಂದು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಿದ್ದರು.

ಅದರಲ್ಲಿ ಸಾಮಾಜಿಕ, ನವ್ಯ ಹಾಗೂ ಎರಡು ಸಮ್ಮಿಶ್ರವಾಗಿರುವ ನಾಟಕಗಳೂ ಪ್ರದರ್ಶಿಸಲ್ಪಡುತ್ತಿದ್ದುವು. ಆದರೆ ಈ ವರ್ಷ ಮಾರ್ಚ್ ತಿಂಗಳು ಮುಗಿಯುತ್ತಾ ಬಂದರೂ ಸ್ಪರ್ಧೆಯ ಬಗ್ಗೆ ವಿವರಗಳು ಲಭ್ಯವಾಗಿಲ್ಲ. ನಮ್ಮೆಲ್ಲರ ಹೆಮ್ಮೆಯ ಸಂಸ್ಥೆಯಾದ ತುಳುಕೂಟವು ಯಾಕೆ ಉದಾಸೀನವಾಯಿತು ? ಅಥವಾ ನಮ್ಮ ಜಿಲ್ಲೆಯಲ್ಲಿ ಮಾತೃಭಾಷೆಯ ಅಭಿಮಾನಿಗಳಿಗೆ ಕೊರತೆಯೇ ? ಸರಕಾರದಿಂದ ಪ್ರೋತ್ಸಾಹವಿಲ್ಲದೇ ? ಹೊಸ ಪದಾಧಿಕಾರಿಗಳ ಔದಾಸೀನ್ಯವೇ? ಯಾವುದಿದ್ದರೂ ಅದನ್ನೆಲ್ಲ ಸುಧಾರಿಸಿ ಕೊಂಡು ಭಾಷಾಭಿವೃದ್ಧಿಗೆಂದೇ ಹುಟ್ಟಿಕೊಂಡ ಈ ಸಂಸ್ಥೆ ಈ ಸ್ಪರ್ಧೆಯನ್ನು ನಿಲ್ಲಿಸದೆ ಮುಂದುವರಿಸಿಕೊಂಡು ಹೋಗಬೇಕೆಂದು ನಮ್ಮೆಲ್ಲರ ಆಕಾಂಕ್ಷೆ ಹಾಗೂ ಅದಕ್ಕೆ ಪ್ರೋತ್ಸಾಹ ಖಂಡಿತ ದೊರಕುತ್ತದೆ.

'ಕೇದಿ'

ಬಂಟ್ವಾಳ

ನಾಡಕಚೇರಿ ಮಾವಿನ ಕುರ್ವೆಯಲ್ಲೇ ಇರಲಿ

ಪ್ರಿಯರೆ,

ಕೆಲ ತಿಂಗಳಹಿಂದೆ ಹೊನ್ನಾವರ ತಾಲೂಕಿನ ಪ್ರಥಮ ನಾಡ ಕಚೇರಿ 'ಮಾವಿನ ಕುರ್ವೆ'ಯಲ್ಲಿ ಆರಂಭಗೊಂಡಿರುವುದು ಸ್ವಾಗತಾರ್ಹ ವಿಚಾರ. ಆದರೆ ಅಧಿಕ ಜನಸಂಖ್ಯೆ ಹೊಂದಿ, ಸೌಲಭ್ಯಗಳಲ್ಲಿ ಹಿಂದುಳಿದಿರುವ ಮಾವಿನಕುರ್ವೆಯ ನಾಡಕಚೇರಿಯನ್ನು ಕೆಲಸ್ವಾರ್ಥಿತ ಹಿತಾಸಕ್ತಿಗಳು ಬೇರೆಡೆಗೆ ವರ್ಗಾಯಿಸುವ ಕುತಂತ್ರದಲ್ಲಿ ನಿರತರಾಗಿರುವುದು ತಿಳಿದು ಬಂದಿದೆ.

ಮಾವಿನಕುರ್ವೆ ಆಸುಪಾಸಿನ ಹಲವಾರು ಹಳ್ಳಿಗಳಿಗೆ ಕೇಂದ್ರಸ್ಥಾನದಲ್ಲಿದ್ದು ಮಂಡಲ ಪಂಚಾಯತ್ ಹಾಗೂ ಜಿಲ್ಲಾ ಪರಿಷತ್ ಸ್ಥಾನಗಳನ್ನೂ ಹೊಂದಿದೆ. ದ್ವೀಪವಾಗಿ ಆಧುನಿಕ ಸೌಲಭ್ಯಗಳಿಂದ ವಂಚಿತವಾಗಿರುವ ಮಾವಿನಕುರ್ವೆಗೆ 'ನಾಡಕಚೇರಿ' ಅವಶ್ಯವೂ, ಅಗತ್ಯವೂ ಆಗಿದೆ. ನಾಡಕಚೇರಿ ಮಾವಿನ ಕುರ್ವೆಯಲ್ಲೇ ಉಳಿಯಬೇಕೆಂಬುದು ಎಲ್ಲರ ಒಕ್ಕೊರಲಿನ ಅಭಿಮತ. ಮಾವಿನಕುರ್ವೆಗೆ ದೊರೆತ 'ನಾಡ ಕಚೇರಿ'ಗೆ ಸರಕಾರ ತಕ್ಷಣ ಸಿಬ್ಬಂದಿ ವರ್ಗವನ್ನು ನಿಗದಿಗೊಳಿಸಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸುವಂತೆ ನಾಗರಿಕರು ಆಗ್ರಹಪೂರ್ವಕ ವಿನಂತಿಸುತ್ತಾರೆ.

ಅಧ್ಯಕ್ಷರು ಹಾಗೂ ಸದಸ್ಯರು

ಶರಾವತಿ ರಿಕ್ರಿಯೇಷನ್ ಕ್ಲಬ್

ಮಾವಿನಕುರ್ವೆ.